# ಅಪರಂಜಿ

ತಿಳಿನಗೆಯ ಕಾರಂಜಿ

ಮೇ 2022




" ಬಟ್ಲರ್ ಥರಾ ಆಡ್ಬೇಕು. ಮರೀಬೇಡಾ "

ಬಿಡಿ ಪ್ರತಿ: ರೂ. 10/-

ಸಂಪಾದಕ ಮಂಡಳಿ

ಸಂಪಾದಕರು

ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು

ಶ್ರೀ ಬೇಲೂರು ರಾಮಮೂರ್ತಿ

ಸದಸ್ಯರು

ಶ್ರೀ ಎಚ್.ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

ಆಡಳಿತ ಮಂಡಳಿ

ಮ್ಯಾನೇಜಿಂಗ್ ಟ್ರಸ್ಟಿ

ಶ್ರೀ ಉಲ್ಲಾಸ ರಾಯಸಂ

ಟ್ರಸ್ಟಿಗಳು

ಶ್ರೀ ಎಂ ಶಿವಕುಮಾರ್

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್

ಶ್ರೀ ವಿ. ಆರ್. ಭರತ್

**ಚಂದಾ ವಿವರ:**

**ಬಿಡಿ ಪ್ರತಿ: ರೂ. 10/-**

**ವಾರ್ಷಿಕ ಚಂದಾ: ರೂ. 100/-**

**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ: ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ.



# ಅಪರಂಜಿ

ತಿಳಿನಗೆಯ ಕಾರಂಜಿ

**ಸಂಪುಟ 39**

**ಸಂಚಿಕೆ – 8**

**ಮೇ– 2022**

## ಈ ಸಂಚಿಕೆಯಲ್ಲಿ.....

| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 2 |
| ನಮ್ಮನಮ್ಮಲ್ಲಿ | ಶಿವಕುಮಾರ್ | 3 |
| ದರ್ಜಿಯ ಮರ್ಜಿಯೂ ...ಅರ್ಜಿಯೂ! | ಜಯಶ್ರೀ ದೇಶಪಾಂಡೆ | 5 |
| ಬಹುರೂಪಿ ವಿದ್ಯಾರ್ಥಿಗಳು | ಗಾಯತ್ರಿ ಮೂರ್ತಿ | 8 |
| ಬದುಕುಂಟೆ ಬೆಳಕಿರದೆ? | ಸಂಧ್ಯಾ ರಮೇಶ್ | 12 |
| ವಿಶ್ವಕೋಶ | ಪಾಲಹಳ್ಳಿ ವಿಶ್ವನಾಥ್ | 17 |
| ಕಲಸುಮೇಲೋಗರ | ಜಿ.ವಿ.ನಿರ್ಮಲ | 22 |
| ಅಮೆರಿಕನ್ ಜಾನಪದ ಲೋಕ | ಶ್ರೀವತ್ಸ ಜೋಶಿ | 25 |
| ಕೊಟ್ಟಿದ್ದು ತನಗೆ, ಬಚ್ಚಿಟ್ಟಿದ್ದು ಪರರಿಗೆ | ಸಹನಾ ಪ್ರಸಾದ್ | 30 |
| ಇಗ್ನೋಬೆಲ್ ಮತ್ತು ನಗ್ನೋಬೆಲ್! | ತುರುವೇಕೆರೆ ಪ್ರಸಾದ್ | 32 |
| ತುಂತುರು | ದನಂಅ | 35 |
| ಅರವತ್ತಕ್ಕೆ ಸ್ಕೈ ಡೈವಿಂಗ್ | ಎಂ.ಎಸ್. ನರಸಿಂಹಮೂರ್ತಿ | 37 |
| ಕೇಳುವುದು ಒಂದು, ... | ಪ್ರಕಾಶ್ ಶೆಟ್ಟಿ | 40 |

ಮುಖಪುಟ : **ಇಂಟರ್‌ನೆಟ್ ಕೃಪೆ**

ವ್ಯಂಗ್ಯ ಚಿತ್ರಗಳು: ಪ್ರಕಾಶ್ ಮೂಲ್ಕಿ, ಆದರ್ಶ ಪೈ

*ಪ್ರಕಾಶಕರು:* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 003. email: koravanjiaparanji@gmail.com ಮೊಬೈಲ್:9845264304

*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು – 560 068. ದೂರವಾಣಿ: 080–26688488. email: beluruRamamurthy@gmail.com

**For Online payment of subscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram

Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

*ಮುದ್ರಣ: ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*



## ಅಪರಂಜಿ ಕಿಡಿ

**●ಪ್ರಕಾಶ್**

ಸರ್ಕಾರೀ ಭೂಮಿ ಗುತ್ತಿಗೆ ಉಲ್ಲಂಘನೆ – ಪತ್ರಿಕೆ

**ಪ್ರಜಾಪ್ರಭುತ್ವ ಎಂದರೆ ಇದೇ ಇರಬೇಕು!**

***

ಕೊಂಕಣ ರೈಲ್ವೆ ; ವಿದ್ಯುದೀಕರಣ ಸಂಪೂರ್ಣ – ಪತ್ರಿಕೆ

**ಮೈಲಾರಕ್ಕೆ ಹೋಗಿ ಬಂದಾರೇನೋ !**

***

ಕೇಂದ್ರದಿಂದ ಜನರ ಜೇಬಿಗೆ ಕತ್ತರಿ – ಡಿಕೆಶಿ

**ಏಕೋ ಹಾಗಲ ಕಾಯಿ ವಾಸನೆ ಬಂದ ಹಾಗಿದೆ**

***

ಗಣಿಗಾರಿಕೆ ; 5300 ಕೋಟಿ ರಾಜ–ಧನ ಸಂಗ್ರಹ – ಸುದ್ದಿ

**ಅಕ್ರಮ – ಸಕ್ರಮದ ವಿರಾಟ್ರೂಪ** ?

***

ಹಿಂಸೆಗೆ ಇಳಿದರೆ ಕ್ರಮ – ಮಾನ್ಯ ಸಿ ಎಂ

**"ಕ್ರಮವೂ" ಹಿಂಸೆ ಆಗದಿರಲಿ !!**

***

ಕೇಂದ್ರೀಯ ವಿದ್ಯಾಲಯ : ರಾಮನವಮಿ ಘರ್ಷಣೆ– ಪತ್ರಿಕೆ

**ಅಯ್ಯೋ ರಾಮ, ರಾಮ !!**

***

ಕಾಶ್ಮೀರ ವಿಷಯ ಪ್ರಸ್ತಾಪಿಸಿದ ನೂತನ ಪಾಕ್ ಪ್ರಧಾನಿ– ಸುದ್ದಿ

**ಕೂಸು ಹುಟ್ಟಕ್ಕಿಲ್ಲ ಆಗಲೇ** ?

***

ಥ್ರೀ ಡೈಮೆನ್ಶನ್ ಮನೆಗಳು; ರೋಬೋಟ್ ಚಮತ್ಕಾರ–ಸುದ್ದಿ

**ಏನಾದರೂ ಸಮಸ್ಯೆ ಆದರೆ ಯಾರು ಜವಾಬ್ದಾರಿ?**

# ನಮ್ಮ ನಿಮ್ಮಲ್ಲಿ

● ಶಿವಕುಮಾರ್

ಅಪರಂಜಿಯ ಪ್ರಾರಂಭದ ದಿನಗಳ ಬರಹಗಾರರನ್ನು ಇಂದಿನ ಓದುಗರಿಗೆ ಪರಿಚಯಿಸುವ ಲೇಖನ ಸರಣಿಯಲ್ಲಿ ಈ ಹಿಂದೆ "ಸೂರಿ" ಎಂಬ ಕಾವ್ಯನಾಮದಡಿ ಬರೆಯುತ್ತಿದ್ದ ಸೂರ್ಯನಾರಾಯಣರ ಬಗ್ಗೆ ತಿಳಿಸಿದ್ದೆ. ಇವರಿಗೂ ಮುಂಚೆ, ಅಂದರೆ ಅಪರಂಜಿಯ ಪ್ರಥಮ ಸಂಚಿಕೆಯಿಂದಲೂ ಬರೆಯುತ್ತಿದ್ದ ಒಬ್ಬ ಪ್ರತಿಭಾವಂತ ಲೇಖಕರೆಂದರೆ ದಿವಂಗತ ಎಂ.ಎಸ್.ಕೆ. ಪ್ರಭು.

ಅಪರಂಜಿಯ ಮೊದಲ ಸಂಚಿಕೆಯಲ್ಲಿ ಪ್ರಭು ಅವರ ಲೇಖನ "ಪುರುಷರ ಹಕ್ಕುಗಳು" ಪ್ರಕಟವಾಗಿತ್ತು. ಆ ದಿನಗಳಲ್ಲಿ ಒಮ್ಮೆ ಅ.ರಾ.ಸೇ. ಭರಮಸಾಗರದಿಂದ ಬೆಂಗಳೂರಿಗೆ ಬಂದಿದ್ದಾಗ ನನ್ನನ್ನು ಬೆಂಗಳೂರಿನ ಆಕಾಶವಾಣಿ ಬಾನುಲಿ ಕೇಂದ್ರಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಕಾರ್ಯಕ್ರಮ ನಿರ್ವಹಣಾ ಅಧಿಕಾರಿಯಾಗಿದ್ದ ಪ್ರಭುರವರನ್ನು ನನಗೆ ಪರಿಚಯಿಸಿದ್ದರು. ಆಗ ಪ್ರಾರಂಭವಾದ ನಮ್ಮಿಬ್ಬರ ಗೆಳೆತನ ಆಪ್ತತೆಗೆ ತಿರುಗಲು ವಿಜ್ಞಾನದ ಬಗ್ಗೆ ನಮ್ಮಿಬ್ಬರಲ್ಲೂ ಇದ್ದ ಗಾಢ ಆಸಕ್ತಿ, ಕುತೂಹಲಗಳೇ ಕಾರಣ ಎನ್ನಬಹುದು. ಜನಪ್ರಿಯ ವಿಜ್ಞಾನದ ಬಗ್ಗೆ ಆ ದಿನಗಳಲ್ಲಿ ಹೊರಬರುತ್ತಿದ್ದ ಅನೇಕ ಹೊಸ ಪುಸ್ತಕಗಳನ್ನು ನಾವಿಬ್ಬರೂ ಪರಸ್ಪರ ವಿನಿಮಯಮಾಡಿಕೊಳ್ಳುತ್ತಿದ್ದುದು ಇಂದಿಗೂ ನೆನಪಿನಲ್ಲಿದೆ.

ಅಪರಂಜಿಗೆ ಪ್ರಭು ಅನೇಕ ಲೇಖನಗಳನ್ನು ನೀಡಿದರು. ಪ್ರಭುರವರ ಹಾಸ್ಯ ಒಂದು ವಿಶಿಷ್ಟ ನಮೂನೆಯದು. ಇದನ್ನು ಪ್ರೌಢಹಾಸ್ಯ ಎನ್ನಬಹುದೇನೋ. ಅವರ ಪುಟ್ಟ ಬರಹ "ಮುಳ್ಳು", ಇದಕ್ಕೆ ಒಂದು ಒಳ್ಳೆಯ ಉದಾಹರಣೆ. ಪಥಿಕನೊಬ್ಬನ ಕಾಲಿಗೆ ಒಮ್ಮೆ ಒಂದು ಮುಳ್ಳು ಚುಚ್ಚಿಕೊಂಡಿತಂತೆ. ನೆಲದ ಮೇಲೆ ಕೂತು ಎಷ್ಟೇ ಪ್ರಯತ್ನಪಟ್ಟರೂ ಮುಳ್ಳು ಮಾತ್ರ ಕೈಗೆ ಸಿಗದೆ ಅಂಗಾಲಿನಲ್ಲಿ ಹೂತುಕೊಂಡು ಬಿಟ್ಟಿತ್ತಂತೆ. ಸ್ವಲ್ಪ ಸಮಯದ ನಂತರ ಮೇಷ್ಟರೊಬ್ಬರು ಅವನ ಹತ್ತಿರ ಹಾದು ಹೋಗುತ್ತಿದುದನ್ನು ನೋಡಿ, ಧೈರ್ಯಮಾಡಿ," ಕಾಲಿಗೆ ಮುಳ್ಳು ಹೊಕ್ಕಿದೆ, ತೆಗೆದು ಉಪಕಾರ ಮಾಡುತ್ತೀರಾ?" ಅಂತ ಕೇಳಿದನಂತೆ. ಅವರು ಕಾಲನ್ನು ಪರೀಕ್ಷಿಸಿ, " ನನ್ನ ಕಣ್ಣು ಮಂಜು, ಅದೂ ಅಲ್ಲದೆ ಕತ್ತಲಾಗಿದೆ. ಮನೆಗೆ ಹೋಗಿ, ನಿಮ್ಮ ಮನೆಯಾಕೆ ಕೈಯಿಂದ ತೆಗೆಸಿಕೊಳ್ಳಿ" ಎಂದು ಉಪದೇಶ ಮಾಡಿದರಂತೆ. ಅವನು ," ನಾನು ಬ್ರಹ್ಮಚಾರಿ" ಎಂದ.

" ಹೌದೇ ಪಾಪ, ಒಂದು ಮುಳ್ಳನ್ನು ತೆಗೆಯಲು ಮತ್ತೆ ಒಂದು ಮುಳ್ಳು ಬೇಕೇಬೇಕು" ಎನ್ನುತ್ತಾ ಮೇಷ್ಟರು ಮುಂದೆ ಸಾಗಿದರಂತೆ.

ಪ್ರಭುರವರ ಬರಹ ಕೇವಲ ಹಾಸ್ಯಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. "ಬಕ", " ಸಿಸೆರೊ" ಮುಂತಾದ ಅದ್ಭುತ ನಾಟಕಗಳು, ಫ್ಯಾಂಟಸಿ ಶೈಲಿಯ ಅನೇಕ ಕಥಾಸಂಕಲನಗಳು ಇವರ ಲೇಖಣಿಯಿಂದ ಮೂಡಿಬಂದಿವೆ. ಖ್ಯಾತ ಸಾಹಿತಿ

ಜಯಂತ ಕಾಯ್ಕಿಣಿಯವರು ಪ್ರಭುರವರ ಬಗ್ಗೆ ಹೀಗೆನ್ನುತ್ತಾರೆ.

"ಕನ್ನಡವೆಂಬ ಸಂವೇದನೆಯನ್ನು ಸೂಕ್ಷ್ಮವಾಗಿ ಹಿಗ್ಗಿಸಿ , ಹೊಸ ಕಿಟಕಿಗಳನ್ನು ದಯಪಾಲಿಸಿದ ಮಹತ್ವದ ಕತೆಗಾರ ಎಂ.ಎಸ್.ಕೆ ಪ್ರಭು ಅವರ ಕತೆಗಳನ್ನು ಓದದೇ ನಮ್ಮ ಪಯಣ ಅಪೂರ್ಣ. ನಮ್ಮ ಕಡೆ 'ಊರಿಗೊಂದ್ ದಾರಿಯಾದ್ರೆ ಪೋರನಿಗೊಂದು ದಾರಿ'– ಅಂತ ಗಾದೆ ಇದೆ. ಈ 'ಪೋರದಾರಿಗಳೇ' ನಿಜಕ್ಕೂ ವಿಶೇಷವಾಗಿರುತ್ತವೆ. ಏಕೆಂದರೆ ಜಾಡನ್ನು ಬಿಟ್ಟಾಗಲೇ ಹೊಸದೊಂದು ಊರು ಸಿಗುವ ಶಕ್ಯತೆ ಇರುತ್ತದೆ. ಇಂಥ ಅಪ್ಪಟ ಹೊಸದಾದ ಅಷ್ಟೇ ಸ್ಪಂದನಶೀಲವಾದ ಒಂದು ಆವರಣದಲ್ಲಿ ನಮಗೆ ಉಸಿರಾಟವನ್ನು ಕಲ್ಪಿಸಿಕೊಟ್ಟ ಪ್ರಭು ಅವರ ಕತೆಗಳನ್ನು ಕೇವಲ 'ಫ್ಯಾಂಟಸಿ' ಎಂದು ಕರೆದುಬಿಟ್ಟರೆ ಅಪಚಾರ ಮಾಡಿದಂತೆ........ಬಗೆ ಬಗೆ ಆಕಾರ ತಾಳುತ್ತಾ ವೇದ್ಯವಾಗುವ ನಿತ್ಯದ ಅನುಭವಜನ್ಯ ವಿವರಗಳ ಮೂಲಕವೇ ನಿರಾಕಾರದೆಡೆಗೆ ಚಲಿಸುವ 'ಕೆಲೈಡೋಸ್ಕೋಪಿಕ್' ಮಾರ್ಗ ಇದು. ಕ್ರಮ ಅನುಕ್ರಮಗಳ ಹಂಗಿಲ್ಲದ, ಭೌತಿಕ ಗಡಿಯಾರದ ಗುಂಗಿಲ್ಲದ ಶುದ್ಧ 'ಕಲ್ಯಾಣ' ದ ಆಲಾಪಗಳು ಇವು. ಈ ಹೆಣಿಗೆಯ ಪ್ರತಿ ಎಳೆಗಳೂ ಸಂಸಾರಸಾಗರದೊಳಗಿನ ಈಜಿನ ಅಲೆಗಳಿಂದಲೇ, ಬಾಳ್ವೆಯ ಘನತೆಗಾಗಿನ ಸಮರಸಂಧಿಗಳಿಂದಲೇ ರೂಹುತಾಳಿ ಬಂದಿವೆ."

1994ರಲ್ಲಿ ಅಪರಂಜಿಯ ಹತ್ತುವರ್ಷದ ಹಬ್ಬವನ್ನು ಆಚರಿಸಿದಾಗ, ಪ್ರಭು ಅದರಲ್ಲಿ ಪಾಲ್ಗೊಂಡು, 'ಹಾಸ್ಯದ ಥರ್ಮೋಡೈನಮಿಕ್ಸ್' ಎಂಬ ಸಟೈರಿಕಲ್ ಪ್ರಬಂಧವೊಂದನ್ನು ಮಂಡಿಸಿದರು. ಆ ಪ್ರೆಸೆಂಟೇಷನ್ ಅಂದಿನ ಹೈಲೈಟ್ ಎನ್ನಬಹುದು. ಪ್ರಭು ಈಗ ನಮ್ಮೊಡನಿಲ್ಲ. ಆದರೆ ಅವರ ತೆಳು ಹಾಸ್ಯ, ವಿನಯಶೀಲತೆ, ಸಂವೇದನೆ ಇವೆಲ್ಲಾ ಅಪರಂಜಿಗೆ ಇಂದಿಗೂ ದಾರಿದೀಪ.

## ನಮ್ಮ (ಅಣಕು) ರಾಮನಾಥರಿಗೆ ಷಷ್ಟಿಪೂರ್ತಿ

ಅಪರಂಜಿಯ ಬರಹಗಾರ ಬಳಗದ ಹಿರಿಯರಲ್ಲೊಬ್ಬರಾದ (ಇರೋರೆಲ್ಲಾ ಹಿರಿಯರೇ ಅಲ್ಲವೇ ಅಂತ ಮೂಗು ಮುರಿಯಬೇಡಿ, ಕಿರಿಯರೂ ನಮ್ಮೊಡನಿದ್ದಾರೆ!) ಎನ್.ರಾಮನಾಥರ ಷಷ್ಠಿಪೂರ್ತಿಯ ಸಂಭ್ರಮವನ್ನು ಅದ್ದೂರಿಯಾಗಿ ಆಚರಿಸಿದ್ದು ಈ ಮಾಸದ ವಿಶೇಷ ಸುದ್ದಿ. ವಿಶ್ವ ಸೇವಾ ಕೇಂದ್ರದವರು ಏಪ್ರಿಲ್ 24ರಂದು ಬಸವನಗುಡಿಯ ನ್ಯಾಷನಲ್ ಕಾಲೇಜಿನ ಸಭಾಂಗಣದಲ್ಲಿ ಏರ್ಪಡಿಸಿದ್ದ ಈ "ರಾಮ್ ಸಂಭ್ರಮ" ದಲ್ಲಿ ರಾಮನಾಥರ ಹಿರಿಯ, ಕಿರಿಯ ಅಭಿಮಾನಿ ಗಳೆಲ್ಲಾ ಸೇರಿ ಅವರ ಹುಟ್ಟು ಹಬ್ಬವನ್ನು ಸಂಭ್ರಮದಿಂದ ಆಚರಿಸಿದರು. ಭುವನೇಶ್ವರಿ ಹೆಗಡೆ, ಕಣ್ಣನ್ ಮಾಮ ಇವರೇ ಮೊದಲಾಗಿ ಅನೇಕ ಖ್ಯಾತ ಹಾಸ್ಯ ಸಾಹಿತಿಗಳು ಅಲ್ಲಿಗೆ ಖುಷಿಯಿಂದ ಬಂದು ರಾಮನಾಥರ ಕೀಟಲೆ ಶಾಸ್ತ್ರ, ಕುತರ್ಕ ಇವುಗಳ ವಿವಿಧ ಮುಖಗಳನ್ನು ಅವಲೋಕಿಸಿ ತಮ್ಮ ತಮ್ಮ ನಗೆನಮನಗಳನ್ನು ನುಡಿಮೂಲಕ ಅರ್ಪಿಸಿದರು. ಕತೆಗಳಲ್ಲಿ ಯಾವ ಕತೆ ಮೇಲು ಎಂಬ ಪ್ರಶ್ನೆಗೆ ರಾಮನಾಥರ ಉತ್ತರ 'ಸಾರ್ಥಕತೆ" . ಅದನ್ನು ರಾಮನಾಥರು ಮಾಡಿ ತೋರಿಸಿದ್ದಾರೆ ಎಂಬುದಕ್ಕೆ ಈ ರಾಮನಾಥೋತ್ಸವವೇ ಸಾಕ್ಷಿ. ಈ ಶುಭ ಸಂದರ್ಭದಲ್ಲಿ ರಾಮನಾಥರಿಗೆ ಮತ್ತು ಅವರ ಕುಟುಂಬ ವರ್ಗದವರಿಗೆ ಭಗವಂತನು ಸಕಲ ಸನ್ಮಂಗಳಗಳನ್ನು ದಯಪಾಲಿಸಲೆಂದು ಅಪರಂಜಿ ಹಾರೈಸುತ್ತಾಳೆ.

■

# ದರ್ಜಿಯ ಮರ್ಜಿಯೂ ನನ್ನ ಅರ್ಜಿಯೂ!

(ಯುಗಾದಿ ವಿಶೇಷಾಂಕಕ್ಕೆ ಆಹ್ವಾನಿತ ಲೇಖನ)

● ಜಯಶ್ರೀ ದೇಶಪಾಂಡೆ

ಆ ದಿನ ಯಾವ ಮಗ್ಗುಲಲ್ಲಿ ಎದ್ದಿದ್ದೆನೋ ಎಂದು ತಡಕಾಡುವಂತೆ ಮಾಡಿದ ಒಂದಿನ. ದಿನವೇನೋ ಮಾಮೂಲಿನಂತೇ ಇತ್ತು. ಸೂರ್ಯ ಜಗತ್ತಿಗೆ ಬಿಸಿಲುಕೋಲು ಬೀಸಿ ಅಲಾರ್ಮ್ ಹೊಡೆದು ತನ್ನ ವಾಹನ ಏರಿ ಹೊರಟಾಗಿತ್ತು.

ದಿನಪತ್ರಿಕೆಯಲ್ಲಿ ಭವಿಷ್ಯ ಹೇಳುವ ಕಾಲಂ ಏನಾದರೂ ನೋಡಿದ್ದರೆ 'ಅನಿರೀಕ್ಷಿತ ಕರೆ' ಅಂತ ಇರ್ತಿತ್ತೋ ಏನೋ?

ಇಷ್ಟೆಲ್ಲ ಪೀಠಿಕೆಗೆ ಅರ್ಹವಾಗಿದ್ದೇ ಆ ಫೋನು!

"ಹಲೋ..ಹಲೋ" ಅಶರೀರವಾಣಿ,

"ಹಲೋ..ಯಾರು ಯಾರು ಮಾತಾಡ್ತಿರೋದು?" ನಾನು.

ಅರೇ, ಹೀಗೂ ಒಂದು ಫೋನು ಬಂದೀತೆಂದು ನಾನು ಕನಸಿನಲ್ಲಾದರೂ ಎಣಿಸಿದ್ದಿಲ್ಲ ಎನ್ನುವುದು ನೂರು ಪ್ರತಿಶತ ಸತ್ಯ.

ಇನ್ನಾರದೂ ಅಲ್ಲ ಫೋನು ನನ್ನ ದರ್ಜಿಯದು.

"ಅದೇ ಮೇಡಮ್ ನಾನು ಟೈಲರ್ ರಾಮಚಂದ್ರ.. ಎಲ್ಲಾ ಬ್ಲೌಸ್ ಸರಿಹೋಗಿವೆಯಾ ಮೇಡಮ್..ಏನಾದರೂ ವ್ಯತ್ಯಾಸ ಆಗಿದೆಯಾ, ಹಾಗೇನಾದರೂ ಇದ್ರೆ ಕೊಡಿ ಮೇಡಮ್ ಸರಿ ಮಾಡ್ಕೊಡ್ತೀನಿ"

ಆ ಕಡೆಯಿಂದ ಅವನು ಮಾತಾಡ್ತಾನೇ ಇದ್ದ ನಾನು ಈಕಡೆ ಅತಿಯಾದ ಶಾಕ್ ನಲ್ಲಿದ್ದೆ. ನನ್ನ ಕಿವಿಗಳನ್ನು ನಂಬಬೇಕಾ/ಬಹುದಾ? ಇದು ಮತ್ತಿನ್ಯಾರದೂ ಅಲ್ಲ, ದರ್ಜಿ ಮಾಡಿದ ಫೋನು! ಇದೇ ಟೈಲರ್ ಕಡೆ ಹೊಲಿಯಲು ಕೊಟ್ಟಿದ್ದ ಆರೂ ಬ್ಲೌಸ್ ಗಳು ಅವತ್ತೇ ಅರ್ಧ ಗಂಟೆಯ ಹಿಂದೆ, ಅವನೇ ಕೊಟ್ಟ ಅಂದಿನದೇ ತಾರೀಕಿಗೆ ತಪ್ಪದೆ ತಯಾರಾಗಿ ನನ್ನ ಬಳಿ ಬಂದು ಕೂತಿದ್ದುವು. ಈಗ ನೋಡಿದರೆ ಅವನೇ ಫೋನು ಮಾಡಿ "ಬಟ್ಟೆ ಸರಿ ಆಯ್ತಾ" ಅಂತಿದ್ದಾನೆ. ಶಾಕ್ ಆಗದಿದ್ರೆ ಇನ್ನೇನಾಗುತ್ತೆ ಅಂತೀರಿ?

ಅಲ್ಲ, ಮಾತಿಗೆ ಹೇಳಬೇಕೆಂದರೆ ನಾನೇ ಆಗಲಿ ನೀವೇ ಆಗಲಿ ದರ್ಜಿಯಿಂದ ಇಂಥದೊಂದು ಫೋನು ಪಡೆಯುವ ಬಗ್ಗೆ ಕನಸಿನಲ್ಲಾದರೂ ಕಂಡಿದ್ದೀವಾ?(ನಿಮ್ಮದು ಅಷ್ಟು ಗೊತ್ತಿಲ್ಲ ಅನ್ಕೊಳ್ಳಿ, ನಂದಂತೂ ಇದೇ..) ನೂರು ಅಂಗಡಿ ತಿರುಗಿ, ಸಾವಿರ ಬಟ್ಟೆ ತಿರುವಿ ಹಾಕಿ ತಂದ ಸೀರೆ, ಚೂಡಿದಾರ್, ಲೆಹೆಂಗಾ ಹೊಲಿಯಲು ಅವನ ಕೈಗೆ ಸಮರ್ಪಿಸಿ ಕೇಳಿದಷ್ಟು ಹೊಲಿಗೆ ಚಾರ್ಜು ಕೊಡುವ ಮಾತು ಕೊಟ್ಟು, ಉದ್ದ ಗಿಡ್ಡ, ಅಗಲ, ತೋಳು, ಡಿಜೈನು ಎಲ್ಲಾ ಆರಿಸಿ ಹೇಳಿ ಅವನ ಬಿಲ್ ಹಿಡ್ಕೊಂಡು ಮನೆಗೆ ಬಂದು ಚಾತಕದ ಹಾಗೆ ಹೊಲಿದ ಬಟ್ಟೆ ಕೈಗೆ ಬರುವುದಕ್ಕಾಗಿ ಕಾಯುತ್ತ ಫಿಂಗರ್ಸ್ ಕ್ರಾಸ್ಡ್ ಇಟ್ಕೊಂಡು ಕೂತು...ಕೂತು.ಕೂತು ಅವನ ಕಾಲ್ ಬರುತ್ತಾ? ಇಲ್ಲ..ಖಂಡಿತ ಇಲ್ಲ. ನೀವೇ ಮಾಡಿ ನೋಡಿ..ಏನಾಗುತ್ತೆ?

"ರೆಡಿ ಮಾಡ್ತಾ ಇದ್ದೀವಿ.. ಇಪ್ಪತ್ನಾಲ್ಕಕ್ಕೆ ಗ್ಯಾರಂಟಿ ಕೊಡ್ತೀನಿ.. ಓಕೆ ಓಕೆ..ಮೇಡಂ

ಕೋಪ ಮಾಡ್ಕೋಬೇಡಿ, ಟ್ವೆಂಟಿಫೋರ್ತ್ ಬಂದ್ಬಿಡಿ.." ನಿಮಗೂ ಗೊತ್ತು ಅವನಿಗೂ ಗೊತ್ತು ಆ ಇಪ್ಪತ್ನಾಲ್ಕು ಯಾವತ್ತು (ಪ್ರತಿ ತಿಂಗಳೂ ಬರುತ್ತೆ...ಬಿಡಿ) ಬರುತ್ತೆ ಅಂತ. ನೀವೀಗ ಕೋಪ ಮಾಡ್ಕೊಂಡಿರೋ..ಅದರ ಪರಿಣಾಮ ನಿಮ್ಮ ಬಟ್ಟೆಯ ಕಟಿಂಗ್ ಮೇಲೆ ಖಂಡಿತ ಆಗುತ್ತೆ!

ಇಂತಿರುವಾಗ, ನನಗಂತೂ ಹಾಂ. ಹೇಳಿದ ದಿನಕ್ಕೇ ಬಟ್ಟೆ ಹೊಲಿದು ನನ್ನ ಕೈಗೆ ಕೊಟ್ಟದ್ದಲ್ಲದೆ, ನನ್ನ ಕ್ಷೇಮಸಮಾಚಾರವನ್ನೇ ಕೇಳಿದಷ್ಟು ಹಿಗ್ಗು ಕೊಟ್ಟದ್ದು ಈ 'ದರ್ಜಿಫೋನ್'!

ಅಲ್ಲ, ಹೀಗೂ ಮಾತಾಡ್ತಾರಾ ದರ್ಜಿಗಳು? ಹಾ! ಕಾಲವೇ ನಿನ್ನ ಮಹಿಮೆ.

ಈ ಮುಂಚೆ ನನಗೆ ಒಬ್ಬ 'ರಾಯಲ್ ಟೈಲರ್' ಇದ್ದ, ಅನೇಕಾನೇಕ ವರ್ಷಗಳಿಂದ ನನ್ನ ಚೂಡಿದಾರ, ಬ್ಲೌಸು, ಸೀರೆ, ಟಾಪು ಹೀಗೆ ಎಲ್ಲಾ ಬಟ್ಟೆಗಳಿಗೂ ಅವನ ಕತ್ತರಿಯ ಭಾಗ್ಯ, ಅವನ ಹೊಲಿಗೆ ಮಶೀನಿನ ಭಾಗ್ಯಗಳು ಸಿಗ್ತಿದ್ದುವು. ಅವನ ನಖರಾಗಳ ಬಗ್ಗೆ ಬರೆದರೆ ಅದೊಂದು ರಾಮಾಯಣ ಮಹಾಭಾರತಗಳ ಉದ್ದವನ್ನು ಮೀರುತ್ತೆ! ಒಂದೇ ಉದಾಹರಣೆ ಕೊಡ್ಲಾ? ಒಂದು ಪ್ಯೂರ್ ಸಿಲ್ಕ್ ಬಟ್ಟೆಯ ಸಿಂಪಲ್ ನಮೂನೆಯ ಬ್ಲೌಸ್ ಹೊಲಿಯೋಕೆ ಕೊಟ್ಟಿದ್ದೆ, ಕೊಟ್ಟಿದ್ದೆನಾ, ಎಂದೋ ಒಮ್ಮೆ ಅದು ತಯಾರಾಗಿ ಬಂದು ನನ್ನ ತಲುಪಿತ್ತು. ಬಿಚ್ಚಿ ನೋಡಿದೆ, ಕಣ್ಣುಗಳನ್ನು – ನನ್ನದೇ ಕಣ್ಣುಗಳನ್ನು ಅಂದುಕೊಳ್ಳಿ–ನಂಬಲಾಗ್ದೆ ನಿಂತೆ. ಅಲ್ಲ ನಾನು ಯಾವಾಗ ಇವನಿಗೆ ದೀಪಿಕಾ "ಪಾದುಕೋನ್" (ಅವಳು ತನ್ನ ಹೆಸರು ಹಾಗೇ ಹೇಳ್ಕೊಂಡಿದ್ದು ನೋಡಿದ ನೆನಪು..ಇರಲಿ) ಥರ ಕಂಡೆ? ಯಾಕೆಂದರೆ ಅವಳದೇ ಸೈಜು, ಅವಳಿಗೊಪ್ಪುವ ಡಿಸೈನ್ ಎಲ್ಲ ಹೊಲಿದು ಅದಕ್ಕೆ ಕೊರಳು, ಕೈ ಬೆನ್ನು ಎಲ್ಲೆಲ್ಲೂ ತನ್ನ ಎಂಬ್ರೈಡರಿಯ ಚಳಕದ ಧಾರಾಳ ಕೊಡುಗೆ ಕೊಟ್ಟಿದ್ದ. ಬೆನ್ನ ಹಿಂದೆ ಭಾರತದ ನಕಾಶೆ ಬಿಡಿಸುವಷ್ಟು ಉದ್ದಗಲದ 'ಜಾಗ' ಕತ್ತರಿಸಿ ಬಿಟ್ಟು ಉಳಿದ ಭಾಗವಿಡೀ ಜರಿಯ ಕಾಂಟ್ರಾಸ್ಟ್ ಕಲರಿನ ಪುಟ್ಟುಟ್ಟ ಹಡಗುಗಳ ಕಸೂತಿ! ಕೈತೋಳು ನನ್ನ ಮೊಳಕೈ ದಾಟಿ ಮೇಲೆ ಚಲಿಸಲೇ ತಯಾರಿಲ್ಲ. ನನ್ನ ತಲೆ ದಿಂ ಅಂತ ತಿರುಗಿದ್ದು ಖರೆ.

ಅನಂತರದ ಪ್ರಹಸನ ಅಂದಿರಾ..? ಬೇಡ ಬಿಡಿ!

ಅಲ್ಲ, ಕಾಲಾನುಕಾಲದಿಂದ ಏನು ನಡೀತಾ ಇದೆ ಹೇಳಿ? ಟೈಲರ್ ಮಹಾಶಯನ ಅವಶ್ಯಕತೆ ಬೀಳದ ಮನೆ ಯಾವುದಾದರೂ ಉಂಟಾ? ಗಂಡಸರಿಗೇನೋ ಕೊಂಚ ವಿನಾಯ್ತಿ ಇದರಿಂದ ಯಾಕೆಂದ್ರೆ ಅವರು ಶಾಪಿಗೆ ಹೋದರೋ ಪ್ಯಾಂಟ್, ಶರ್ಟ್, ಜುಬ್ಬ ಪೈಜಾಮ...ಕೋಟು, ಟ್ರೌಸರು, ಜೀನ್ಸು ಎತ್ತಿಕೊಂಡು ಅಳತೆ ಫಿಟಿಂಗ್ ನೋಡಿದರೋ ಮುಗೀತು. ಬಿಲ್ ಕಟ್ಟಿ ಎತ್ಕೊಂಡು ಬರೋದೇ.(ಹಾಗೆ ಲೇಡೀಸ್ ಗೂ ಈ ಸೌಲಭ್ಯ ಇಲ್ಲಾ ಅ ಅಂದ್ಬಿಟ್ರೆ ನಾ ನರಕಕ್ಕೆ ಹೋಗ್ಲಿಕ್ಕಿಲ್ಲವಾ?)

ಓ ಇದಕ್ಕೆಲ್ಲ ಹತ್ತಿಪ್ಪತ್ತು ಯಾಕೆ, –ಐವತ್ತೇ ಅನ್ಕೊಳ್ಳಿ –ವರ್ಷಗಳ ಇತಿಹಾಸ ಇಲ್ಲದಿಲ್ಲ.

ರೆಡಿ ಮೇಡ್ ಬಟ್ಟೆಗಳು ಹೆಚ್ಚಾಗಿ ಧಾಂಧಲೆ ಎಬ್ಬಿಸಿಲ್ಲದ ಅಂದಿನ ಕಾಲ ಅಂದರೆ ನಮ್ಮಮ್ಮ ಇದ್ದ ಸಮಯ. ಡ್ರೆಸ್ ಬೇಕು ಅಂದರೆ ಅಮ್ಮ –ಆಗೆಲ್ಲ ಕ್ಲಾತ್

ಸ್ಟೋರ್ಸ್ ಅಂತ ಇರ್ತಿದ್ವಲ್ಲ– ಅಲ್ಲಿ ಹೋಗಿ ಥಾನ್ ಎಳೆಸಿ ಮೀಟರ್ ಲೆಕ್ಕದಲ್ಲಿ ಬಟ್ಟೆ ತರೋಳು. ನಾವು ಮೂರು ಜನ ಅಕ್ಕ ತಂಗಿಯರು, ಮೂವರಿಗೂ ಒಂದೇ ಥಾನು ಒಂದೇ ಡಿಜೈನು, ಕಲರಿನ ಬಟ್ಟೆ... ಆಗೆಲ್ಲ ಇದಕ್ಕೆ ತಂಟೆ ಮಾಡೋದೂ ಗೊತ್ತಿರ್ಲಿಲ್ಲ ನಮಗೆ. ಒಂದ್ಸಲ ಹೀಗಾಯ್ತು, ಒಬ್ಬೊಬ್ಬರದೂ ಪ್ರತ್ಯೇಕವಾಗಿ ಕತ್ತರಿಸಿ ಹೊಲಿಯುವ ಕಷ್ಟ ಬೇಡ ಅಂತ ಒಂದರ ಮೇಲೆ ಒಂದು  ಹರವಿ ಹಾಕಿ ನಮ್ಮ ಮೂವರಿಗೂ ಒಂದೇ ಅಳತೆಯ ಬಟ್ಟೆ ಹೊಲಿದಿಟ್ಟುಬಿಟ್ಟಿದ್ದ ಅವನು...ಈಗ ಬ್ರಾಂಡೆಡ್ ಉಡುಪಿನಲ್ಲಿ ಮೀಡಿಯಂ,  ಲಾರ್ಜ್, ಎಕ್ಸೆಲ್ ಅಂತ ಹುಡುಕಿದಾಗ ಅದದೇ ಅವಳಿ ಜವಳಿ ಹತ್ತಿಪ್ಪತ್ತು ಸಿಕ್ಕುಬಿಡೋದಿಲ್ಲವೇ ಹಾಗೆ..ಪುಣ್ಯಕ್ಕೆ ನಮ್ಮ ಮೂವರದೂ ಅಳತೆಯಲ್ಲಿ ಹೆಚ್ಚು ವ್ಯತ್ಯಾಸ ಇಲ್ಲದ್ದಕ್ಕೆ ಹೇಗೋ ಅಡ್ಜಸ್ಟ್ ಮಾಡ್ಕೊಂಡ್ವಿ.

ಸರಿ, ಅಂದಿಗಿಂದಿಗೂ ಬಟ್ಟೆ ತಂದು ಟೈಲರ್ ಅಂಗಡಿಗೆ ಹೋಗಿ ಪಂಜಾಬಿ ಡ್ರೆಸ್ – ನಿಮಗೆಲ್ಲ ಗೊತ್ತಿಲ್ಲದ್ದೇನು? ಚೂಡಿದಾರದ ಪೂರ್ವಜನ್ಮದ ಹೆಸರೇ ಪಂಜಾಬಿ ಡ್ರೆಸ್! ಈಗ ಅನಾರ್ಕಲಿ, ಏ ಲೈನ್, ಸಲ್ವಾರ್ ಸೂಟ್, ಟಾಪ್ ಅಂಡ್ ಟೈಟ್ಸ್ ಹೀಗೆ ಹತ್ತಾವತಾರ ತಾಳಿದರೂ ಮೂಲಜನ್ಮಕ್ಕೆ ಮೋಸವಿಲ್ಲದೆ ಬದುಕಿದ್ದುಇದೇ...


ಯಾವ ಜನ್ಮವಾದರೇನು?  ಏಳರಿಂದ ಎಂಬತ್ತರ ವರೆಗಿನ ಶರೀರಗಳನ್ನು ನಾನಾ ಬಗೆಯಾಗಿ ಅಲಂಕರಿಸುವ ಚೂಡಿದಾರ್ ಮೆಚ್ಚದಿರುವ ಜೀವಿಗಳುಂಟೇ ಪೃಥ್ವಿಯಲ್ಲಿ? ಅದೆಲ್ಲಾ ಅತ್ಲಾಗಿರಲಿ, ನನ್ನ ಜೀನ್ಸ್ ಗಳೆಲ್ಲ ನಾ ಭಾರತ ಬಿಟ್ಟು ಆಚೆ ತೊಲಗಿದಾಗ ನಂಜೊತೆ ಸುತ್ತಲು ಬ್ಯಾಗು ಹೊಕ್ಕು  ಬಂದುಬಿಡ್ತವೆ..ಅದಿಲ್ಲಾ, ಇಲ್ಲೇ ಅಂತಾದರೆ ಚೂಡಿದಾರ, ಲಾಂಗ್ ಸ್ಕರ್ಟ್, ಫಿಟ್ಟಿಂಗ್ ಪಲಾಜೋಸ್ ಮತ್ತೆ ಸೀರೆ, ಇಷ್ಟಾದ್ರೆ ಸಾಕೋ ಸಾಕೆನಗೆ!

ರಾಮಚಂದ್ರ ಅತ್ಲಾಗಿಂದ ಕರೆಯುತ್ಲೇ ಇದ್ದ.."ಮೇಡಮ್.. ಮೇಡಮ್"

ವಚನಬದ್ಧ ರಾಮನ ಸಂತತಿಯವನಿರಬೇಕು ಈ ಹೊಸ ದರ್ಜಿ.ಅಳತೆ ಕೆಡಿಸದೆ ಸರಿಯಾಗಿ ಹೊಲಿದು ಕೊಡಪ್ಪಾ ಅಂದಿದ್ದ ನನ್ನ ಮಾತಿಗೆ 'ಖಂಡಿತ ಮೇಡಂ ನೀವೇ ಒಪ್ಕೋತೀರಿ ನೋಡಿ ಆ ಮೇಲೆ' ಅಂತ ಕೈ ಮೇಲೆ ಕೈ ಹಾಕದೇನೂ ಪ್ರಮಾಣ ಮಾಡಿದ್ದ. ನಾನದನ್ನ ನಂಬಿರಲಿಲ್ಲ ಆ ಮಾತು ಬೇರೆ.

ಆದರೆ ನಂಬಲೇಬೇಕಾಯ್ತು! ಪ್ರಾಣ್ ಗಯಾ ಕೀ ನಹೀ ಪತಾ ನಹೀ..ಪರ್ ಉಸ್ನೇ ವಚನ್ ನಿಭಾಯಾ ಥಾ! ಅಂದುಕೊಂಡಿದ್ದಕ್ಕಿಂತಲೂ ಚಂದವಾಗಿ ಹೊಲಿದಿದ್ದ ಬ್ಲೌಸ್‌ಗಳನ್ನು...

ಇಂಥ ಟೈಲರುಗಳ ಸಂತತಿ ಸಾಸಿರವಾಗಲಿ..ಏನಂತೀರಿ? ■



# ಬಹುರೂಪಿ ವಿದ್ಯಾರ್ಥಿಗಳು

● ಗಾಯತ್ರಿ ಮೂರ್ತಿ

ಒಂದು ಕೈಯಿನ ಬೆರಳುಗಳೇ ಸಮನಾಗಿರುವುದಿಲ್ಲ. ಅಂತಹುದರಲ್ಲಿ ವಿವಿಧ ಹಿನ್ನೆಲೆಯಿರುವ ಕುಟುಂಬಗಳಿಂದ ಕಾಲೇಜಿಗೆ ಬರುವ ವಿದ್ಯಾರ್ಥಿಗಳು ಒಂದು ರೀತಿ ಇರಲು ಸಾಧ್ಯವೇ? ಹೀಗಾಗಿ ಕಾಲೇಜಿನಲ್ಲಿ ಕಾಣುವುದು ಬಗೆಬಗೆಯ ರೀತಿ ನೀತಿಗಳು, ಗುಣಲಕ್ಷಣಗಳುಳ್ಳ ವಿದ್ಯಾರ್ಥಿಗಳನ್ನು. ತಲೆಹರಟೆಗಳು, ಕಿಲಾಡಿಗಳು, ಅಹಂಕಾರಿಗಳು, ಬುದ್ಧಿವಂತರು, ಒಳ್ಳೇಯ ಗುಣವುಳ್ಳವರು. ಹೀಗೆ ಅವರಲ್ಲಿ ವೈವಿಧ್ಯತೆ ಮನೆಮಾಡಿರುತ್ತದೆ. ಇಂತಹ ವಿದ್ಯಾರ್ಥಿಗಳನ್ನು ನಿಭಾಯಿಸುವುದು ಅಧ್ಯಾಪಕರ ಕರ್ತವ್ಯ ಮಾತ್ರವಲ್ಲ, ಅವರಿಗೆ ಸವಾಲು ಕೂಡ.

ಇದೆಲ್ಲದರ ಜೊತೆಗೆ ವಿದ್ಯಾರ್ಥಿಗಳು ಕಾಲೇಜಿಗೆ ಕಾಲಿಡುತ್ತಿದ್ದಂತೆ ಅವರಿಗೆ ಬಂಧಮುಕ್ತರಾದ ಭಾವ. ಏಕೆಂದರೆ ಕಾಲೇಜಿನಲ್ಲಿ ಸಮವಸ್ತ್ರವಿಲ್ಲ. ಪ್ರತಿ ಪೀರಿಯಡ್‌ನಲ್ಲೂ ಹಾಜರಿ ಇರುವುದರಿಂದ, ಸುಲಭವಾಗಿ ಚಕ್ಕರ್ ಹೊಡೆಯಬಹುದು ಎಂಬ ಉಡಾಫೆಯ ಮನೋಭಾವದಿಂದಲೇ ಕಾಲೇಜಿಗೆ ಸೇರುತ್ತಾರೆ. ಇದರಿಂದ ಅವರು ಕಾಲೇಜಿನ ಪಾಠಗಳ ಬಗ್ಗೆ ನೋಡುವ ಮನೋಭಾವ ಕೂಡ ಬದಲಾಗಿರುತ್ತದೆ. ಇದೇ 'ಅಟೆಂಡೆನ್ಸ್ ಶಾರ್ಟೇಜಿ'ಗೆ ಮೂಲ ಕಾರಣ ಎಂದರೂ ಆದೀತು. ಇದರಿಂದ ಉದ್ಭವವಾಗುವ ಸಮಸ್ಯೆಗಳು ಅಷ್ಟೇ ವೈವಿಧ್ಯಮಯ ಎಂದರೂ ಸರಿಯೇ.

ನಾನು ನಗರದ ಪ್ರತಿಷ್ಠಿತ ಖಾಸಜಿ ಕಾಲೇಜಿನಲ್ಲಿ ಭೌತ ವಿಜ್ಞಾನದ ಅಧ್ಯಾಪಕಿಯಾಗಿ ಕೆಲಸ ನಿರ್ವಹಿಸುತ್ತಿದ್ದಾಗಿನ ಸಂದರ್ಭ. ಕೆಲ ವರ್ಷಗಳ ಕಾಲ ನಾನು ವಿಭಾಗದ ಮುಖ್ಯಸ್ಥೆಯಾಗಿ ಕೂಡ ಕರ್ತವ್ಯ ನಿರ್ವಹಿಸಿದೆ.

ವ್ಯಾಪಕವಾಗಿ ಹರಡಿರುವ, ಜೊತೆಗೆ ಸ್ಥಿರವಾಗಿ ನೆಲೆಗೊಂಡಿರುವ ಪ್ರೈವೇಟ್ ಟ್ಯೂಶನ್ ಸಂಸ್ಥೆಗಳಲ್ಲಿ ಎರಡನೆಯ ಪಿಯುಸಿ ತರಗತಿ ಆರಂಭವಾಗುವ ವೇಳೆಗಾಗಲೇ ವಿದ್ಯಾರ್ಥಿಗಳು ಸಾಕಷ್ಟು ಪಠ್ಯ ವಿಷಯಗಳನ್ನು ಕಲಿತಿರುತ್ತಾರೆ. ಇದರಿಂದ ವಿದ್ಯಾರ್ಥಿಗಳು ಟ್ಯೂಶನ್‌ಗೆ ಹೋದ ತಕ್ಷಣ ತಮಗೆಲ್ಲಾ ಗೊತ್ತು, ಪರೀಕ್ಷೆಯಲ್ಲಿ ನಮಗೆ 95% ಅಂಕಗಳು ಬರುವುದು ಖಚಿತ ಎಂಬಂತೆ ವರ್ತಿಸುತ್ತಾರೆ. ಇದೇ ಸಂಗತಿ ಅವರಿಗೆ ಕಾಲೇಜಿನ ತರಗತಿಗಳ ಬಗ್ಗೆ ನಿರ್ಲಕ್ಷ್ಯ ಬೆಳೆಸುತ್ತದೆ. ಅಧ್ಯಾಪಕರು ಪಾಠ ಮಾಡಲು ತರಗತಿಗೆ ಹೋದರೆ, ಮತ್ತೆ ಅದೇ ಪಾಠಗಳನ್ನು ಕೇಳಲು ಅವರಿಗೆ ಬೇಸರ. ಆದರೆ, ಅವರು ಪರೀಕ್ಷೆಗೆ ಕೂರಲು ಕಾಲೇಜಿನಲ್ಲಿ ಅಟೆಂಡೆನ್ಸ್ ಶೇಕಡಾ ಎಪ್ಪತ್ತೈದರಷ್ಟು ಇರಲೇ ಬೇಕು. ತಮ್ಮ ಮಕ್ಕಳು ಕಾಲೇಜಿಗೆ, ಟ್ಯೂಶನ್‌ಗೆ ಸರಿಯಾಗಿ ಹೋಗುತ್ತಿದ್ದಾರೆಯೇ ಎಂದು ವಿಚಾರಿಸಲು ಎಷ್ಟೋ ತಂದೆತಾಯಿಗಳಿಗೆ ವ್ಯವಧಾನವಿರುವುದಿಲ್ಲ. ಅಪಾರ ಹಣ ಸುರಿದು ಪ್ರೈವೇಟ್ ಟ್ಯೂಶನ್‌ಗೆ ಕಳುಹಿಸಿದರೆ, ತಮ್ಮ ಕರ್ತವ್ಯ ಮುಗಿಯಿತೆಂದು ಭಾವಿಸುತ್ತಾರೆ. ಅಟೆಂಡೆನ್ಸ್‌ಗಾಗಿ ವಿಧಿಯಿಲ್ಲದೆ ಬಹಳಷ್ಟು ವಿದ್ಯಾರ್ಥಿಗಳು ತರಗತಿಗಳಿಗೆ ಬರುತ್ತಾರೆ. ಜೊತೆಗೆ ನಮಗೀಗಾಗಲೇ ತಿಳಿದಿರುವುದನ್ನು ಇವರೇನು ಹೇಳುವುದು ಎಂಬ ಉಡಾಫೆ ಬೇರೆ. ತರಗತಿಗಳಲ್ಲಿ ಅಧ್ಯಾಪಕರು ಪಾಠ ಮಾಡುವಾಗ ತರಲೆ, ಗಲಾಟೆ ಮಾಡುತ್ತಾ ತೊಂದರೆ ಕೊಡುತ್ತಾರೆ. ಅವರನ್ನು ಸುಮ್ಮನಾಗಿಸಿ ಪಾಠ ಮಾಡುವುದು ಅಧ್ಯಾಪಕರಿಗೆ ಕಷ್ಟವೇ.

ಇಂತಹುದೇ ಒಂದು ಎರಡನೆಯ ಪಿಯುಸಿ ತರಗತಿ. ನಾನು ಅವರಿಗೆ ಭೌತ ವಿಜ್ಞಾನ ಬೋಧಿಸುತ್ತಿದ್ದೆ. ಆ ತರಗತಿಯಲ್ಲಿ ನಾಲ್ಕು ಜನರ ಒಂದು ಗುಂಪು.

ಪಾಠ ಸರಿಯಾಗಿ ಕೇಳದೆ ತಲೆಹರಟೆ ಮಾಡುತ್ತಿದ್ದರು. ಬುದ್ಧಿಯ ಮಾತುಗಳು ಅವರ ಮೇಲೆ ಯಾವ ಪರಿಣಾಮವನ್ನೂ ಬೀರಲಿಲ್ಲ. ಸರಿಯಾಗಿ ತರಗತಿಗಳಿಗೂ ಹಾಜರಿರುತ್ತಿರಲಿಲ್ಲ. ಪರೀಕ್ಷೆ ಮುಗಿಯಿತು. ಫಲಿತಾಂಶ ಕೂಡ ಬಂತು. ಫಲಿತಾಂಶ ಬಂದ ಮರುದಿನ ಅವರಲ್ಲಿ ಒಬ್ಬನಾಗಿದ್ದ ಅನಿಲ್ ನನ್ನ ಬಳಿ ಬಂದ. 'ಏನಪ್ಪಾ? ಎಷ್ಟು ಪರ್ಸೆಂಟೇಜ್ ಬಂದಿದೆ? ಬಹುಶಃ 90%ಗಿಂತ ಹೆಚ್ಚೇ ಬಂದಿರಬೇಕು ಅಲ್ಲವೇ?' ಎಂದು ಕೇಳಿದೆ. ನಿಜಕ್ಕೂ ಅವನ ಫಲಿತಾಂಶ ನನಗೆ ತಿಳಿದಿರಲಿಲ್ಲ.

ಅವನು ತಲೆ ತಗ್ಗಿಸಿ, 'ಇಲ್ಲ ಮೇಡಂ, ನನಗೆ ಫಿಸಿಕ್ಸ್‌ನಲ್ಲಿ ಫೇಲಾಗಿದೆ,' ಎಂದು ಪೆಚ್ಚು ಮುಖ ಹಾಕಿಕೊಂಡು ಹೇಳಿದ. 'ಯಾಕೆ ಹಾಗಾಯ್ತು? ಏನಾಯ್ತು ನಿನಗೆ?' ಎಂದು ಕೇಳಿದೆ.

'ನಾನು ಸರಿಯಾಗಿ ಓದಲಿಲ್ಲ ಮೇಡಂ. ಅದಕ್ಕೇ ಹೀಗಾಯ್ತು. ಟ್ಯೂಶನ್‌ನಲ್ಲಿ ಡೀಟೈಲ್ ಆಗಿ ಮಾಡಿದ ಪಾಠಗಳನ್ನು ಮತ್ತೆ ಕೇಳಲು ಬೇಸರವಾಗುತ್ತಿತ್ತು. ಜೊತೆಗೆ, ಕೆಲವು ಸಾರಿ ತರಗತಿಯಲ್ಲಿ ಕೇಳಿದರಾಯ್ತು ಎಂದು ಟ್ಯೂಶನ್‌ಗೆ ಹೋಗದೆ, ಗೆಳೆಯರೊಂದಿಗೆ ಸಿನಿಮಾ ನೋಡುವುದು, ಕಂಪ್ಯೂಟರ್ ಗೇಮ್ಸ್ ಎಂದು ಕಾಲ ಕಳೆಯುತ್ತಿದ್ದೆ. ಅದಕ್ಕೇ ಹೀಗಾಯ್ತು. ನನ್ನ ಕೆರಿಯರ್ ಹಾಳಾಯ್ತು. ನಮ್ಮಪ್ಪ ಚೆನ್ನಾಗಿ ಬೈದರು. ಬಹುಶಃ ನಾವು ತರಲೆ ಮಾಡಿದಾಗ ನೀವು ಎರಡು ಏಟು ಕೊಟ್ಟಿದ್ದರೆ ಆಗ ಬುದ್ಧಿ ಬರ್ತಿತ್ತೇನೋ? ನಾನು ಫೇಲಾಗದೆ ಇರ್ತಿದ್ದೇನೋ?' ಎಂದು ಅಳ ತೊಡಗಿದ.

ಎಲಾ ಇವನಾ? ಇವನ ತಪ್ಪಿಗೆ ನನ್ನನ್ನು ಈಡು ಮಾಡಲು ನೋಡ್ತಿದಾನಲ್ಲ ಎಂದು ಒಂದು ನಿಮಿಷ ಕೋಪ ಬಂತು. ಮರುಕ್ಷಣವೇ, ಪಾಪ, ಫೇಲಾಗಿದಾನೆ, ಬೇಸರದಲ್ಲಿ ಹೇಳಿದ ಮಾತು ಎಂದು ಸಮಾಧಾನ ತಂದುಕೊಂಡೆ.

'ಅಲ್ಲಾ, ಆ ಸಮಯದಲ್ಲಿ ನೀನು ಹೇಗಿದ್ದೆ ಅಂದ್ರೆ, ನಾನು ನಿನಗೆ ಎರಡೇಟು ಬಿಟ್ಟಿದ್ರೆ ನೀನು ತಿರುಗಿಸಿ ನನಗೆ ಹೊಡೀತಿದ್ದೆ ಅಷ್ಟೆ. ಇರಲಿ ಬಿಡು, ಆಯ್ತಲ್ಲ. ಅದೂ ಅಲ್ದೆ, ದೊಡ್ಡ ಹುಡುಗರಿಗೆ ಬುದ್ಧಿ ಮಾತು ಹೇಳ್ಬೋದೇ ವಿನಃ ಹೊಡೆಯಕ್ಕಾಗಲ್ಲ. ಅದು ಸರಿಯೂ ಅಲ್ಲ. ಮುಂದೆ ಹೀಗೆ ಮಾಡದೆ, ಒಳ್ಳೆಯ ದಾರಿಯಲ್ಲಿ ನಡೆ,' ಎಂದು ಹೇಳಿದೆ.

ನಂತರ ನಾನು ಅವನ ಬೆನ್ನು ತಟ್ಟಿ, 'ಸಮಾಧಾನ ಮಾಡ್ಕೊ. ನಡೆಯುವವನು ಎಡವುವುದು ಸಹಜ. ಎಡವಿದವ ಎದ್ದು ಮತ್ತೆ ನಡಿಗೆ ಮುಂದುವರೆಸುವುದು ಬುದ್ಧಿವಂತಿಕೆ. ನೀನಿನ್ನೂ ಬಹಳ ಚಿಕ್ಕವನು. ಇಡೀ ಜೀವನ ನಿನ್ನ ಮುಂದಿದೆ. ಅಲ್ಲದೆ, ತಪ್ಪು ಮಾಡುವುದು ಮನುಷ್ಯನ ಸಹಜ ಗುಣ. ಆದರೆ ಅದೇ ತಪ್ಪು ಮತ್ತೆ ಜರುಗದಂತೆ ಎಚ್ಚರವಹಿಸಿ ಸನ್ಮಾರ್ಗದಲ್ಲಿ ನಡೆಯುವುದು ಬುದ್ಧಿವಂತನ ಲಕ್ಷಣ. ನೀನು ಬುದ್ಧಿವಂತ. ಈ ಬಾರಿ ಚೆನ್ನಾಗಿ ಓದಿ ಒಳ್ಳೆಯ ಅಂಕಗಳನ್ನು ತೆಗೆದುಕೊ. ಮುಂದೆ ಖಂಡಿತಾ ನೀನು ಉತ್ತಮ ಜೀವನ ರೂಪಿಸಿಕೊಳ್ಳಬಹುದು,' ಎಂದೆ. ಬೇಸರದಿಂದ ಕುಗ್ಗಿ ಹೋಗಿದ್ದ ಅವನ ಮುಖ ಅರಳಿತು.

'ಥ್ಯಾಂಕ್ಯೂ ಮೇಡಂ. ನನ್ನ ಜೀವನಾನೇ ಹಾಳಾಗೋಯ್ತೂಂತ ಬೇಜಾರಾಗಿತ್ತು. ನಿಮ್ಮಾತು ಕೇಳಿ ಸಮಾಧಾನವೆನಿಸಿತು. ಇನ್ನು ಮುಂದೆ ಹೀಗಾಗದಂತೆ ಎಚ್ಚರವಹಿಸುತ್ತೇನೆ. ನೀವು ನನ್ನ ಕಣ್ಣು ತೆರೆಸಿದಿರಿ,' ಎಂದು ಹೇಳಿದ. ಮುಂದಿನ ಪರೀಕ್ಷೆಯಲ್ಲಿ ಅವನಿಗೆ ಒಳ್ಳೆಯ ಅಂಕಗಳು ಸಿಕ್ಕಿ, ಇಂಜಿನಿಯರಿಂಗ್ ಕೋರ್ಸ್‌ಗೆ ಸೇರಿದ. ಎಂದು ತಿಳಿಯಿತು.

***

ಇದು ಅಂತಿಮ ಪದವಿ ತರಗತಿಯಲ್ಲಿ ಓದುತ್ತಿದ್ದವನ ಕಥೆ. ಹೆಸರು ಥಾಮಸ್ ಎಂದಿರಲಿ. ಅವನು ಫುಟ್‌ಬಾಲ್ ಚಾಂಪಿಯನ್. ಕಾಲೇಜು ತಂಡದ ನಾಯಕ. ಅವನ ತಂಡ ಸಾಕಷ್ಟು ಅಂತರಕಾಲೇಜು, ರಾಜ್ಯಮಟ್ಟದ ಮ್ಯಾಚ್‌ಗಳಲ್ಲಿ ಗೆದ್ದಿತ್ತು. ಇದು ಅವನ ಅಹಂಕಾರಕ್ಕೆ ಕಾರಣವಾಗಿತ್ತು. ಆಟಗಾರರು ಸಾಮಾನ್ಯವಾಗಿ ಪ್ರಾಕ್ಟೀಸ್ ಅಂತಲೋ ಮ್ಯಾಚ್ ಇದೆಯೆಂದೋ ತರಗತಿಗಳಿಗೆ ಸರಿಯಾಗಿ ಬರುವುದಿಲ್ಲ. ಅವರಿಗೆ ಇಂತಿಷ್ಟು ಅಟೆಂಡೆನ್ಸ್ ಮಾಫಿ ಕೂಡ ಇರುತ್ತಿತ್ತು. ಅವನು ಥಿಯರಿ ಕ್ಲಾಸ್‌ಗಳಿಗೆ ಸರಿಯಾಗಿ ಬರದಿದ್ದರೂ, ಪ್ರಯೋಗ ತರಗತಿಗಳಿಗೆ ಹೆಚ್ಚು ತಪ್ಪಿಸುತ್ತಿರಲಿಲ್ಲ. ಆದರೂ ತನಗೆ ಬೋಧಿಸುವ ಅಧ್ಯಾಪಕರುಗಳೊಂದಿಗೆ ಅಹಂಕಾರದಿಂದ ವರ್ತಿಸುತ್ತಿದ್ದ. ಅಂತಿಮ ಪರೀಕ್ಷೆಯಲ್ಲಿ ಅವನು ಫೇಲ್ ಆದದ್ದು ಯಾರಿಗೂ ಅಚ್ಚರಿಯೆನಿಸಲಿಲ್ಲ. ಆದರೆ, ಆಶ್ಚರ್ಯವೆಂಬಂತೆ ಅವನು ಸಪ್ಲಿಮೆಂಟರಿಯಲ್ಲಿ ಪಾಸಾಗಿದ್ದ.

ಅದಾಗಿ ಒಂದೆರಡು ವರ್ಷ ಕಳೆದಿರಬಹುದು. ಒಂದು ದಿನ ನಾನು ಬಿಡುವಿನ ವೇಳೆಯಲ್ಲಿದ್ದಾಗ ಥಾಮಸ್ ಬಂದ. 'ಗುಡ್ ಆಫ್ಟರ್‌ನೂನ್ ಮೇಡಂ,' ಎಂದು ವಿನಯವಾಗಿ ನುಡಿದಾಗ ನನಗೆ ಆಶ್ಚರ್ಯ. 'ಸಪ್ಲಿಮೆಂಟರಿಯಲ್ಲಿ ಪಾಸಾಗಿದೀಯ. ಸಂತೋಷ,' ಎಂದೆ. ಅವನು ನನ್ನ ಮುಂದಿದ್ದ ಕುರ್ಚಿ ತೋರಿಸಿ, 'ಕೂತ್ಕೋಬಹುದಾ? ನಾನು ನಿಮ್ಮೊಡನೆ ಮಾತಾಡ್ಬೇಕು,' ಎಂದ.

'ಧಾರಾಳವಾಗಿ ಕೂತ್ಕೊ. ಏನು ಸಮಾಚಾರ?' ಎಂದೆ.

'ಮೇಡಂ, ನನ್ನ ಕತೆ ಕೇಳಿ. ನನ್ನ ಅಪ್ಪ ಬಿಸಿನೆಸ್‌ಮ್ಯಾನ್. ನನಗೆ ಅವರು ಪ್ರತಿ ತಿಂಗಳೂ ಹತ್ತು ಸಾವಿರ ರೂಪಾಯಿ ಪಾಕೆಟ್‌ಮನಿಯ ಜೊತೆಗೆ ಬೈಕ್ ತೆಗೆಸಿಕೊಟ್ಟರು. ಇದರಿಂದ ಮಗ ಉತ್ತೇಜಿತನಾಗಿ ಚೆನ್ನಾಗಿ ಓದುತ್ತಾನೆ ಎಂದವರ ಭಾವನೆ ಇದ್ದಿರಬಹುದು. ಆದರೆ ನನ್ನ ಬಳಿ ಇರುತ್ತಿದ್ದ ಅಷ್ಟೊಂದು ಹಣ ಅನೇಕ ಸ್ನೇಹಿತರ ಗಮನ ಸೆಳೆಯಿತು. ನಾನು ಅವರುಗಳ ಮಾತಿಗೆ ಮರುಳಾಗಿ, ಅವರು ಹೇಳಿದಂತೆ ಹಣ ಪೋಲು ಮಾಡುತ್ತಿದ್ದೆ. ಜೊತೆಗೆ ಫುಟ್ಬಾಲ್ ಆಟದ ಮೇಲೆ ಗಮನ. ಓದಿನ ಕಡೆ ಗಮನವನ್ನೇ ನೀಡಲಿಲ್ಲ. ಅಪ್ಪ ಕೊಡುತ್ತಿದ್ದ ಹಣದಲ್ಲಿ ಮೋಜು ಮಾಡುತ್ತ ಕಾಲ ಕಳೆದೆ. ನಾನು ಫೇಲಾದಾಗ ಅಪ್ಪ ಬೈದರು. 'ಮಗ ವಿದ್ಯೆ ಕಲಿತು ಮುಂದೆ ಒಳ್ಳೆಯ ವೃತ್ತಿ ಜೀವನ ಪಡೆಯಲಿ ಎಂದು ಕನಸು ಕಂಡಿದ್ದೆ. ಇಂದಿನ ಪರಿಸ್ಥಿತಿಯಲ್ಲಿ ಹತ್ತು ರೂಪಾಯಿ ಗಳಿಸುವುದು ಎಷ್ಟು ಕಷ್ಟ ಅಂತ ನಿನಗೆ ಗೊತ್ತೇನೋ? ಇವತ್ತೇ ಕಡೆ. ಇನ್ನು ಮುಂದೆ ನನ್ನಿಂದ ನಿನಗೆ ಒಂದು ಪೈಸೆಯೂ ಸಿಕ್ಕುವುದಿಲ್ಲ. ಹಣದ ಬೆಲೆ ತಿಳಿಯುವವರೆಗೆ ನೀನು ಮನೆಗೆ ಬರಬೇಡ,' ಎಂದು ಖಡಾಖಂಡಿತವಾಗಿ ಹೇಳಿದರು. ಆಗ ಕೆಲಸಕ್ಕಾಗಿ ಊರೆಲ್ಲಾ ಅಲೆದೆ. ಊಟವಿಲ್ಲದೆ ಪರದಾಡಿದೆ. ನನ್ನೊಂದಿಗೆ ಮೊಜು ಮಾಡಿದ್ದ ಗೆಳೆಯರೊಬ್ಬರೂ ನೆರವಿಗೆ ಬರಲಿಲ್ಲ. ಅವರಿಗೆ ಬೇಕಾಗಿದ್ದುದು ನನ್ನ ಗೆಳೆತನವಲ್ಲ, ಮೋಜು ಮಾಡಲು ನನ್ನಲ್ಲಿರುತ್ತಿದ್ದ ಹಣ ಎಂದು ಆಗ ನನಗೆ ಅರಿವಾಯಿತು. ಕೊನೆಗೂ ಕೆಲಸಕ್ಕೆ ಸೇರಿ ನನ್ನ ಊಟ ಸಂಪಾದಿಸಿದೆ. ಆಗ ನನಗೆ ಹಣದ ಬೆಲೆ, ವಿದ್ಯೆಯ ಬೆಲೆ ತಿಳಿಯಿತು. ತಂದೆಯ ಬಳಿ ಹೋಗಿ ಕ್ಷಮಾಪಣೆ ಕೇಳಿದೆ. ನಾನು ಕೆಲಸಕ್ಕೆ ಸೇರಿರುವ ವಿಷಯ ತಿಳಿಸಿದೆ. ನಂತರ ಕಷ್ಟಪಟ್ಟು ಓದಿ ಬಿ. ಎಸ್ಸಿ ಮುಗಿಸಿದೆ. ಕಂಪ್ಯೂಟರ್ ಕೋರ್ಸ್‌ಗಳನ್ನು ಮಾಡಿದೆ. ಈಗ ಒಳ್ಳೆಯ ಕೆಲಸಕ್ಕೆ ಸೇರಿದ್ದೇನೆ. ನೀವು ವಿದ್ಯಾರ್ಥಿಗಳ ಬಗ್ಗೆ ಕಾಳಜಿ

ವಹಿಸುತ್ತಿದ್ದಿರಿ. ನಿಮ್ಮೊಂದಿಗೆ ನನ್ನ ಅನುಭವ 'ಶೇರ್' ಮಾಡಬೇಕೆಂದು ಅನಿಸಿತು,' ಎಂದ.

ಮಕ್ಕಳ ಉಡಾಳತನದಲ್ಲಿ ತಂದೆತಾಯಿಯ ಪಾತ್ರವೂ ಇರುತ್ತದಲ್ಲವೇ? ಮಕ್ಕಳಿಗೆ ಪಾಕೆಟ್‌ಮನಿ ಕೊಡುವಾಗ ಎಚ್ಚರಿಕೆಯಿಂದ ಕೊಡಬೇಕೇ ವಿನಃ, ಹಣವಿದೆ ಎಂದು ಅತಿ ಧಾರಾಳತನ ಮಾಡಿದರೆ ಹೀಗೇ ಆಗುವುದು ಎನಿಸಿತು. ಥಾಮಸ್ ಏನೋ ಸೂಕ್ತ ಸಮಯದಲ್ಲಿ ಎಚ್ಚರಗೊಂಡು ತನ್ನ ಜೀವನ ರೂಪಿಸಿಕೊಂಡ. ಆದರೆ ಎಲ್ಲರಿಗೂ ಥಾಮಸ್‌ನಂತೆ ಆಗಲು ಸಾಧ್ಯವೇ? ಇಂದು ನಮ್ಮ ಸಮಾಜದಲ್ಲಿ ಮಾದಕ ಔಷಧಿ ಸೇವನೆ, ಧೂಮಪಾನ, ಜೂಜು ಮುಂತಾದ ದುರಭ್ಯಾಸಗಳಿಗೆ ಬಲಿಯಾಗಿ ಜೀವನವನ್ನೇ ಹಾಳು ಮಾಡಿ ಕೊಂಡಿರುವ ಎಷ್ಟೋ ಜನರ ಅವಸ್ಥೆಗೆ ತಂದೆತಾಯಿಗಳು ಪರೋಕ್ಷವಾಗಿ ಕಾರಣರಿರುತ್ತಾರಲ್ಲವೇ?

■

---

## ಉಪ್ಪಿಟ್ಟೇ ಇರಲಿ

ನೂರು ಜನರಿದ್ದ ಹಾಸ್ಟೆಲ್ ಒಂದರಲ್ಲಿ ದಿನವೂ ಬೆಳಿಗ್ಗೆ ಉಪ್ಪಿಟ್ಟಿನ ಸಮಾರಾಧನೆ ನಡೆಯುತ್ತಿತ್ತು. ಒಂದುದಿನ ತಿಂಡಿಯ ಕುರಿತು ಅಸಮಾಧಾನ ಭುಗಿಲೆದ್ದಿತು. ಉಪ್ಪಿಟ್ಟು ಪ್ರಿಯರಾಗಿದ್ದ 20 ಜನ, ದಿನವೂ ಉಪ್ಪಿಟ್ಟೇ ಇರಲಿ ಅಂತಾ ಬೇಡಿಕೆಯಿಟ್ಟರೆ, ಉಳಿದ 80 ಜನ ದಿನದಿನವೂ ಬೇರೆ ತಿಂಡಿ ಬೇಕು ಅಂತಾ ಕೂತರು. ದಿನದಿನವೂ ಬೇರೆ ಕೊಡಲಾಗುವುದಿಲ್ಲ. ತಿಂಗಳಿಗೊಂದು ಮಾಡಬಹುದು ಅಂತಾ ವಾರ್ಡನ್ ಹೇಳಿದರು.

ಉಪ್ಪಿಟ್ಟಿನವರು ಆಗಲೂ "ಬೇಡ ಬೇಡ ಉಪ್ಪಿಟ್ಟೇ ಇರಲಿ" ಅಂತಾ ಹಠಹಿಡಿದು ಕೂತಿದ್ದರು. ಉಳಿದವರು "ಅದೆಲ್ಲಾ ಆಗಲ್ಲ. ಬೇರೆ ತಿಂಡಿ ಬೇಕು ಅಂತಾ ರಚ್ಚೆ ಹಿಡಿದರು.

ವಾರ್ಡನ್ "ನಾವು ಸಂವಿಧಾನಯುಕ್ತ ಭವ್ಯ ಭಾರತದ ಪ್ರಜಾಪ್ರಭುತ್ವದ ಪ್ರಜೆಗಳು. ಎಲ್ಲರಿಗೂ ಅಭಿಪ್ರಾಯ ವ್ಯಕ್ತಪಡಿಸಲು ಅವಕಾಶವಿದೆ. ವೋಟಿಂಗ್ ಮಾಡಿಸಿ ಮೆಜಾರಿಟಿ ನೋಡೋಣ ಎಂದರು. ಇಪ್ಪತ್ತುಜನ "ಉಪ್ಪಿಟ್ಟಿರುವಾಗ ಇವೆಲ್ಲಾ ಯಾಕೆ?" ಅಂತಾ ಕುಸುಗುಟ್ಟಿದರು. ಉಳಿದ 80 ಜನ "ವೋಟಿಂಗ್ ಮಾಡಿ ಪ್ರಜಾಸತ್ತಾತ್ಮಕವಾಗಿ ನಿಮಗೆ ಬುದ್ಧಿ ಕಲಿಸ್ತೀವಿ" ಅಂತಾ ಬುಸುಗುಟ್ಟಿದರು.

ಮರುದಿನ ಮತದಾನ. ಉಪ್ಪಿಟ್ಟುಪ್ರಿಯ ಇಪ್ಪತ್ತು ಜನರು ಮೊದಲೇ ನಿರ್ಧರಿಸಿದಂತೆ ಉಪ್ಪಿಟ್ಟಿಗೇ ಮತ ಹಾಕಿದರು. ಉಳಿದ ಎಂಬತ್ತು ಜನರ ಮತಗಳು ಹೀಗಿದ್ದವು:

| | |
|---|---|
| ಮಸಾಲೆ ದೋಸೆ – 18 ಜನ | ಆಲೂ ಪರಾಠ – 16 ಜನ |
| ಪೂರಿ ಸಾಗು – 14 ಜನ | ಮ್ಯಾಗಿ – 12 ಜನ |
| ಇಡ್ಲಿ ಸಾಂಬಾರ್ – 10 ಜನ | ಟೋಸ್ಟ್ ಆಮ್ಲೆಟ್ – 10 ಜನ |

ಬಹುಮತ ಉಪ್ಪಿಟ್ಟಿಗೇ ಬಂದಿದ್ದರಿಂದ, ಪ್ರಜಾ ಅಭಿಪ್ರಾಯಗಳಿಗನುಗುಣವಾಗಿ, ಅದನ್ನೇ ಹಾಸ್ಟೆಲ್ಲಿನ ರಾಷ್ಟ್ರೀಯ ಆಹಾರವಾಗಿ ಘೋಷಿಸಿ ಮುಂದುವರೆಸುವುದೆಂದು ತೀರ್ಮಾನಿಸಲಾಯಿತು.

**ನೀತಿ: ಎಲ್ಲಿಯವರೆಗೆ 80% ಜನ ತಮ್ಮ ಸ್ವಾರ್ಥವನ್ನೇ ನೋಡಿಕೊಂಡು ಒಡೆದು ಹರಿದು ಹಂಚಿ ಕೂತಿರುತ್ತಾರೋ, 20% ಜನರೇ ನಿಮ್ಮ ಜೀವನವನ್ನು ನಿರ್ಧರಿಸುತ್ತಾರೆ.**

■

# ಬದುಕುಂಟೆ ಬೆಳಕಿರದೆ?

● ಸಂಧ್ಯಾ ರಮೇಶ್

ಭಾನುವಾರ ಮುಂಜಾನೆ, ಬೆಳಗಿನ ಜಾವ ಕೆಲಸದ ಗಡಿಬಿಡಿ ಇಲ್ಲವೆಂಬ ಮಧುರ ನೆನಪಿನಿಂದಲೇ ಮೈಮನಗಳು ಹಗುರವಾದಂತೆನಿಸಿ, ಸಕ್ಕರೆ ನಿದ್ರೆಯನ್ನು ಸೊಂಪಾಗಿ ಸವಿಯುತ್ತಿದ್ದವಳಿಗೆ ಯಜಮಾನರು ಅಷ್ಟು ಬೇಗ (ಕೇವಲ ಎಂಟು ಗಂಟೆ) ಶುಭ ಮುಂಜಾನೆಯನ್ನು ಶಾಕಿಂಗ್ ನ್ಯೂಸ್ ನಿಂದಲೇ ಎಚ್ಚರಿಸಿದಾಗ, ಮೊದಲು ಕೋಪ ಬಂದರೂ, ಒಮ್ಮೆಲೇ ಭಯಭೀತಳಾಗಿ, ನಿದ್ರಾದೇವಿಯನ್ನು ದೂರತಳ್ಳಿ, ದಡಬಡಿಸಿ ಎದ್ದುಬಿಟ್ಟೆ.

'ನಮ್ಮ ಕಾರು ಸ್ವಚ್ಛಗೊಳಿಸುತ್ತಿದ್ದಾಗ, ಕಾಂಪೌಂಡ್ ಮುಂದಿನ ಕರೆಂಟ್ ಕಂಬದಲ್ಲಿ ಶಬ್ದವಾಗಿ ಕಿಡಿ ಬಂದಿದ್ದು ಕೆಲಸದ ಚೆನ್ನಪ್ಪ ನೋಡಿದನಂತೆ. ಆಗಿಂದ ನಮ್ಮ ಮನೇಲಿ ಕರೆಂಟೇ ಇಲ್ಲ. ನನಗೆ ಹೊತ್ತಾಯಿತು, ಕಾನ್ಫರೆನ್ಸಿಗೆ ಹೊರಟಿದ್ದೇನೆ' ಅಂತ ಆತುರಾತುರವಾಗಿ ಹೇಳಿ ಹೊರನಡೆದು, ಕಾರ್ ಸ್ಟಾರ್ಟ್ ಮಾಡಿ ಹೊರಟೇ ಬಿಟ್ಟರು, ಸಮಯಪಾಲನೆಗೆ ಮತ್ತೊಂದು ಹೆಸರಾದ ಪತಿರಾಯರು. 'ಬೆಳಗಿನ ಉಪಹಾರ, ಮಧ್ಯಾಹ್ನದ ಊಟ ಎಲ್ಲಾ ಅಲ್ಲಿಯೇ' ಅಂತ ಹಿಂದಿನ ದಿನ ಹೇಳಿದಾಗ, ಇಡೀ ರವಿವಾರ ತಿಂಡಿ. ಊಟದ ಸಮಯದ ಬಗ್ಗೆ ತಲೆಕೆಡಿಸಿಕೊಳ್ಳದೆ ಮನಸೋ ಇಚ್ಛೆ ಇರಬಹುದೆಂದು ಹಿರಿಹಿರಿ ಹಿಗ್ಗಿದ್ದವಳು ಈ ಕರೆಂಟಿನ ಸುದ್ದಿಯಿಂದ ಪಾತಾಳಕ್ಕೆ ಕುಗ್ಗಿ ಹೋದಂತೆನಿಸಿತು.

ಏನೇ ಆದರೂ, ಬೆಳಗಿನ ಕಾಫಿ ಹೀರುವ ತನಕ ಅರಿವು ತಿಳಿಯಾಗುವುದಿಲ್ಲವಲ್ಲ! ಕಾಫಿ ಸೇವಿಸಿದ ನಂತರ, ಸ್ವಲ್ಪ ಚೈತನ್ಯ ಬಂದಂತಾಗಿ, ಸುತ್ತಲೂ ಒಮ್ಮೆ ಕಣ್ಣಾಡಿಸಿದೆ. ಹಾಲಿನಲ್ಲಿ ಫ್ಯಾನ್ ತಿರುಗುತ್ತಿದೆ. ಅಡುಗೆ ಮನೆಯಲ್ಲಿ ಲೈಟ್ ಉರಿಯುತ್ತಿದೆ. 'ಅಯ್ಯೋ, ಅನಾಹುತವಾಗುತ್ತದೆ. ತುರ್ತು ಪರಿಸ್ಥಿತಿಗೆ ಸ್ವಲ್ಪ ಜೀವವಾದರೂ ಇರಲಿ ಎಂದು ಓಡಿ, ಇನ್ವರ್ಟರ್ ಆಫ್ ಮಾಡಿದೆ. ಈಗ ಮುಂದಿನ ಅವಶ್ಯ ಕೆಲಸಗಳಿಗೆ ಸಜ್ಜಾದೆ. ಸುತ್ತುಮುತ್ತಲಿನ ಮನೆಗಳಲ್ಲಿ ಕರೆಂಟ್ ಸಮಸ್ಯೆ ಆಗಿಲ್ಲ, ನಮ್ಮ ಮನೆಗಷ್ಟೇ ಸೀಮಿತ ಎಂದುಕೊಳ್ಳುತ್ತಿರುವಾಗಲೇ, ಪಕ್ಕದ್ಮನೆ ಪವನ, ನನ್ನ ಸಪ್ಪೆ ಮುಖದ ಕಾರಣ ತಿಳಿದು, 'ಆಂಟಿ, ನಿಮ್ಮ ಮನೆ ಫ್ಯೂಸ್ ಹೋಗಿರಬಹುದು. ನಾನೇ ನೋಡುತ್ತಿದ್ದೆ. ಆದ್ರೆ ಅರ್ಜೆಂಟಾಗಿ ಹೊರಗೆ ಹೋಗಬೇಕಾಗಿದೆ. ಸ್ನೇಹಿತರು ಕಾಯುತ್ತಿರುತ್ತಾರೆ. ನಿಮ್ಮ ಎಲೆಕ್ಟ್ರಿಷಿಯನ್ ಕರೆಸಿ ಚೆಕ್ ಮಾಡಿಸಿ' ಎಂದು ನನ್ನಲ್ಲಿ ಆಶಾವಾದ ಮೂಡಿಸಿ ಸ್ಕೂಟರ್ ನಲ್ಲಿ ಹೊರಟೇಬಿಟ್ಟ. 'ರವಿವಾರ ಬೆಳಿಗ್ಗೆ ಸ್ನೇಹಿತರು ಅರ್ಜೆಂಟ್ ಕೆಲಸ ಎಂದರೆ ಇನ್ನೇನು, ಹೋಟೆಲ್ ನಲ್ಲಿ ಮಸಾಲೆದೋಸೆ ತಿನ್ನೋಕೆ ಧಾವಿಸ್ತಿರಬೇಕು ಮುಂಡೇವು' ಎಂದು ಗೊಣಗಿಕೊಂಡೆ. ಆದರೂ ಅವನ ಕಾಮನ್ ಸೆನ್ಸ್ ಮೆಚ್ಚಿಕೊಂಡು, ನಮ್ಮ ಮನೆ ರೆಗ್ಯುಲರ್ ಎಲೆಕ್ಟ್ರಿಷಿಯನ್ ವೀರೇಶಿಗೆ ತಕ್ಷಣ ಬರಲು ವಿನಂತಿಸಿಕೊಂಡೆ.

'ಅಮ್ಮಾವ್ರೆ, ಟಿಫಿನ್ ಮಾಡಾಕ್ ಹತ್ತೀನಿ, ಹತ್ತು ನಿಮಿಷದಲ್ಲಿ ಬರ್ತೀನಿ' ಅಂದವ್ನು ಅರ್ಧ ಗಂಟೆಯ ನಂತರ ಹಾಜರಾದ. ಫ್ಯೂಸ್ ಪ್ಲಗ್ ತೆಗೆದು ಕಣ್ಣಲ್ಲಿ ಕಣ್ಣಿಟ್ಟು ಪರೀಕ್ಷಿಸಿ, 'ಅಮ್ಮಾವ್ರೆ, ಫ್ಯೂಸ್ ಸರಿ ಐತ್ರಿ. ಇದು ಪೋಲ್ ನಲ್ಲೇ ಮಿಸ್ಟೇಕು.

ಕೆ.ಇ.ಬಿ ಅವರಿಗೆ ಕಂಪ್ಲೇಂಟ್ ಮಾಡ್ರಿ' ಎಂದು ನನ್ನ ಪಾತ್ರ ಮುಗೀತು ಎಂಬಂತೆ ದ್ವಿಚಕ್ರ ವಾಹನ ಏರಿ ಶಸ್ತ್ರಗಳ ಸಮೇತ ಮಾಯವಾದ. ಬೆಂಗಳೂರಿಗಳಾದರೂ, ಯಾವ ಜನ್ಮದ ಋಣವೋ, ಉತ್ತರ ಕರ್ನಾಟಕದ ಹುಬ್ಬಳ್ಳಿಯಲ್ಲಿ ನೆಲೆಸಿ, ಇಲ್ಲಿಯ ಕನ್ನಡದ ಸೊಗಡನ್ನು ಸವಿಯಬೇಕಾಗಿತ್ತು. ನೂರಕ್ಕೆ ನೂರು ಇದು ಎಲೆಕ್ಟ್ರಿಕ್ ಕಂಬದ್ದೇ ಸಮಸ್ಯೆ ಎಂದು  ಖಚಿತವಾಗಿ, ಕೆ.ಇ.ಬಿ ಗೆ ಫೋನ್ ಮಾಡಲು ಅಣಿಯಾದೆ.

ನಯ, ವಿನಯ, ಮಾಧುರ್ಯ ಎಲ್ಲವನ್ನೂ ದನಿಯಲ್ಲಿ ಮೇಳೈಸಿಕೊಂಡು, 'ಹಲೋ, ಕೆ.ಇ.ಬಿ ನಾ?' ಅಂತ ಕೇಳುತ್ತಲೇ, ಆ ಕಡೆಯಿಂದ ಗಡಸು ದನಿ ಕೇಳಿಸಿತು. 'ಹೌದ್ರೀ, ಏನ್ರೀ ಪ್ರಾಬ್ಲಮ್ಮು?'. ಅಂತ ಅತ್ತ ಕಡೆಯ ದನಿಗೆ ಸ್ವಲ್ಪ ಬೆಚ್ಚಿದರೂ, ಸಾವರಿಸಿಕೊಂಡು, ಅತಿ ವಿನಮ್ರಳಾಗಿ ಹೇಳಿದೆ.

'ನೋಡಿ, ನಾವು ಡಾ. ರಮೇಶ್ ಅವರ ಮನೆ, ಕೇಶ್ವಾಪುರದಿಂದ ಮಾತಾಡ್ತಿರೋದು' ಎನ್ನುತ್ತಿದ್ದಂತೆಯೇ, 'ಸರಿ, ಸರಿ, ನಿಮ್ಮ ಅಡ್ರೆಸ್ ಹೇಳ್ರಿ' ಮತ್ತೆ ಸಿಡುಕು.

'ಅಲ್ಲಾರೀ, ನಮ್ಮನೆ ಪ್ರಾಬ್ಲಮ್ ಹೇಳ್ತೀನಿ'

'ಪ್ರಾಬ್ಲಮ್ ಅಂದ್ರೆ ಏನಿರ್ತಾವ್ರೀ? ಅದೇ ಕರೆಂಟಿಂದು. ಅದು  ಬಿಟ್ಟು ನಿಮ್ಮ ಸಂಸಾರದ ಪ್ರಾಬ್ಲಮ್ ಬಗೆಹರಿಸ್ಲಿಕ್ಕೇನು ನಾವಿರೋದು?' ಸಿಡಿಮಿಡಿಗೊಂಡಂತಿತ್ತು ದನಿ.

'ಅದು ಹಾಗಲ್ಲ ಸಾರ್, ನಮ್ಮ ಮನೆ ಸುತ್ತಮುತ್ತ ಎಲ್ಲರ ಮನೆಯಲ್ಲೂ ಕರೆಂಟ್ ಇದೆ. ನಮ್ಮನೇಲಿ ಮಾತ್ರ ಇಲ್ಲ. ಕಂಬದಲ್ಲಿ ಶಬ್ದ ಬಂದು ಪವರ್ ಹೋಗಿದೆ' ಎನ್ನುತ್ತಿದ್ದಂತೆ,

'ಏನ್ರೀ ಮೇಡಮ್ ನೀವು? ಜಡ್ದು ಎಲ್ಲರಿಗೂ ಒಮ್ಮೆಲೇ ಬರ್ತಾವೇನ್ರೀ? ಒಬ್ಬೊಬ್ಬರಿಗೇ ಅಲ್ಲೇನ್ರೀ ಜಡ್ದು ಬರೋದು? ಡಾಕ್ಟರ್ ಮನೀ ಅವ್ರು ಅಂತೀರಿ, ಅಷ್ಟೂ ತಿಳಿಯೋದಿಲ್ಲೇನ್ರಿ ನಿಮಗೆ, ಸರಿ ಸರಿ, ಅಡ್ರೆಸ್ ಹೇಳ್ರಿ' ಅಂತ ಅವಸರಪಡಿಸಿದ.

ವಿಳಾಸ ಹೇಳಿ, ಅಂಜುತ್ತಲೇ ಧೈರ್ಯ ಮಾಡಿ ಕೇಳಿಬಿಟ್ಟೆ,

'ಅಲ್ಲಾರೀ, ಇವತ್ತು ರವಿವಾರ, ರಿಪೇರಿಗೆ ಕಳಿಸ್ತೀರಲ್ರೀ?'

'ರವಿವಾರ ಮುಂಜಾನೆ, ಮುಂಜಾನೆ ನಿಮ್ಮಂತವ್ರ ಗೋಳು ಕೇಳಲಿಕ್ಕೇ ನಾನು ಬಂದಿಲ್ಲೇನ್ರೀ? ಕಳಿಸ್ತೀವಿ, ಆದ್ರೆ ಲೇಟ್ ಆಗ್ತದೆ. ನೀವು ಮತ್ತೆ ಮತ್ತೆ ಫೋನ್ ಮಾಡಿ ತ್ರಾಸು ಕೊಡಬ್ಯಾಡ್ರಿ' ಎಂದು ಅಂತಿಮ ಎಚ್ಚರಿಕೆ ಕೊಟ್ಟು ಪೋನ್ ಕುಕ್ಕಿದ.

ಕಂಪ್ಲೇಂಟ್ ಅಂತೂ ಕೊಟ್ಟದ್ದಾಯಿತು. ಲೇಟ್ ಆಗತ್ತೆ ಅಂತ ಬೇರೆ ಹೇಳಿದ್ದಾನೆ. 'ಏನಪ್ಪಾ ಗತಿ?' ಮೇಲೆ ಟ್ಯಾಂಕ್ ನಲ್ಲಿ ನೀರು 'ನಾನು ಎಷ್ಟು ತಳದಲ್ಲಿದ್ದೇನೆ' ಅಂತ ಅಣಗಿಸಿದಂತಾಯ್ತು. ಏನೇ ಕಷ್ಟಗಳಿರಲಿ, ಅದು ಹೊಟ್ಟೆಗೇನೂ ಅಲ್ಲವಲ್ಲ? ಇಷ್ಟು ಹೊತ್ತಿಗೆ ಹೊಟ್ಟೆ ಚುರುಗುಟ್ಟಲಾರಂಭಿಸಿತ್ತು. ಒಂದಷ್ಟು ಉಪ್ಪಿಟ್ಟು ಕೆದಕಿ ತಿಂದು ಮತ್ತೊಮ್ಮೆ ಕಾಫಿ ಕುಡಿದ ಮೇಲೆ ಸ್ವಲ್ಪ ತ್ರಾಣ ಬಂದಂತಾಯಿತು. ಪರಿಸ್ಥಿತಿ ನಿಭಾಯಿಸುವ ಯೋಜನೆಗಳತ್ತ ಮನ ತೊಡಗಿಸಿಕೊಳ್ಳಲು ಪ್ರೇರಿತವಾಯಿತು. ಅಷ್ಟರಲ್ಲಿ ಕೆಲಸದ ಕಮ್ಲಿ ಬಂದು ಗಿಡಗಳಿಗೆ ನೀರು ಹಾಯಿಸುವ ಪೈಪ್ ಜೋಡಿಸುತ್ತಿದ್ದು

ಕಂಡು ಹೌಹಾರಿ ಓಡಿ ಬಂದೆ. 'ಕಮ್ಲಿ, ಈ ದಿನ ನೀರಿನ ತಂಟೆಗೆ ಹೋಗಬೇಡ. ಅರ್ಧ ಬಕೀಟು ನೀರಲ್ಲಿ ಪಾತ್ರೆ ತೊಳೆದು ಬಿಡು, ಅಷ್ಟು ಸಾಕು' ಎಂದು ಎಲ್ಲಾ ವಿವರಿಸಿದೆ. ಅವಳಿಗೇನು ಸಂತೋಷವೇ ಆಯಿತು. ಎರಡು ಗಂಟೆ ಹಿಡಿಯುತ್ತಿದ್ದ ನಮ್ಮ ಮನೆ ಕೆಲಸ ಅರ್ಧ ಗಂಟೆಯಲ್ಲೇ ಮುಗಿಯುತ್ತೆ ಅಂದ್ರೆ ಅವಳಿಗೆ ಸಂತೋಷ ಆಗದಿರುತ್ತೇ? ಅರ್ಧ ಬಕೀಟು ನೀರಿನಲ್ಲಿ ಸ್ನಾನದ ಶಾಸ್ತ್ರ ಮುಗಿಸಿ, 'ಬೇಗ ಕರೆಂಟ್ ಬರುವಂತೆ ಮಾಡಪ್ಪಾ ತಂದೆ, ನಿನಗೆ ತುಪ್ಪದ ದೀಪ ಹಚ್ತೀನಿ' ಅಂತ ದೇವರಿಗೆ ಕೈಮುಗಿದೆ. ಸೆಕೆಯಲ್ಲಿ ಕುಳಿತು, ಮಾಡಿದ್ದ ಬರೀ ಅನ್ನ, ತಿಳಿಸಾರು ಊಟ ಮಾಡುವಾಗ ಯಾಕೋ ಅಳು ಬಂದು ಬಿಟ್ಟಿತು. 'ಅಲ್ಲಾ, ನಾನಿಲ್ಲಿ ಇಷ್ಟೆಲ್ಲಾ ತೊಂದರೆ ತಾಪತ್ರಯ, ಬೆಳಿಗ್ಗೆ ಬೆಳಿಗ್ಗೆ ಕೆ.ಇ.ಬಿ ಯಿಂದ ಮಂತ್ರಪುಷ್ಪ ಎಲ್ಲಾ ಪರಿಪಾಟು ಪಡುತ್ತಿರುವಾಗ, ಈ ನನ್ನ ಯಜಮಾನರು, ನಗರದ ಅತ್ಯಾಧುನಿಕ ಹೋಟೆಲ್ 'ಕೂಲ್ ಬ್ರೀಝ್' ನ ಎ.ಸಿ. ರೂಮಲ್ಲಿ ಊಟ ಸೊಗಸಾಗಿ ಸವಿದು, ಕೂಲಾಗಿ, ಭಾಷಣ ಕೇಳುತ್ತಾ ತೂಕಡಿಸುತ್ತಿರುತ್ತಾರಲ್ಲಾ? ಎಂದು ಕಲ್ಪಿಸಿಕೊಂಡೇ ಕೋಪ, ಅಸೂಯೆ, ಏಕಕಾಲದಲ್ಲಿ ಉಂಟಾಯಿತು. 'ಅವರವರು ಮಾಡಿದ ಕರ್ಮಫಲ! ಎಷ್ಟೋ ಬಡರೋಗಿಗಳಿಗೆ ಹಣ ತೆಗೆದುಕೊಳ್ಳದೆ, ಔಷಧಿಗಳನ್ನು ತಮ್ಮದೇ ಖರ್ಚಿನಲ್ಲಿ ಕೊಡಿಸಿ, ಪುಕ್ಕಟೆ ಚಿಕಿತ್ಸೆ ನೀಡಿ, 'ಬಡವರ ವೈದ್ಯ ಬಂಧು' ಎಂಬ ಬಿರುದನ್ನು ಅವರಿಂದ ಗಳಿಸಿಕೊಂಡಿದ್ದರ ಫಲ ಅಂತ ಕಾಣುತ್ತೆ. ಈ ದಿನ ಕರೆಂಟ್ ಸಮಸ್ಯೆಯಿಂದ ಪಾರಾಗಿ, ಐಷಾರಾಮಿ ಹೋಟೆಲಿನಲ್ಲಿ ಆನಂದವಾಗಿ ಕಾನ್ಫರೆನ್ಸಿನಲ್ಲಿ ಭಾಗಿಯಾಗಿರುವುದು. ಆದರೆ ನಾನು?ಕೆಲಸದ ಕಮ್ಲಿಗೆ ಹೋದ ತಿಂಗಳು, ಅವರ ದೊಡ್ಡಪ್ಪನ ನಾದಿನಿಯ ಮೊಮ್ಮಗಳ ಮದುವೆಗೆ ಒಂದು ವಾರ ಹೋಗುತ್ತೇನೆಂದು, ಸಾವಿರ ರೂಪಾಯಿ ಕೇಳಿದಾಗ, 'ವಾರ ಪೂರ್ತಿ ಕೆಲಸ ತಪ್ಪಿಸೋದಲ್ಲದೆ, ಸಾವಿರ ರೂಪಾಯಿ ಬೇರೆ ಕೇಡು' ಎಂದು ಖಾರವಾಗಿ ಪ್ರತಿಕ್ರಿಯಿಸಿದ್ದರ ಫಲ ಈಗ ನಾನು ಈ ಕಷ್ಟಗಳ ಸುಳಿಯಲ್ಲಿ ಸಿಲುಕುವಂತಾಯಿತು ಎಂದು ಪರಿತಪಿಸಿದೆ. 'ದೇವರೇ, ಬೇಗನೇ ಮನೆ ಕರೆಂಟ್ ನಿಂದ ಬೆಳಗಲಿ, ನಾಳೇನೇ ಕಮ್ಲಿಗೆ ಪ್ರಾಯಶ್ಚಿತ್ತವಾಗಿ ಎರಡು ಸಾವಿರ ರೂಪಾಯಿ ಕೊಡುತ್ತೇನೆ' ಎಂದು ಹರಕೆ ಹೊತ್ತೆ.

ಇಷ್ಟರಲ್ಲೇ ಜೊಂಪು ಬಂದಂತಾಗಿ, ಗಾಳಿ ಹಾಕಿಕೊಳ್ಳುತ್ತಾ ಮಧ್ಯಾಹ್ನದ ಲಘುನಿದ್ರೆಗೆ ಜಾರಿದೆ. ಸಂಜೆ ನಾಲ್ಕಕ್ಕೆ ಬೆವರಿನ ಸ್ನಾನಕ್ಕೆ ಎಚ್ಚರವಾಗಿ, ಮುಷ್ಕರ ಹೂಡಿರುವ ಫ್ಯಾನಿನತ್ತ ಅಸಹಾಯಕ ನೋಟ ಬೀರಿದೆ. 'ಮತ್ತೆ, ಮತ್ತೆ ಫೋನ್ ಮಾಡಿ ತ್ರಾಸ ಕೊಡಬ್ಯಾಡ್ರಿ' ಎಂಬ ಎಚ್ಚರಿಕೆಯ ಮಾತನ್ನು ನಿರ್ಲಕ್ಷಿಸಿ ಭಂಡ ಧೈರ್ಯದಿಂದ ಮತ್ತೆ ವಿದ್ಯುತ್ ಕಛೇರಿಗೆ ಫೋನಾಯಿಸಿದೆ. ಈ ಸಲ ಮಾತನಾಡಿದ ವ್ಯಕ್ತಿ ಬೇರೆಯಾಗಿದ್ದ. 'ಇನ್ನೂ ಯಾರೂ ಬಂದಿಲ್ವಾ ಮೇಡಮ್? ನೆನ್ನೆ ಗಾಳಿಗೆ ಮರಗಳು ಬಿದ್ದಿದ್ದು ಮೇಜರ್ ರಿಪೇರಿಗೆ ಹೋಗಿದ್ದಾರೆ. ಅದು ಮುಗಿಸಿಕೊಂಡು ನಿಮ್ಮಲ್ಲಿ ಬರ್ತಾರೆ' ಅಂತ ನಯವಾಗಿಯೇ ಹೇಳಿದ.

ಸಂಜೆ ಆರು ಗಂಟೆಗೆ ನಮ್ಮ ರಾಯರು ಕಾನ್ಫರೆನ್ಸಿನಿಂದ ಮರಳಿ ಬಂದು, 'ಏನೇ, ಇನ್ನೂ ಬಂದಿಲ್ವಾ ಕರೆಂಟ್ ?' ಎಂದರು.

'ಬರುತ್ತೇರಿ ಬರುತ್ತೆ. ನೀವಲ್ಲಿ ಆರಾಮಾಗಿ ಎ.ಸಿ ಸಭಾಂಗಣದಲ್ಲಿ ಕೂತು ಭಾಷಣ ಮಾಡಿ, ಕೇಳಿ ಬೇರೇ ಲೋಕದಲ್ಲೇ ಇದ್ರಿ. ನಾನು ಇಲ್ಲಿ ಕರೆಂಟಿಗೋಸ್ಕರ

ಎಲ್ಲಾರ ಹತ್ರ ಗೋಗರೆದು, ಮಂತ್ರಪುಷ್ಪಾನೂ ಮಾಡಿಸಿಕೊಂಡು, ಬೆವರಿನಲ್ಲಿ ತೊಯ್ದು ಹೋಗಿದ್ದೀನಿ' ಬೆಳಗಿನಿಂದ ಅದುಮಿಟ್ಟಿದ್ದ ಭಾವನೆಗಳೆಲ್ಲವನ್ನೂ ಹೊರಹಾಕಿದೆ.

'ಯಾಕೆ, ಹಾಗಿ ಸಿಡುಕ್ತೀಯಾ? ನಿಧಾನವಾಗಿ ಸರಿಯಾಗಿ ಹೇಳು' ಸೋಫಾದಲ್ಲಿ ಒರಗುತ್ತಾ ಕೇಳಿದರು. ಎಲ್ಲಾ ಕಂತೆ ಪುರಾಣ ಬಿಚ್ಚಿಟ್ಟೆ.

ಕಷ್ಟದಲ್ಲಿ ಭಾಗಿಯಾಗಲು ನನ್ನೊಂದಿಗೆ ಸಪ್ತಪದಿ ತುಳಿದವರು ಬಂದರೆಂದು ಸಮಾಧಾನವಾಗಿತ್ತು.

'ನೋಡು, ತುಂಬಾ ಟೆನ್ಷನ್ ಮಾಡಿಕೊಂಡಿದ್ದೀಯಾ, ಫ್ರೆಷ್ ಆಗಿ ಬರ್ತೀನಿ. ಹಾಗೇ ಸುತ್ತಾಡಿಕೊಂದು ಬರೋಣ' ಎಂದು ನನ್ನನ್ನು ಸಂತೈಸಿದರು. ಹೊರಗೆ ಸುತ್ತಾಡಿಕೊಂಡು ರಾತ್ರಿ ಎಂಟು ಗಂಟೆಗೆ ಬಂದಾಗ ನಮ್ಮ ಮನೆ ಹೊರತಾಗಿ ಎಲ್ಲಾ ಮನೆಗಳಲ್ಲೂ ಲೈಟುಗಳು ಪ್ರಜ್ವಲಿಸಿ, ನಮ್ಮ ಮನೆ ಮಾತ್ರ ಕತ್ತಲಲ್ಲಿ ಅನಾಥವಾದಂತೆ ಕಂಡು ದುಃಖ ಉಮ್ಮಳಿಸಿ ಬಂತು. ದೇವರ ದರ್ಶನಕ್ಕೆ ಕಾಯುವ ಭಕ್ತರಂತೆ, ಅಂಗಳದಲ್ಲಿ ಕುರ್ಚಿಗಳನ್ನು ಹಾಕಿಕೊಂಡು ರಸ್ತೆಯತ್ತಲೇ ನೋಡುತ್ತಾ ಕುಳಿತೆವು. ಯಾರೋ ಇಬ್ಬರು ಬೈಕ್ ನಲ್ಲಿ ಬಂದು,

'ಡಾ. ರಮೇಶ್ ಅವರ ಮನೆ ಇದೇ ಏನ್ರೀ? ಇದೇ ಏನ್ರೀ ಎಲೆಕ್ಟ್ರಿಕ್ ಪೋಲ್?' ಎಂದರು. ನಿಧಿ ದೊರೆತಷ್ಟು ಸಂತೋಷವಾಗಿತ್ತು.

'ಬೆಳಗಿನಿಂದ ಕರೆಂಟ್ ಇಲ್ಲಾರೀ' ಅನ್ನುತ್ತಿದ್ದಂತೆ 'ಅದಕ್ಕೇ ಬಂದಿರೋದು, ನಿಚ್ಚಣಿಕೆ ಕೊಡ್ರಿ ಬೇಗ' ಎಂದರು.

'ಅದು ಸ್ವಲ್ಪ ಮುರಿದಿದೆ' ಉಗುಳು ನುಂಗುತ್ತಾ ಹೇಳಿದೆ.

'ಇರ್ಲಿರೀ, ಎಷ್ಟು ಹಲ್ಲದಾವೆ?' ಕತ್ತಲಲ್ಲಿ ಅವನ ಮುಖಭಾವ ಕಾಣಲಿಲ್ಲ.

'ಹಲ್ಲು!?' ಗಲಿಬಿಲಿಗೊಂಡೆ. 'ಏಣಿ ಹತ್ತಕ್ಕೆ ಸ್ಟೆಪ್ಸ್ ಎಷ್ಟಿವೆ ಅಂತ ಕೇಳ್ತಿದ್ದಾನೆ' ಪತಿರಾಯರು ವಿವರಿಸಿದರು, ಮತ್ತೆ ಅವರೇ, 'ಪರವಾಗಿಲ್ಲ, ಮೊನ್ನೆ ಸರಿ ಮಾಡ್ಸಿದೀವಿ' ಎಂದು ಟೆರೇಸಿನ ಮೇಲಿದ್ದ ಏಣಿಯನ್ನು ಇಳಿಸಿಕೊಟ್ಟರು. ನಾನು ಟಾರ್ಚ್ ಹಿಡಿದು ಸೇವೆ ಮಾಡುತ್ತಿದ್ದೆ.

ಕಂಬವನ್ನು ಟಾರ್ಚ್ ಲೈಟಲ್ಲಿ ಪರಿಶೀಲಿಸಿ 'ಇಲ್ಲಿ ನಿಮ್ಮ ಕೇಬಲ್ ವೈರ್ ಸುಟ್ಟಿದ್ರಿ. ಇದು ನಮ್ಮ ವ್ಯಾಪ್ತಿಗೆ ಬರೋದಿಲ್ಲ. ನಿಮ್ಮ ಎಲೆಕ್ಟ್ರಿಷಿಯನ್ ಕರೆಸಿ ಸರಿ ಮಾಡಿಸಿಕೊಳ್ರಿ' ಅಂತ ಡಯಾಗ್ನೋಸ್ ಮಾಡಿ ಸರ್ಜರಿಗೆ ರೆಫರ್ ಮಾಡಿ ಹೊರಟೇ ಬಿಟ್ಟರು.

ಮತ್ತೆ ವೀರೇಶನೇ ಗತಿ. ಯಥಾಪ್ರಕಾರ ಗೋಳು ತೋಡಿಕೊಂಡೆ.

'ಅಮ್ಮಾವ್ರೆ. ನಾನು ಸಿದ್ಧಾರೂಢ ಮಠದ ಹತ್ರ ಮಾವನ ಮನಿಗೆ ಬಂದೀನ್ರಿ. ಮುಂಜಾನೆ ಜಲ್ದಿ ಬಂದು ಸರಿಮಾಡಿಕೊಡ್ತೀನಿ' ಅಂತ ಆಶ್ವಾಸನೆ ಕೊಟ್ಟ. ಎಲ್ಲಾ ಒಟ್ನಲ್ಲಿ ನನ್ನ ಗ್ರಹಚಾರ" ಕ್ಯಾಂಡಲ್ ಲೈಟ್ ಡಿನ್ನರ್ ಮುಗಿಸಿದೆವು. ಇಡೀ ದಿನದ ಮಾನಸಿಕ ಒತ್ತಡದಿಂದ, ಆಯಾಸಗೊಂಡಿದ್ದರ ಫಲವೋ ಎಂಬಂತೆ ನಿದ್ರಾದೇವಿ ತಾನೂ ಸೆಖೆಯಿಂದ ಬಸವಳಿದು ನನ್ನ ತಬ್ಬಿದ್ದಳು.

ಬೆಳಗಿನ ಕಾಫಿ, ಉಪಹಾರ ಸೇವಿಸಿ ನಮ್ಮವರು ಆಸ್ಪತ್ರೆಗೆ ಹೊರಟರು. 'ವೀರೇಶಿಗೆ

ಬೇಗ ಫೋನ್ ಮಾಡು' ಅಂತ ಹಾಸ್ಯವಾಗಿ ಆಜ್ಞಾಪಿಸಿದರು. ವೀರೇಶಿಗೆ ನೆನೆಪಿಸಿದಾಗ, 'ಅಮ್ಮಾವ್ರೆ, ನಮ್ಮ ಭಾವಮ್ಯೆದ ಕಾರಿನಲ್ಲಿ ಕರ್ಕೋರ್ಂಡು ಬರ್ತಾನೆ. ಇನ್ನು ಹದಿನೈದು ನಿಮಿಷದಾಗೆ ಅಲ್ಲಿರ್ತೀನಿ' ಮತ್ತೆ ಆಶ್ವಾಸನೆ ಕೊಟ್ಟ. ಯಾರ ಹೃದಯವೂ ಕರಗುವಂತೆ ಬಿನ್ನವಿಸಿಕೊಂಡೆ.

'ನಿಮ್ಮ ಕಷ್ಟ ಅರ್ಥ ಆಗ್ತೈತೆ ಅಮ್ಮಾವ್ರೆ. ಭಾವಮ್ಯೆದ ರಾಣಿ ಚೆನ್ನಮ್ಮ ಸರ್ಕಲ್ ನಲ್ಲಿ ಬಿಟ್ಟು ಹೊರಟು ಹೋದ. ಸರ್ಕಲ್ ನಾಗೆ ಭಾರೀ ಗಲಾಟೆ ನಡೆದೈತ್ರೀ. ಯಾವುದೋ ಕಾರಣಕ್ಕೆ ಹುಬ್ಬಳ್ಳಿ ಬಂದ್ ಅಂತ ಆಟೋದವ್ರು ಬಿಡವಲ್ರಿ' ಎಂದ. ಎದೆ ಧಸಕ್ಕೆಂದಿತು.

ಪೇಪರಿನಲ್ಲಿ ಬಂದಿತ್ತು. ತಕ್ಷಣ ಉಪಾಯ ಹೊಳೆದು, ಪರಿಹಾರ ಸೂಚಿಸಿದೆ. 'ನೋಡಪ್ಪಾ ವೀರೇಶಿ, ಹೇಗಾದರೂ 'ರೇವಣ್ ಕರ್ ಹೋಟೆಲಿನ ತನಕ ಬಾ. ಅಲ್ಲಿ ಮುಟ್ಟಿದ ತಕ್ಷಣ ನಮ್ಮ ಡಾಕ್ಟರಿಗೆ ಫೋನ್ ಮಾಡು. ನಿನ್ನನ್ನು ಕರೆದುಕೊಂಡು ಬರ್ತಾರೆ' ಅಂತ ಹೇಳಿ ನಮ್ಮ ರಾಯರ ನಂಬರ್ ಕಡೆ ಗಮನ ಹರಿಸಿದೆ.

'ಪೇಶಂಟ್ ಎಕ್ಸಾಮಿನ್ ಮಾಡುತ್ತಿದ್ದೇನೆ' ಎನ್ನುತ್ತಿದ್ದಂತೆ ಮತ್ತೆ ಬಿ.ಪಿ. ಏರಿದಂತಾಗಿ, 'ರೀ, ಯಾವುದು ಎಮರ್ಜೆನ್ಸಿ?' ನೆನ್ನೆಯಿಂದ ಕಂಗಾಲಾಗಿ ಹೋಗಿದ್ದೀನಿ. ವೀರೇಶಿ ಪೋನ್ ಬರುತ್ತಲೇ ತಕ್ಷಣ ಅವನನ್ನು ಕರೆದುಕೊಂಡು ಬಂದು ನಿಮ್ಮ ಬೇರೆ ಎಮರ್ಜೆನ್ಸಿ ಅಟೆಂಡ್ ಮಾಡಿ' ಫೈನಲ್ ಎಂಬಂತೆ ಹೇಳಿಬಿಟ್ಟೆ.

ಅಂತೂ, ಇಂತೂ ಮಧ್ಯಾಹ್ನ ಹನ್ನೆರಡು ಗಂಟೆಗೆ ವೀರೇಶಿಯ ಆಗಮನವಾಯ್ತು. ಮೊದಲೇ ಹೇಳಿದ್ದರಿಂದ ಕೇಬಲ್ ವೈರ್, ಮತ್ತಿತರ ಶಸ್ತ್ರಗಳ ಸಮೇತ ಬಂದಿದ್ದ. ಏಣಿ ಹತ್ತಿ, ಶಸ್ತ್ರಚಿಕಿತ್ಸೆ ಮಾಡಿ, ಹೊಸ ಕೇಬಲ್ ವೈರ್ ಹಾಕಿ ಮೇನ್ಸ್ ಆನ್ ಮಾಡಿದ. ಹಾಕಿದ್ದ ದೀಪಗಳು ಬೆಳಗಲಾರಂಭಿಸಿದವು. ಫ್ಯಾನ್ ಗಳು ವಿಷ್ಣುಚಕ್ರದಂತೆ ತಿರುಗಲಾರಂಭಿಸಿದವು. ತೆಪ್ಪಗಿದ್ದ ಫ್ರಿಜ್ ಕೆಲಸ ಶುರು ಮಾಡಿತು. ನೀರಿನ ಪಂಪ್ ಶಬ್ದ ಮಾಡುತ್ತಾ ಮೇಲಿನ ಟ್ಯಾಂಕ್ ತುಂಬಲಾರಂಭಿಸಿತು. ಹರ್ಷಾತಿರೇಕದಿಂದ ನನ್ನ ಹೃದಯ ತುಂಬಿ ಬಂದು ಕಂಗಳಲ್ಲಿ ಆನಂದ ಬಾಷ್ಪ ತಾನೇ ಕಾಣಿಸಿಕೊಂಡಿತ್ತು. ವೀರೇಶಿ ಆ ಕ್ಷಣ ನನಗೆ ಸಾಕ್ಷಾತ್ ಭಗವಂತನ ರೂಪದಂತೆ ಕಾಣಿಸಿಕೊಂಡಿದ್ದ. ನೂರರ ನೋಟುಗಳು ಕೈಗೆ ಸಿಕ್ಕಷ್ಟು ಅವನಿಗೆ ಸಂತೋಷದಿಂದ ಅರ್ಪಿಸಿದೆ.

'ಇಷ್ಟೊಂದು ಯಾಕೆ ಅಮ್ಮಾವ್ರೆ?' ಅಂತ ಅವನೆಂದಾಗ, 'ವೀರೇಶಿ ನಿನ್ನ ಉಪಕಾರಕ್ಕೆ ಥ್ಯಾಂಕ್ಸ್ ಹ್ಯಾಗೆ ಹೇಳಬೇಕೆಂದು ಗೊತ್ತಾಗುತ್ತಾ ಇಲ್ಲಪ್ಪ. ಹುಬ್ಬಳ್ಳಿ ಬಂದ್ ಇದ್ದಾಗಲೂ ಬಂದು ನಮ್ಮ ಕಷ್ಟ ಪರಿಹಾರ ಮಾಡಿದೆ' ಅಂತೆಲ್ಲಾ ಬಡಬಡಿಸಿದೆ.

'ಹಾಗೆಲ್ಲಾ ಹೇಳಬ್ಯಾಡ್ರಿ ಅಮ್ಮಾ, ನನಗೆ ಭಿಡೆ ಆಗ್ತದೆ. ನನ್ನ ಕೆಲಸ ನಾನು ಮಾಡೀನಿ. ಡಾಕ್ಟರು ನಮಗೆ ಮಾಡಿರೋ ಉಪಕಾರದ ಮುಂದೆ ಇದು ಏನೂ ಅಲ್ಲ ಬಿಡ್ರೀ' ಅಂತ ಹೊರಟೇ ಬಿಟ್ಟ.

ಕರೆಂಟ್ ಬಂದ ಖುಷಿಯಲ್ಲಿ, 'ಇವತ್ತು ಏನಾದ್ರೂ ಸ್ವೀಟ್ ಮಾಡಿ ಸೆಲೆಬ್ರೇಟ್ ಮಾಡಲೇ ಬೇಕು' ಅಂದುಕೊಳ್ಳುತ್ತಾ,

'ಕತ್ತಲು ಕಳೆಯಿತು, ಬೆಳಕದು ಮೂಡಿತು, ಹರುಷದಿ ಮನ ನಲಿನಲಿದಾಡಿತು' ಕವಿತೆ ಮನದುಂಬಿ ಹಾಡುತ್ತಾ ಅಡುಗೆ ಮನೆಯತ್ತ ಹೆಜ್ಜೆ ಹಾಕಿದೆ.

■

# ವಿಶ್ವಕೋಶ

● **ಪಾಲಹಳ್ಳಿ ವಿಶ್ವನಾಥ್**

ನೀವು ಬಹಳ ಕಾದಂಬರಿಗಳನ್ನು ಓದುತ್ತೀರ ಅಲ್ಲವೇ? ಹಾಗಾದರೆ ನಿಮಗೆ ಗಣೇಶ್ ಭಟ್‌ಅವರ ಪರಿಚಯ ಇದೆ ಅಲ್ಲವೆ?

ಗಣೇಶ? ಭಟ್? ಈ ನಿಮ್ಮ ಪ್ರಶ್ನೆಗಳನ್ನು ನಾನು ನಿರೀಕ್ಷಿಸಿದ್ದೆ. ಅವರೋದಕ್ಷಿಣಧ್ರುವ ಬ್ಯಾಂಕಿನ ಮಾಮೂಲಿ ಕಾರಕೂನ.

ದೊಡ್ಡ ಕೆಲಸವೇನಲ್ಲ. ಆದರೆ ಸರ್ಕಾರೀ ನೌಕರಿ. ಎಲ್ಲರನ್ನೂ ಮಾತಾಡಿಸಿಕೊಂಡಿರುತ್ತಿದ್ದರು. ಸ್ನೇಹಜೀವಿ. ಬಿಡಿ, ಅವರನ್ನುಕಟ್ಟಿಕೊಂಡು ನಮಗೇನಾಗಬೇಕು ಎಂದಿರಾ? ಹೇಗೆ ಬಿಡಲು ಸಾಧ್ಯ? ಅವರೇ ನಮ್ಮಕಥೆಯ ನಾಯಕರು. ಈಗ ಮತ್ತೊಂದು ಪ್ರಶ್ನೆ? ನಿಮಗೆ ಏಕದಂತ್ ನಾಯಕ್ ಗೊತ್ತೇ? ನಿಮ್ಮ ಮುಖದ ಮೇಲಿನ ನಗೆ ನೋಡಿದರೆ ಅವರ ಹೆಸರು ನಿಮಗೆ ಗೊತ್ತು ಎಂದಾಯಿತು. ಅವರ ಎಲ್ಲ ಕಾದಂಬರಿಗಳನ್ನೂ ಓದಿದ್ದೀನಿ ಎಂದಿರಾ? ಶಂಖದಿಂದ ಬರದ ನೀರು! ಅವರ ಬಹಳ ಖ್ಯಾತ ಪುಸ್ತಕ ! ಹೌದು, ಶಂಖವೆಂದರೆ ನಿಜವಾದ ಶಂಖವಲ್ಲ, ನೀರು ಎಂದರೆ ನಿಜವಾದ ನೀರೂ ಅಲ್ಲ ! ಅದು ನಿಮಗೆ ಗೊತ್ತಲ್ಲವೇ?

ಅಂತೂ ಬಹಳ ಜನಪ್ರಿಯವಾಯಿತು. ಅದರ ಮುಂದಿನ ಭಾಗ? ಶಂಖದಿಂದ ಬಂದ ನೀರು! ಜನಕ್ಕೆ ಯಾಕೋಇಷ್ಟವಾಗಲಿಲ್ಲ.

ಆದರೆ ಸಾಹಿತ್ಯಆಕಾಡೆಮಿಯ ಪ್ರಶಸ್ತಿ ಬಂದಿತಲ್ಲವೆ? ಹೀಗೇ ನೋಡಿ ಜನರಿಗೆಇಷ್ಟವಾಗೋದು ವಿಮರ್ಶಕರಿಗೆಇಷ್ಟವಾಗೋಲ್ಲ. ಮತ್ತು ವೈಸಿವರ್ಸ! ಒಟ್ಟಿನಲ್ಲಿ ಏಕದಂತ್ ನಮ್ಮ ಭಾಷೆಯ ಪ್ರಮುಖ ಕಾದಂಬರಿಕಾರರು. ನಿಮ್ಮ ಮುಖದ ಮೇಲೆ ಸ್ವಲ್ಪ ಅಸಹನೆ ಕಾಣಿಸ್ತಾ ಇದೆಯಲ್ಲಾ? ಗೊತ್ತಾಯಿತು ಬಿಡಿ. ಏಕ ದಂತ್‌ರಿಗೂ ಗಣೇಶ ಭಟ್‌ರಿಗೂ ಏನೂ ಸಂಬಂಧ ಎಂದು ಕೇಳ್ತಾ ಇದ್ದೀರಅಲ್ಲವೇ? ಹೇಳ್ತೀನಿ ಕೇಳಿ. ಬೆಂಗಳೂರಿನ ಬಳೆಪೇಟೆಯಲ್ಲಿ ನೀವು ಹಳೆಯ ಪುಸ್ತಕಗಳ ಅಂಗಡಿಗಳನ್ನು ನೋಡೇ ಇರ್ತೀರ. ಪುಸ್ತಕ ಪ್ರಿಯರಲ್ಲವೆ. ಕೆಲವು ಸತಿ ಬಹಳ ಒಳ್ಳೊಳ್ಳೆ ಪುಸ್ತಕಗಳು ಸಿಗುತ್ತಲ್ಲವೇ? ಅದರ ಜೊತೆ ಒಳ್ಳೆಯದಲ್ಲದ ಪುಸ್ತಕಗಳೂ ಸಿಗುತ್ತವೆ. ಅಲ್ಲ, ಆ ತರಹದ್ದಲ್ಲ ನಾನು ಹೇಳ್ತಾ ಇರೋದು. ಅಂದರೆ ಜನರಿಗ ಇಷ್ಟವಾಗದೆ ಮಾರಾಟವಾಗದೆ ಇರೋ ಪುಸ್ತಕಗಳು. ನಿಜ, ಅವುಗಳನ್ನು ಒಳ್ಳೆ ಪುಸ್ತಕ ಅಲ್ಲ ಅಂತ ಹೇಳಬಾರದು. ಇಷ್ಟವಾಗಲಿಲ್ಲ ಅಷ್ಟೆ. ಅಲ್ಲಿ ಸ್ವಲ್ಪ ಹುಡುಕಿದರೆ ನಿಮಗೆ 'ಊರಿಗೆ ಬರದ ನೀರೆ' ಎನ್ನುವ ಪುಸ್ತಕ ಕಾಣಿಸುತ್ತದೆ. ಹೆಚ್ಚೇನೂ ಹುಡುಕಬೇಕಿಲ್ಲ. ಖರ್ಚಾಗದ ಪುಸ್ತಕವಾದ್ದರಿಂದ ಹಲವಾರು ಪ್ರತಿಗಳು ಇರುತ್ತವೆ. ಲೇಖಕರ ಹೆಸರು ನೋಡಿ ಹೌದಲ್ಲ, ಗಣೇಶಭಟ್! ಹೌದು ನಮ್ಮ ನಾಯಕರೇ ಅವರು. ಇಡಿ ದಿನ ಬ್ಯಾಂಕಿನಲ್ಲಿ ಕೆಲಸಮಾಡಿ ಸಂಜೆ ಮನೆಗೆ ಬಂದು ಬಹಳ ಹುಮ್ಮಸ್ಸಿನಿಂದ ಒಂದೆರಡು ಪುಸ್ತಕ ಬರೆದರು. ಆದರೆ ಅವು ಖರ್ಚಾಗಲಿಲ್ಲಲ್ಲ. ಆಗ ಪ್ರಕಾಶಕರು ಅವರಿಗ 'ಒಂದು ಕಿವಿಮಾತು ಹೇಳಿದರು.

"ಅಂತ ಕಳಪೆ ಏನೂ ಇಲ್ಲ ಸಾರ್ ನಿಮ್ಮ ಪುಸ್ತಕ. ಆದರೆ ನೋಡಿ ತೊಂದರೆ

ಇರುವುದು ನಿಮ್ಮ ಹೆಸರಿನಲ್ಲಿ. ಗಣೇಶ ಅಂತ ಹೆಸರು ಹಾಕಿದರೆ ಮಹಾಭಾರತವೂ ಖರ್ಚಾಗುವುದಿಲ್ಲ. ಗೊತ್ತು, ಆವನೇ ಬರೆದಿದ್ದು? ನಿಮ್ಮ ಹೆಸರು ಬದಲಾಯಿಸಿಬಿಡಿ. ಬಹಳ ಸಪ್ಪೆ ಹೆಸರು"

" ವಿನಾಯಕ ಭಟ್ ಹೇಗಿದೆ?"

'ಭಟ್ ಬೇಡವೇ ಬೇಡ. ಬೇರೆ ತರದ ಪುಸ್ತಕ ಎಂದುಕೊಂಡು ಬಿಡಬಹುದು"

"ನಮಗೆ ಗಣೇಶ ಮನೆದೇವರು"

"ಸರಿ, ಈಗ ಏಕದಂತ್ ಹೇಗಿದೆ. ಸರಿಯಾಗಿದೆ ಅಲ್ಲವಾ? ಅದಕ್ಕೆ ನಾಯಕ ಸೇರಿಸಿಬಿಡೋಣ"

"ಏಕದಂತ ನಾಯಕ?"

"ಸ್ವಲ್ಪ ಫ್ಯಾಷನ್ಇರಬೇಕು. ಏಕದಂತ್ ನಾಯಕ್! ಹೇಗಿದೆ. ಭರ್ಜರಿ ಹೆಸರಲ್ಲವೆ?

ಆಯಿತು. ಅವರ ಮೊದಲನೆಯಕಾದಂಬರಿಯನ್ನು ಸ್ವಲ್ಪ ಬದಲಾವಣೆ ಮಾಡಿ ಹೊಸ ಹೆಸರಿನಲ್ಲಿ ಮುದ್ರಿಸಿದರು. ಅದೇ ಶಂಖದಿಂದ ಬರದ ನೀರು ! ಸುಮಾರು ಹಣ ಮಾಡಿತು. ಪ್ರಕಾಶಕರೂ ಖುಷಿಯಿಂದಇದ್ದರು. ಗಣೇಶ ಏಕದಂತರಾದ ಮೇಲೆ ಉತ್ಸಾಹವೂ ಹೆಚ್ಚಾಯಿತು. ಹೀಗೆಯೇ ಒಂದಾದ ಮೇಲೆ ಇನ್ನೊಂದು ಕಾದಂಬರಿ ಬರೆಯುತ್ತಲೆ ಹೋದರು. ಬಹಳ ಜನಪ್ರಿಯ ಲೇಖಕರೂಅದರು. ಬ್ಯಾಂಕಿನಲ್ಲೂ 'ಗಣೇಶ್ ಈಗ ಸ್ವಲ್ಪ ಜೋರಾಗಿದಾರಲ್ವ' ಎಂದು ಸಹೋದ್ಯೋಗಿಗಳು ಮಾತಾಡಿಕೊಳ್ಳುತ್ತಿದ್ದರು. ಹೀಗೇ ಒಂದು ಭಾನುವಾರ ಬೆಳಿಗ್ಗೆ ಗಣೇಶ್ ಒಂದು ಹೊಸ ಕಾದಂಬರಿ ಶುರುಮಾಡುತ್ತಿದ್ದರು. ಹೆಸರು ಏನಿಡೋಣ ಎಂದು ಸ್ವಲ್ಪ ಹೊತ್ತು ಯೋಚಿಸಿ ಮತ್ತೆ ಯಾವಾಗಲಾದರೂ ಸ್ಫೂರ್ತಿ ಬಂದಾಗ ನೋಡೋಣ ಎಂದುಕೊಂಡರು. ಕೈನಲ್ಲಿ ಪೆನ್ ಹಿಡಿದು ಬರೆಯಲು ಪ್ರಾರಂಭಿಸಿದರು. ಯುವತಿಯೊಬ್ಬಳು ಪೋಸ್ಟ ಮ್ಯಾನನೊಬ್ಬನನ್ನು ಪ್ರೀತಿಸಲು ಶುರುಮಾಡುತ್ತಾಳೆ. ಅಷ್ಟರಲ್ಲಿ ಮನೆಯ ಬೆಲ್ ಸದ್ದಾಯಿತು. ಹೊರಗಿನ ಬಾಗಿಲು ತೆಗೆದಾಗ ಕೈನಲ್ಲಿ ಒಂದು ಪಸ್ತಕದ ಚೀಲವನ್ನು ಇಟ್ಟುಕೊಂಡಿದ್ದ ವ್ಯಕ್ತಿ ಕಾಣಿಸಿದರು.

"ನಿಮ್ಮ ಹೆಸರು?"

"ಗಜಪತಿರಾಜು ಪುಸ್ತಕ ವ್ಯಾಪಾರಿ."

"ಹೆಸರುಎಲ್ಲೋ ಕೇಳಿದ್ದೇನೆ. ಒರಿಸ್ಸಾದ ರಾಜಮನೆತನದವರಲ್ಲವೇ? "

"ಹೌದು. ಅದೆಲ್ಲ ಹಳೆಯ ಕಥೆ. ನೀವು ಖ್ಯಾತಕಾದಂಬರಿಕಾರರು"

"ಏನೋ ಅಲ್ಪ ಸ್ವಲ್ಪಖ್ಯಾತಿಯ ಕಾದಂಬರಿಕಾರ ಅಂತ ಹೇಳಿಕೊಳ್ಳಬಹುದು. ಈಗ ಹೊಸ ಕಾದಂಬರಿ ಶುರು ಮಾಡುತ್ತಿದ್ದೇನೆ. ನನಗೆ ಹೆಚ್ಚು ಸಮಯವಿಲ್ಲ. ವಾರವೆಲ್ಲ ಬೇರೆ ಕೆಲಸ. ಪುಸ್ತಕಗಳ ದುಡ್ಡಿನಿಂದ ಬದುಕೋಕೆಆಗೋಲ್ಲ. ಅದಿರಲಿ, ನಿಮಗೆ ಏನು ಬೇಕಾಗಿತ್ತು. ನನಗೆ ಬಹಳ ಕೆಲಸಗಳಿವೆ".

"ಗೊತ್ತು ಸಾರ್! ನಿಮಗೆ ಹೆಚ್ಚು ಸಮಯವಿಲ್ಲ. ನೀವು ಬಹಳ ಸಂಶೋಧನೆ ಮಾಡಬೇಕಲ್ಲವೆ?. ಹತ್ತಾರು ಪುಸ್ತಕಗಳನ್ನು ತಿರುವಿ ಹಾಕಬೇಕು. ನೋಡಬೇಕು.

ಅದಕ್ಕೆ ಈ ವಿಶ್ವಕೋಶದ ಸಹಾಯ ತೆಗೆದುಕೊಳ್ಳಿ. ಹೆಸರು 'ಎಲ್ಲಾ ಇಲ್ಲಿ'. ಬಹಳ ಸಮಯ ಉಳಿಯುತ್ತದೆ. "

"ಸ್ವಾಮಿ, ಒಳಗೆ ಬನ್ನಿ ತೋರಿಸುತ್ತೇನೆ. ಬೇಕಾದಷ್ಟು ಆಕರ ಗ್ರಂಥಗಳಿವೆ. ಬ್ರಿಟಾನಿಕಾ ಎನ್ಸೈಕ್ಲೊಪೀಡಿಯ, ಜಿ.ವಿ ಅವರ ಪುಸ್ತಕಗಳು, ಮೈಸೂರು ವಿಶ್ವವಿದ್ಯಾಲಯದ.."

"ಸಾರ್,ಅವುಗಳನ್ನೆಲ್ಲಾ ತೊಗೊಂಡು ನೀವು ಹಣ ಪೋಲುಮಾಡಿದ್ದೀರಿ. 'ಎಲ್ಲಾಇಲ್ಲಿ ' ಅಂತಹ ಒಂದು ಪುಸ್ತಕ ಸಾಕು.

ಇದೊಂದು ಪುಸ್ತಕದಲ್ಲಿ ನಿಮಗೆ ಏನು ಬೇಕಾದರೂ ಸಿಗುತ್ತದೆ. "

"ನಾನು ಜನರನ್ನು ಗಮನಿಸಿ ಬರೆಯುತ್ತೇನೆ. ಸಂಶೋಧನೆ ಗಿಂಶೋಧನೆ ಏನೂ ಹೆಚ್ಚಿಲ್ಲ"

"ಇಲ್ಲ ಸಾರ್! ಏನೇ ಅದರೂಇಂತಹ ಪುಸ್ತಕ ಬೇಕೇ ಬೇಕಾಗುತ್ತದೆ. ನೋಡಿ ಅ – ಅಗಸ ಇದರ ಕೆಳಗೆ ಅವರ ಇಡೀ ಚರಿತ್ರೆಯೆ ಸಿಗುತ್ತದೆ. ಕೊಳೆಯ ಅರಿವು– ಮನುಷ್ಯ ಯಾವಾಗ ಬಟ್ಟೆ ಒಗೆಯಲು ಪ್ರಾರಂಭಿಸಿದ–ಸಾಬೂನು ಯಾವಾಗ ಹುಟ್ಟಿತು– ಮಹಾನಗರಗಳಲ್ಲಿ ಧೋಬೀಘಾಟುಗಳ ಉದಯ– ವಾಷಿಂಗ ಮಷೀನುಗಳ ಆಗಮನ – ಅಗಸ ಪದ್ಧತಿಯ ಅವಸಾನ–

"ಸ್ವಾಮೀ ಗಜಪತಿಗಳೇ! ನನಗೆ ಅಷ್ಟೆಲ್ಲಾಕುತೂಹಲವಿಲ್ಲ".

"ಆ! ಕುತೂಹಲ! ಎಂತಹ ಪದ. ನೋಡಿ ಈ ಪುಸ್ತಕ ತೆಗೆದು 'ಕ' ಗೆ ಹೋಗುತ್ತಿದ್ದೇನೆ. ಕು ಗೆ ಮುಂಚೆ ಬೇಕಾದಷ್ಟು ಸ್ವಾರಸ್ಯದ ಪದಗಳಿವೆ. ಕವಿ, ಕಾಮ, ಕಿವಿ, ಕೀಟ.. ಕವಿ ಪದ ಇಷ್ಟವಾಗುತ್ತದೆ. ನೀವು ಲೇಖಕರಲ್ಲವೆ ! ಬೇಡ ಎನ್ನುತ್ತಿದ್ದೀರಾ? ನಿಮಗೆ ಚೆನ್ನಾಗಿಯೇ ಗೊತ್ತಿರುತ್ತದೆ. ಅಥವಾ ಕವಿತೆಗಳು ಇಷ್ಟವಿಲ್ಲವೋ ಏನೋ. ಆಯಿತು ಮುಂದಿನದು ಕಾಮ. ನೋಡಿ, ಇಲ್ಲಿ ರತಿ ಮನ್ಮಥರಕಥೆ ಇದೆ, ಶಿವನ ಮೂರನೆಯಕಣ್ಣು. ಕಾಮದಹನ. ಇದು ಭೌತಿಕದಹನವೇ ಆಗಬೇಕು ಎಂದಲ್ಲ. ಅದೂ ನಿಮಗೆ ಗೊತ್ತು.

ಇಲ್ಲಿ ವಾತ್ಸಾಯನನ ಬಗ್ಗೆ. ಕಾಮಸೂತ್ರದ ಬಗ್ಗೆ ಆರು ಪುಟಗಳು. ಗಿರೀಶ್ ಕಾರ್ನಾಡರ ಉತ್ಸವ ಚಿತ್ರದ ವಾತ್ಸಾಯನ ಬಗ್ಗೆಯೂ ಮಾಹಿತಿಇದೆ . ಮುಂದಿನದು ಕಿವಿ! ಏನು ಹೊಳೆಯುತ್ತೆ ಹೇಳಿ! ಕಿವಿ! ಗಣೇಶನಿಗೆ ತಕ್ಷಣ ಕಿವಿ ಕೇಳಿಸದ ಅವನ ಅಜ್ಜನ ನೆನಪು ಬಂದಿತು. ಎಂತಹ ಪುಣ್ಯವಂತರು ಎಂದುಕೊಂಡ. ಗಜಪತಿರಾಜು ವಿಶ್ವಕೋಶದ ಬಗ್ಗೆ ಮಾತಾಡುತ್ತಲೇಇದ್ದರು.

"ಕಿವಿ – ಬಹಳ ಮುಖ್ಯ ಇಂದ್ರಿಯ– ಕಿವಿಯ ಮೂರುಭಾಗಗಳು– ಗಂಗೆ ತೂರಿಬಂದ ಜಾಹ್ನವಿ ಋಷಿಗಳ ಕಿವಿಯ ಬಗ್ಗೆ– ಕಿವಿ ಹಣ್ಣು. ನ್ಯೂಜಿಲೆಂಡಿನದು– ಆಧುನಿಕ ಶ್ರವಣ ಯಂತ್ರಗಳು –ಬೀಥೋವನ್‌ಗೆ ಕಿವೀನೆ ಕೇಳಿಸ್ತಾ ಇರಲಿಲ್ಲವಂತೆ 'ಬಿ'ಗೆ ಆಮೇಲೆ ಹೊಗೋಣ. ಈಗ ಕೀಟ !"

ಗಣೇಶ 'ನೀನು ನನಗೆ ತೊಂದರೆ ಕೊಡುತ್ತಿರುವ ಕೀಟ' ಎಂದು ಮೆಲ್ಲಗೆ ಹೇಳಿದ. ನಿಧಾನವಾಗಿ ಗಣೇಶ ಭಟ್ ಹಿಂದೆ ಸರಿದ.

ಇವನಿಗೇಕೆ ನಾನು ಬಗ್ಗಬೇಕು ಎನ್ನುತ್ತಾ ಏಕದಂತ ನಾಯಕ್ ಮುಂದೆ ಬಂದರು.

'ಇಷ್ಟು ಹೊತ್ತು ಮಾತಾಡಿದೀವಿ. ಈ ಉಪಚಾರಎಲ್ಲಾ ಏಕೆ? ಏಕವಚನವನ್ನೇ ಉಪಯೋಗಿಸೋಣ. ಅಲ್ಲಯ್ಯ ಗಜಪತಿ ! ನನ್ನಕಾದಂಬರಿಗಳನ್ನು ಓದಿದ್ದೀಯ?"

'ಇಲ್ಲ. ತಡೆಯಿರಿ. ಈ ವಿಶ್ವಕೋಶದಲ್ಲಿ ನಾನಿನ್ನೂ 'ಕುತೂಹಲ' ಕ್ಕೆ ಬಂದೇ ಇಲ್ಲ'

'ಅದೆಲ್ಲಾ ಬೇಡಪ್ಪ ಗಜಪತಿ! ಇಂಗ್ಲಿಷಿನಲ್ಲಿ 'ಕುತೂಹಲ ಬೆಕ್ಕನ್ನು ಕೊಂದಿತು ಅಂತ ಹೇಳ್ತಾರೆ. ಗೊತ್ತು, ಅದೂ ಇರುತ್ತೆ ನಿನ್ನ ಪುಸ್ತಕದಲ್ಲಿ! ಅದಿರಲಿ! ನೀನು ನನ್ನ ಪುಸ್ತಕ 'ಶಂಖದಿಂದ ಬಂದ ನೀರು' ಓದಲೆ ಬೇಕು. ಓದಿಲ್ಲ ಅಲ್ಲವೆ? "

'ಸಾರ್, ನಾನು ಕಥೆ, ಕಾದಂಬರಿ ಓದೋಲ್ಲ.. ನೋಡಿ, ಈ ಒಂದು ಪುಸ್ತಕದಲ್ಲಿ ನಿಮಗೆ ಎಲ್ಲಾ ಸಿಗುತ್ತೆ. 'ಎಲ್ಲಾಇಲ್ಲಿ'.

'ಗಜಪತಿ! ಇನ್ನೂ ಸಾರ್‌ಅಂತ ಹೇಳ್ತಿದೀಯಲ್ಲ. ಕಾದಂಬರಿ ಓದೋಲ್ಲ ಅಂದರೆ ಏನಪ್ಪ ! ನಿನ್ನ ಬಿಡುವು ಸಮಯದಲ್ಲಿ ಏನು ಮಾಡ್ತೀಯ? ಈಗ ನಾನು ಮಾತಾಡ್ತೀನಿ. ಸ್ವಲ್ಪ ಕೇಳಿಸಿಕೊ. ಕನ್ನಡೀಲಿ ನಿನ್ನ ಮುಖ ನೋಡಿಕೊಂಡಿದ್ದೀಯ? ಮುಖದಲ್ಲಿ ನಗೆಯೆಇಲ್ಲವಲ್ಲ! ಸೋತುಬಿಟ್ಟಿದೆ ಮುಖ! ನಿನಗೆ ಎಷ್ಟು ವಯಸ್ಸು. ಐವತ್ತು ಆಗಿರಬೇಕಲ್ಲವೇ?"

'ಇಲ್ಲ,ಸಾರ್1 ಇನ್ನೂ ಮೂವತ್ತೈದು. ನಿನ್ನೆ ಸರಿಯಾಗಿ ನಿದ್ದೆ ಮಾಡಿಲ್ಲ. ಅದಕ್ಕೇ..'

'ಇಲ್ಲ ಗಜಪತಿ ನೀನು ಬದಲಾಯಿಸಲೇಬೇಕು. ನಿನ್ನೆ ಅಂತ ಹೇಳಿದೆ? ನಿಜ ಹೇಳು! ಮೊನ್ನೆನೂ ಅದೇ ಅಲ್ವಾ? ಗೊತ್ತಾಯಿತು.

ಸರಿಯಾಗಿ ನಿದ್ದೆ ಮಾಡಿ ಬಹಳ ದಿವಸ ಆಯ್ತು ಅಲ್ಲವಾ? ರಾಜ ಮನೆತನದವನು ! ಹೇಗಾಗಿ ಬಿಟ್ಟಿದೀಯ! ಈ ವಿಶ್ವಕೋಶಾನ ಇಟ್ಟುಕೊಂಡು ಓಡಾಡ್ತಾ ಇದ್ದೀಯ ! ಮನರಂಜನೆ ಬೇಡವೇನಪ್ಪ ! ಕಥಗಿಥೆ ಓದಿದರೆ ಮನಸ್ಸು ಹಗುರಆಗುತ್ತೆ.'

'ಏಕದಂತ ಸಾರ್! ಈ ಕೋಶಕ್ಕೆ ರಿಯಾಯಿತಿಇದೆ. 5% ನಿಮಗೋಸ್ಕರ 10% ಮಾಡ್ತೀನಿ'

'ತಿರುಗಿ ಅದೇ ಸಾರ್, ಅದೇ ವಿಶ್ವಕೋಶ! ವಿಶ್ವಕೋಶ! ಆರೋಗ್ಯ ನೋಡಿಕೋಪ್ಪ. ನಗೋದು ಕಲಿತುಕೊ! ಅಪರಂಜಿ ಓದು !

ಗೊರೂರು ಸಾಹಿತ್ಯ ಓದು, ಮಾಸ್ತಿಯವರ ಕಥೆಗಳ್ನ ಓದು, ಕಾರಂತರ ಕಾದಂಬರಿಗಳನ್ನ ಓದು.."

'ಸಾರ್‌ಏಕದಂತ್‌ಅವರೇ '

'ಗೊತ್ತು, ಅವುಗಳನ್ನೆಲ್ಲಾ ಓದಬೇಕಾದರೆ ಅಂಗಡಿಗೆ ಹೋಗಿ ತೊಗೋಬೇಕಾಗುತ್ತೆ. ಸದ್ಯಕ್ಕೆ ನನ್ನ ಕಾದಂಬರಿ ಓದು. ಮನಸ್ಸು ತಿಳಿಯಾಗುತ್ತದೆ. ಈ ಅಮರಕೋಶ, ವಿಶ್ವಕೋಶ ಎಲ್ಲಾ ಬಿಟ್ಟು ಬಿಡು. ನಿಧಾನವಾಗಿ ಈ 50ರ ಕಳೆ

ಹೋಗಿ 35ರ ಕಳೆ ಬರುತ್ತೆ."


'ಆಗಲಿ ಸಾರ್! ನಿಮ್ಮ ಪುಸ್ತಕ. ದುಡ್ಡು .."

'ಓದೋಕೆ ನಿನಗೆ ಹಾಗೇ ಕೊಡ್ತೀನಿ. ದುಡ್ಡೇನೂ ಬೇಡ. ಇನ್ನೊಂದು ಮಾತು ಹೇಳ್ತೀನಿ ಕೇಳು ಎಷ್ಟು ದಿನ ಅಂತ ಈ ಭಾರದ ಕೋಶಗಳನ್ನ ಹೊತ್ತುಕೊಂಡು ಓಡಾಡ್ತೀಯ? ನನ್ನದೊಂದು 5 ಪುಸ್ತಕಗಳನ್ನು ತೊಗೊ. ಸುಲಭವಾಗಿ ಮಾರಾಟವಾಗುತ್ತೆ. ಇವುಗಳ ಬೆಲೆ 750 ರೂಪಾಯಿಗಳು. ಆದರೆ ನಿನಗೆ ಅರ್ಧ ಬೆಲೆಗೆ ಕೊಡ್ತೀನಿ.. ಏನು ಹೇಳ್ತೀಯ?'

ಗಜಪತಿರಾಜು ಹಣಕೊಟ್ಟು ಪುಸ್ತಕ ತೆಗೆದುಕೊಂಡು ತಮ್ಮ ಚೀಲದಲ್ಲಿ ಇರಿಸಿಕೊಂಡರು. "ಎಲ್ಲಿ, ಒಂದು ಸಣ್ಣ ನಗೆ ಕೊಡಿ ಗಜಪತಿರಾಜು ಅವರೇ" ಎಂದು ಏಕದಂತ ಕೇಳಿದಾಗ ಮನೆಯ ಹೊರಗೆ ಕಾಲಿಡುತ್ತಿದ್ದ ಗಜಪತಿರಾಜು ಕಷ್ಟಪಟ್ಟು ನಕ್ಕರು.

(ಸಾಕಿ (ಮನ್ರೊ (1870–1916)) ಅವರ ' ಮಾರ್ಕ' ಕಥೆಯ ಕನ್ನಡ ರೂಪಾಂತರ. ಸ್ವಲ್ಪ ಬದಲಾವಣೆಗಳನ್ನೂ ಮಾಡಿದೆ)

■




**ಸರ್...!ಎಲ್ಲಲ್ಲಿ ವಿದ್ಯುತ್ ಉಚಿತ ನೀಡಿದಾರೆ
ಆ ಪಕ್ಷದವರೆ ಅಲ್ಲಿ ಅಧಿಕಾರಕ್ಕೆ ಬಂದಿದ್ದಾರೆ
ನಾವು ಇದೆ ತಂತ್ರ ಬಳಕೆ ಮಾಡಿದ್ರೆ ಹೇಗೆ..!!!**

# ಕಲಸುಮೇಲೋಗರ

**● ಜಿ.ವಿ.ನಿರ್ಮಲ**

ಬೆಳಗಾಗುತ್ತಿದ್ದಂತೆ ನೀರಜ 'ಉಸ್' ಎನ್ನುತ್ತ ಸೋಫಾ ಮೇಲೆ ಒರಗಿ ಕುಳಿತಾಗ ವಿಶ್ವನಿಗೆ ಆತಂಕವಾಯ್ತು. ನೀರಜ ಕೂಗಿದಾಗ, ಕಿರುಚಿದಾಗ, ಅರಚಿದಾಗ, ಬೊಬ್ಬೆ ಹೊಡೆದಾಗ ನಿರಾತಂಕವಾಗಿ ಪೇಪರ್ನಲ್ಲಿ ಮುಖ ಹುದುಗಿಸಿ, ಸಿಡಿ ಲೇಡಿಯ ಬಗ್ಗೆ ಹೆಚ್ಚಿನ ವಿವರಗಳನ್ನು ಓದುವ ವಿಶ್ವನಿಗೆ ಅವಳ 'ಉಸ್' ಬ್ರೇಕ್ ಹಾಕಿತ್ತು. ಪೇಪರ್ನ ಅಕ್ಷರಗಳೇ ಕಾಣದಾಯ್ತು. ಓದುತ್ತಿದ್ದ ಸ್ವಾರಸ್ಯಕರವಾದ ವಿಷಯವೂ ತಲೆಯೊಳಗಿಳಿಯದೆ ಮತ್ತಷ್ಟು ಮೇಲಕ್ಕೆ ಹಾರಿಹೋಯ್ತು. ನೀರಜ ಯಾವಾಗಲೂ ಉತ್ಸಾಹದ ಬುಗ್ಗೆ. ವಿಷಯವಿಲ್ಲದೆಯೂ ಮಾತಾಡುವ, ಬಡಬಡಿಸುವ ಚತುರೆ. ಅದು ಅವಳೇ ಸಾಕಿ ಬೆಳೆಸಿದ ಅಭ್ಯಾಸ; ಅತಿ ಪ್ರಿಯವಾದ ಹವ್ಯಾಸವೂ ಹೌದು. ಅವಳು ಚಿಕ್ಕವಳಾಗಿದ್ದಾಗಲೂ ಬಡಬಡಿಸುತ್ತಲಿದ್ದಳೇ ಎನ್ನುವ ನಿಗೂಢ ರಹಸ್ಯದ ಬಗ್ಗೆ ವಿಶ್ವನಿಗೆ ತಿಳಿದಿರಲಿಲ್ಲವಾದರೂ ಅವಳ ಬಡಬಡಿಕೆಯೇ ಅವಳ ಆರೋಗ್ಯದ ಲಕ್ಷಣ ಎನ್ನುವ ರಹಸ್ಯ ನಲವತ್ತೈದು ವರ್ಷಗಳ ದಾಂಪತ್ಯದಿಂದ ವಿಶ್ವನಿಗೆ ಕರಾರುವಾಕ್ಕಾಗಿ ತಿಳಿದಿತ್ತು. ಆದರೆ ಇಂದಿನ ಅವಳ 'ಉಸ್' ಯಾವ ಕಾರಣಕ್ಕಾಗಿ?

ಆಯಾ ದಿನದ ಪೇಪರನ್ನು ಓದಿದ ಮೇಲೂ ಬಹಳ ಜೋಪಾನವಾಗಿ ತಿದ್ದಿ ತೀಡಿ ಭಗವದ್ಗೀತೆಯಂತೆ ಜೋಡಿಸಿಡುವ ವಿಶ್ವ ಓದುತ್ತಿದ್ದ ಪೇಪರ್ ಹಾಳೆಗಳನ್ನು ಯದ್ವಾತದ್ವಾ ಬೀಸಿ ಬಿಸಾಕಿ, ಗಾಳಿಗೆ ತೂರಿ, ನೀರಜಳ ಬಳಿಗೋಡಿ "ನೀರಜ, ಏನಾಯ್ತು? ಹುಷಾರಿಲ್ಲವೇ? ತಲೆ ನೋವಾ? ನೆಗಡಿಯಾ? ಜ್ವರವೂ ಬಂದಿರಬಹುದಾ? ವಾಸನೆ ಬರುತ್ತಿಲ್ಲವಾ? ಕರೋನಾ ಲಕ್ಷಣಗಳಿರಬಹುದೇ?' ಎಂದು ಪ್ರಶ್ನೆಗಳ ಸುರಿಮಳೆಯನ್ನೇ ಸುರಿಸಿದ. ಇವನ ಗಾಬರಿ ನೋಡಿ ನೀರಜಳಿಗೆ ನಗು ಉಕ್ಕಿ ಬಂತು. "ಅಂತಾದ್ದೇನೂ ಆಗಿಲ್ರೀ" ಅಂದಳು.

"ಹೌದಲ್ಲವಾ? ನೀನು ಯಾವಾಗಲೂ ಮಾತಾಡಿ, ಮಾತಾಡಿ ನನ್ನ ಪ್ರೆಷರ್ ಇಳಿಸಿಕೊಳ್ತೀನಿ. ನಿಮ್ಮಂತೆ ಬಾಯಿಗೆ ಬಿರಡೆ ಹಾಕಿಕೊಂಡು, ಪ್ರೆಷರ್ ಏರಿಸಿಕೊಳ್ಳಲು ನಾನೇನು ವೈಟ್ ಹಾಕ್ಕೊಂಡಿರೋ ಪ್ರೆಷರ್ ಕುಕ್ಕರ್ರಾ? ಅಂತ ಹೇಳ್ತಾನೇ ಇರ್ತೀಯಾ. ನನಗೆ ಮಾತಾಡುವುದಿರಲಿ ಬಾಯಿ ಬಿಡುವ ಅವಕಾಶವನ್ನೂ ಕೊಡೊಲ್ಲ."

"ಹೌದ್ಹೌದು. ಅದು ನೂರಕ್ಕೆ ನೂರರಷ್ಟು ನಿಜ. ಬ್ಲಡ್ ಪ್ರೆಷರ್ ನನ್ನ ಬಳಿ ಸುಳಿಯುವುದೂ ಇಲ್ಲ. ಹೇಗೋ, ಏನೋ ನೀವು ಮೌನವಾಗಿದ್ದೇ ಬ್ಲಡ್ ಪ್ರೆಷರನ್ನು ದೂರವಿಟ್ಟಿದ್ದೀರಿ."

"ಹಾಗಾದರೆ ಮತ್ತೇನು? ಶುಗರ್ ಬಂದಿರುವ ಸೂಚನೆಯೇ? ನಮ್ಮ ವಂಶದಲ್ಲಿ ಯಾರಿಗೂ ಸಕ್ಕರೆ ಖಾಯಿಲೆ ಬಂದದ್ದೇ ಇಲ್ಲ ಎಂದು ಬಡಾಯಿ ಕೊಚ್ಚುಕೊಳ್ತೀಯಲ್ಲಾ? ನಿನಗೇನಾದರೂ ಶುಗರ್ ಖಾಯಿಲೆ ಅಂದ್ರೆ ನಿನ್ನ ವಂಶದ ಮೇಲೇ ಅನುಮಾನ ಬಂದೀತು"

"ಥೂ, ಬಿಡ್ತು ಎನ್ನಿ. ಅನುಮಾನಿಸಲೂ ಇತಿಮಿತಿ ಬೇಡ್ವಾ? ಅಂದ್ಹಾಗೆ ನನಗೆ ಶುಗರ್, ಗಿಗರ್ ಏನೂ ಇಲ್ಲ. ದಿನಕ್ಕೆರಡು ಸಿಹಿ ತಿಂಡಿ ತಿನ್ತಾ ಆರಾಮವಾಗಿದೀನಿ"

"ಮತ್ತೇನು ಅಂತ ಬಾಯ್ಬಿಟ್ಟು ಹೇಳು ಮಾರಾಯ್ತಿ. ಸುಮ್ಮನೆ ಯಾಕೆ ಸತಾಯಿಸ್ತೀಯಾ?"

"ಮತ್ತೆ, ಮತ್ತೆ ಇವತ್ತು ಏನು ತಿಂಡಿ ಮಾಡೋದು ಅಂತ ಗೊತ್ತಾಗ್ತಾ ಇಲ್ಲ"

"ಓ, ಅಷ್ಟೇನಾ? ಏನೂ ಮಾಡ್ಬೇಡ ಬಿಡು. ನಾನೇ ಹೋಗಿ ಹೋಟೆಲ್ಲಿಂದ ದೋಸೆ, ವಡೆ ಎಲ್ಲಾ ತರ್ತೀನಿ. ಹಾಯಾಗಿ ತಿನ್ನೋಣ. ಸರೀನಾ?"

"ಆಹಾ. ಇವತ್ತು, ನಾಳೇ ಕರ್ಫ್ಯೂ ಇದ್ಯಲ್ಲ. ಹಾಳಾದ್ದು ಕೊರೋನಾ ಸತಾಯಿಸ್ತಾ ಇದ್ಯೆಲ್ಲಾ? ಯಾವತ್ತು ಮುಕ್ತಾಯ್ವೋ? ಯಾವ ಹೋಟೆಲ್ಲೂ ಇರಲ್ಲ ಅನ್ನೋ ವಿಷ್ಯ ಮರ್ತೇ ಹೋಯ್ತಾ?"

"ಹೌದಲ್ವಾ? ಆ ಹೋಟೆಲ್ ಪಕ್ಕ ಇದ್ದ ಬೇಕರಿ ಮಾಲೀಕ ಕೊರೋನಾ ಬಂದು ಸತ್ತೇ ಹೋದ್ನಲ್ಲ ಪಾಪ. ಬ್ರೆಡ್ ತರೋ ಹಾಗೂ ಇಲ್ಲ. ಸರಿ ಬಿಡು ಮನೇಲೇ ದೋಸೇನೋ, ಇಡ್ಲೀನೋ ಮಾಡಿಬಿಡು. ನಾನು ಬೇಕಾದ್ರೆ ನಿಂಗೆ ಸಹಾಯ ಮಾಡ್ತಾ ಅಲ್ಲೇ ನಿಂತಿರ್ತೀನಿ"

"ಆಹಾ, ದೋಸೆ. ಇಡ್ಲೀಗೇ ಮನೇಲಿ ರುಬ್ಬಿದ ಹಿಟ್ಟೇ ಚೆಂದ ಅಂತ ಉಬ್ಬಿಸ್ತೀರಿ. ನಾನೇನೂ ನಿನ್ನೆ ಹಿಟ್ಟು ರುಬ್ಬಿಲ್ಲವಲ್ಲಾ.."

"ಚಟ್ನಿಗೆ ಬೇಕಾದ್ರೆ ಮೆಣಸಿನಕಾಯಿ ಹೆಚ್ಕೊಡ್ತಾ ಇದ್ದೆ."

"ಅಬ್ಬಬ್ಬಾ, ನೀವು ಮೆಣಸಿನಕಾಯಿ ಹೆಚ್ಚಿ ಅಂದ್ರೆ ಬೆರಳೇ ಹೆಚ್ಕೋತ್ತೀನಿ ಅಂತ ಹೇಳ್ತಿದ್ರಲ್ಲಾ?"

"ಅದು ನಿಜಾನೇ. ಆಮೇಲೆ ನಿಂಗೆ ಒಂದಕ್ಕೆರಡು ಕೆಲ್ಸ ಆಗತ್ತೆ. ನನ್ನ ಬೆರಳಿಗೆ ಬ್ಯಾಂಡೇಜ್ ಕಟ್ಟೋ ಕೆಲ್ಸಾನೂ ಮಾಡ್ಬೇಕಾಗತ್ತೆ"

"ಹೌದು. ಕತ್ರಿ, ಚಾಕು ಮುಟ್ದ್ರೆ, ಅವರೇಕಾಯಿ ಬಿಡಿಸ್ರಿ ಅಂದ್ರೆ ಉಗುರು ನೋವು ಬಂತು, ಹೊಪ್ಪೆ ಬಂತೂ ಅಂತ ತಣ್ಣೀರು ಬಟ್ಟೆ ಕಟ್ಟೋ ಕೆಲ್ಸ ಕೊಡ್ತೀರಿ"

"ಹೌದು. ನಂಗೆ ಚಿಕ್ಕಂದಿನಿಂದ್ಲೂ ಕೆಲ್ಸ ಮಾಡೇ ಅಭ್ಯಾಸವಿಲ್ಲ"

"ಹೌದ್ಹೌದು. ನಂಗೆ ತೊಟ್ಲಲ್ಲಿ ಮಲಗಿರೋವಾಗ್ಲೇ ನಮ್ಮಮ್ಮ ಮೆಣಸಿನಕಾಯಿ ಹೆಚ್ಚೋದು, ಅವರೇ ಕಾಯಿ ಬಿಡ್ಸೋದು ಎಲ್ಲಾ ಹೇಳ್ಕೊಡ್ತಾ ಇದ್ರು."

"ಅಯ್ಯೋ. ನಾನು ತೆಂಗಿನಕಾಯಿ ಬೇಕಾದ್ರೆ ತುರ್ಕೊಡ್ತೀನಿ. ಆದ್ರೆ ಡಾಕ್ಟರ್ ಮಂಡಿ ನೋವಿದೆ. ನೀವು ಕೆಳಗೆ ಕೂಡಬೇಡಿ ಅಂದಿದ್ದಾರಲ್ಲಾ ."

"ಅಬ್ಬಬ್ಬಾ, ಕಳ್ಳಂಗೊಂದು ಪಿಳ್ಳೆ ನೆವ. ಏನು ಮಾಡೋಕ್ಕೋ ಆಗಲ್ಲ; ಬರಲ್ಲ ಅನ್ನೋ ನೆಪ ಕೇಳಿ, ಕೇಳಿ ಸಾಕಾಯ್ತು"

"ಬೇಜಾರು ಮಾಡ್ಕೋಬೇಡ ನೀರಜ. ತರಕಾರಿ ಬೇಕಾದ್ರೆ ತರ್ಲಾ? ಅದನ್ನು ಹೇಗಾದ್ರೂ ನಿಭಾಯಿಸ್ತೀನಿ"

"ನೀವು ನಿಭಾಯಿಸ್ತೀರಿ. ಆದ್ರೆ ಹುರಳೀಕಾಯಿ ತನ್ನಿ ಎಂದ್ರೆ ನನ್ನಷ್ಟೇ ಬಲ್ತಿರೋ

ಹುರಳೀಕಾಯಿ, ಅದೂ ಪೂರ್ತಿ ಒಂದು ಕೆಜಿ ತರ್ತೀರಿ. ಅದನ್ನು ಚಾಕೂಲಿ ಕಟ್ ಮಾಡಕ್ಕೆ ವದ್ಯಾಡೋಳು ನಾನು"

"ಅವತ್ತೊಂದು ದಿನ ಕೊತ್ತಂಬ್ರಿ ಸೊಪ್ಪು ಟೊಮೊಟೋ ಎಲ್ಲಾ ತಂದಿರಲಿಲ್ವಾ ನೀರಜ?"

"ಅಯ್ಯೋ, ತಂದಿದ್ರಿ, ತಂದಿದ್ರಿ. ನಾಟಿ ಕೊತ್ತಂಬ್ರಿ ಅಂದ್ರೆ ಘಾಮ್ರ್ರ್ದ, ಟೊಮೊಟೋನೋ ಗಟ್ಟಿಯಾಗಿ, ಮೂರು ದಿನ ಇಟ್ರೂ ಕಾಯಾಗೇ ಇದ್ವು."

"ನೀರಜಾ, ಇವತ್ತು ಉಪ್ವಾಸ ಇರು ಅಂದ್ರೂ ನನಗೆ ಒಪ್ಪಿಗೆ. ಇದಕ್ಕಿಂತ ಹೆಚ್ಚು ನಾನೇನು ಮಾಡ್ಲಿ?"

"ಬೇಜಾರು ಮಾಡ್ಕೋಬೇಡಿ. ಗೊತ್ತೇ ಇದ್ಯಲ್ಲಾ ಸಿಂಪಲ್ ಆಗಿ ಉಪ್ಪಿಟ್ಟು ಮಾಡ್ಬಿಡ್ತೀನಿ"

"ಓ, ನಂಗೇನೂ ಬೇಜಾರಿಲ್ಲ ನೀರಜ. ನೀ ಏನೇ ಮಾಡಿದ್ರೂ ಸಂತೋಷ್ವಾಗಿ ಇಬ್ರೂ ಕೂತು ತಿನ್ನೋಣ. ನೀನು ಎಷ್ಟು ಮಾತಾಡಿದ್ರೂ ಕೇಳಿಸ್ಕೋತೀನಿ. ಸರೀನಾ?"

ಈ ಮಾತ್ನ ಕೇಳ್ತಿದ್ದಾಗೆ ನೀರಜ ಸೋಫಾ ಬಿಟ್ಟೆದ್ದು ಅಡುಗೆ ಮನೆ ಕಡೆ ಹೆಜ್ಜೆ ಹಾಕಿದ್ಳು. ಚೆಲ್ಲಾಪಿಲ್ಲಿಯಾಗಿದ್ದ ಪೇಪರ್ ಹಾಳೆಗಳನ್ನು ಜೋಡ್ಕೊಂಡ ವಿಶ್ವ ಪರೀಕ್ಷೆಗೆ ಓದೋ ಹುಡ್ಗನ ತರಹ ಮತ್ತೆ ಪೇಪರ್ನಲ್ಲಿ ತಲೆ ಹುದುಗಿಸಿಕೊಂಡ. ಅಡುಗೆ ಮನೆ ಕಡೆ ಹೋಗ್ತಿದ್ದ ನೀರಜ ಮುಸಿ ಮುಸಿ ನಕ್ಕಿದ್ದನ್ನು ನೋಡ್ಲೇ ಇಲ್ಲ.

ಅಡುಗೆ ಮನೆಗ್ಹೋದ ನೀರಜ ಫ್ರಿಜ್‌ನಿಂದ ನಿನ್ನೆ ಮಾಡಿದ್ದ ಅವರೇ ಕಾಳು ಉಪ್ಪಿಟ್ಟು, ಮೊನ್ನೆ ಮಾಡಿದ್ದ ಒಗ್ಗರಣೆ ಅವಲಕ್ಕಿ, ಪೂರಿ ಜೊತೆಗೆ ಮಾಡಿ ಮಿಕ್ಕಿದ್ದ ಈರುಳ್ಳಿ–ಆಲೂಗಡ್ಡೆ ಪಲ್ಯ ಎಲ್ಲಾ ತೆಗೆದು ಹೊರಗಿಟ್ಳು. ಬಾಂಡ್ಲಿಯಲ್ಲಿ ಸ್ವಲ್ಪ ಒಗ್ಗರಣೆ ಮಾಡಿ. ಎಲ್ಲವನ್ನೂ ಹಾಕಿ ಬಾಡಿಸಿಟ್ಳು. ಕಲಸುಮೇಲೋಗರ ಐದೇ ನಿಮಿಷಗಳಲ್ಲಿ ಸಿದ್ಧವಾಯ್ತು!.

"ರೀ .., ತಿಂಡಿ ರೆಡಿ" ಎಂದು ನೀರಜ ಕೂಗಿದಾಗ ಹನ್ನೆರಡು ದಿನ ಉಪವಾಸ ಮಾಡಿದವನಂತೆ ವಿಶ್ವ ಓಡೋಡಿ ಬಂದ. ತಟ್ಟೆಗೆ ಹಾಕಿಕೊಟ್ಟ ಬಿಸಿಬಿಸಿ ತಿಂಡಿಯನ್ನು ತಿಂದು "ನೀರಜ ಇವತ್ತಿನ ಉಪ್ಪಿಟ್ಟು ಏನೋ ಬೇರೆ ತರಹ ರುಚಿ, ರುಚಿಯಾಗಿದೆ." ಅಂದಾಗ "ಹೌದ್ವೌದು ಮೊನ್ನೆ ಸಿಹಿಕಹಿ ಚಂದ್ರು 'ಯೂ ಟ್ಯೂಬ್' ನಲ್ಲಿ ಹೇಳಿಕೊಟ್ಟಂಗೇ ಮಾಡ್ದೆ. ಇದರ ಹೆಸರು ಬರೀ ಉಪ್ಪಿಟ್ಟಲ್ಲ. ಕಲಸುಮೇಲೋಗರ" ಎಂದು ಹೇಳಿ ಒಳಗೊಳಗೇ ನಗುತ್ತಾ ಬೀಗಿದಳು. ಮಾಡಿದ ವಿಧಾನ ಹೇಳಿದ್ರೆ ವಿಶ್ವ ತಿನ್ನಲು ತಕರಾರು ಮಾಡ್ತಾ ಇದ್ರು ಎಂದು ತಾನು ಇದಕ್ಕಾಗಿ ಮಾಡಿದ ಉಪಾಯ, ಆಡಿದ ನಾಟಕ ನೆನಪು ಮಾಡ್ಕೊಂಡು 'ಭೇಷ್' ಎಂದು ತನ್ನ ಬೆನ್ನನ್ನು ತಾನೇ ತಟ್ಕೊಂಡ್ಳು. "ಹಿಂದಿನ ದಿನದ ತಿಂಡಿಯನ್ನು ಮುಂದಿನ ದಿನದ 'ತಾಜಾ' ತಿಂಡಿಯಾಗಿ ಬದಲಿಸುವುದು ಹೇಗೆ?" ಎಂದು ಕಲಿಸಿದ ಸಿಹಿಕಹಿ ಚಂದ್ರೂಗೂ ಇದ್ದಲ್ಲಿಂದಲೇ ವಂದಿಸೋದನ್ನ ಮರೀಲಿಲ್ಲ.

■

# ಅಮೆರಿಕನ್ ಜಾನಪದ ಲೋಕ: ಕನ್ನಡ ಕಂಗಳಿಗೆ ಕಂಡಂತೆ

● ಶ್ರೀವತ್ಸ ಜೋಶಿ

ಅಮೆರಿಗೊ ವೆಸ್ಪುಚಿ ಹೆಸರಿನ ಇಟಾಲಿಯನ್ ನಾವಿಕ/ಸಂಶೋಧಕ ಕ್ರಿ.ಶ 1500ರ ಆಸುಪಾಸಿನಲ್ಲಿ ಈಗಿನ ದಕ್ಷಿಣೋತ್ತರ ಅಮೆರಿಕ ಭೂಭಾಗಕ್ಕೆ ತಲುಪಿದನಷ್ಟೇ ಅಲ್ಲದೆ ಅದರ ನಕ್ಷೆಯ ಕಲ್ಪನೆ ಸಹ ಮಾಡಿದ್ದರಿಂದ ಆ ಖಂಡಗಳಿಗೆ 'ಅಮೆರಿಕಾ' ಎಂದು ಹೆಸರಾಯಿತು. ವೆಸ್ಪುಚಿಗಿಂತಲೂ ಮೊದಲೇ ಕ್ರಿಸ್ಟೋಫರ್ ಕೊಲಂಬಸ್ ಎಂಬ ಇನ್ನೊಬ್ಬ ಇಟಾಲಿಯನ್ ನಾವಿಕನು ಯುರೋಪ್‌ನಿಂದ ಹೊರಟು ಅಟ್ಲಾಂಟಿಕ್ ಸಾಗರವನ್ನು ದಾಟಿ ಇದೇ ಭೂಭಾಗವನ್ನು ಪತ್ತೆ ಹಚ್ಚಿದ್ದನು. ಈ ನಾವಿಕರದು ಮೂಲತಃ ಇಂಡಿಯಾ(ಭಾರತ)ವನ್ನು ತಲುಪುವ ಉದ್ದೇಶವಿತ್ತಾದ್ದರಿಂದ, ತಾವು ತಲುಪಿದ ಭೂಪ್ರದೇಶವೇ ಇಂಡಿಯಾ ಎಂದು ಭಾವಿಸಿ ಇಲ್ಲಿನ ನಿವಾಸಿಗಳನ್ನು ಅವರು 'ಇಂಡಿಯನ್ಸ್' ಎಂದು ಕರೆದರು. ಬಹುಶಃ ಈ ಮೂರು ಅಂಶಗಳನ್ನು ನಾವೆಲ್ಲರೂ ಏಳನೆಯ ತರಗತಿಯಲ್ಲಿ ಚರಿತ್ರೆ/ಭೂಗೋಳ ಪಠ್ಯದಲ್ಲಿ ಓದಿ ತಿಳಿದುಕೊಂಡಿದ್ದೇವೆ; ಪರೀಕ್ಷೆಯಲ್ಲಿ ಒಂದು ಅಂಕದ ಪ್ರಶ್ನೆಗೆ ಉತ್ತರವಾಗಿ ಗಟ್ಟುಹೊಡೆದಿದ್ದೇವೆ ಕೂಡ. ಆಮೇಲೆ ಹಿಸ್ಟರಿ ಎಂಎ ಮಾಡಿದ ಕೆಲವರಷ್ಟೇ ವರ್ಲ್ಡ್ ಹಿಸ್ಟರಿ ಓದುತ್ತ ಅಮೆರಿಕಾ ಖಂಡಗಳ ಬಗ್ಗೆ ಅಲ್ಲಿನ ಮೂಲನಿವಾಸಿಗಳ ಬಗ್ಗೆ ಮತ್ತೊಂದಿಷ್ಟು ವಿವರಗಳನ್ನು ಓದಿರುವ ಸಾಧ್ಯತೆಯಿದೆ. ಉಳಿದಂತೆ ಎಲ್ಲರಿಗೂ ಅಮೆರಿಗೊ ವೆಸ್ಪುಚಿ, ಕ್ರಿಸ್ಟೋಫರ್ ಕೊಲಂಬಸ್, ರೆಡ್ ಇಂಡಿಯನ್ಸ್– ಈ ಮೂರು ಪಾಯಿಂಟುಗಳು ಮಾತ್ರ ಅಮೆರಿಕದ ಬಗೆಗಿನ ಪ್ರಾಥಮಿಕ ಜ್ಞಾನ. ಆ ಕಾಲದಲ್ಲಿ ಅದು ಧಾರಾಳವಾಗಿ ಸಾಕಾಗುತ್ತಿತ್ತು. ಆಧುನಿಕ ಕಾಲಮಾನದ ವಿಚಾರ ಬಿಡಿ 'ತಿಣುಕಿದನು ಫಣಿರಾಯ ಅಮೆರಿಕಾ ಪ್ರವಾಸಕಥನಗಳ ಭಾರದಲಿ' ಎನ್ನುವಷ್ಟು ಅಮೆರಿಕವನ್ನು ಬಣ್ಣಿಸಿರುವ ಪ್ರವಾಸಸಾಹಿತ್ಯ ರಚನೆಯಾಗಿದೆ. ನಯಾಗರಾ ಫಾಲ್ಸ್, ಸ್ಟಾಚ್ಯೂ ಆಫ್ ಲಿಬರ್ಟಿ, ಗ್ರ್ಯಾಂಡ್ ಕಾನ್ಯನ್, ಡಿಸ್ನಿ ವರ್ಲ್ಡ್, ಹಾಲಿವುಡ್, ಲಾಸ್‌ವೇಗಾಸ್ ಮತ್ತಿತರ ಥಳಕುಬಳುಕುಗಳು ಕಣ್ಣಿಗೆಕಟ್ಟುವಂತೆ ವರ್ಣನೆಯಾಗಿವೆ. ಸಾಹಿತ್ಯದಲ್ಲಿ, ಸಿನಿಮಾಗಳಲ್ಲಿ, ಈಗಂತೂ ಇಂಟರ್‌ನೆಟ್ ಜಮಾನಾದ 'ವಿಶ್ವಗ್ರಾಮ' ಕಲ್ಪನೆಯಲ್ಲಿ ಅಮೆರಿಕ ಅಂದರೆ ಪಕ್ಕದ್ಮನೆ ಎನ್ನುವಷ್ಟು ಹತ್ತಿರವಾಗಿದೆ.

ಇದನ್ನೇಕೆ ಈಗ ಹೇಳುತ್ತಿದ್ದೇನೆಂದರೆ, ಮೇಲೆ ವಿವರಿಸಿದ್ದಕ್ಕೆ ಭಿನ್ನವಾಗಿ ಕನ್ನಡದ ಮಟ್ಟಿಗೆ ಹೊಚ್ಚಹೊಸದು ಮತ್ತು ಪ್ರಪ್ರಥಮ ಎನ್ನಬಹುದಾದ ಬೃಹತ್ ಗ್ರಂಥವೊಂದು ಈ ವಾರಾಂತ್ಯದಲ್ಲಿ ಇಲ್ಲಿ ಅಮೆರಿಕದಲ್ಲಿ ಬಿಡುಗಡೆಯಾಗುತ್ತಿದೆ. ಇದರ ಹೆಸರು 'ಅಮೆರಿಕನ್ ಜಾನಪದ: ಕನ್ನಡ ಕಂಗಳಿಗೆ ಕಂಡಂತೆ'. ಅಕ್ಷರಪ್ರೇಮಿ ಅಮೆರಿಕನ್ನಡಿಗರು ದಕ್ಷಿಣೋತ್ತರ ಅಮೆರಿಕ ಖಂಡಗಳ ಜಾನಪದ ಲೋಕವನ್ನು, ಇಲ್ಲಿಯ ಮೂಲನಿವಾಸಿಗಳ ಜೀವನವೈವಿಧ್ಯವನ್ನು ಅಭ್ಯಸಿಸಿ, ತಾವು ತಿಳಿದುಕೊಂಡಿದ್ದನ್ನು ಅಕ್ಷರರೂಪಕ್ಕಿಳಿಸಿ, ಒಂದು ಮಾಹಿತಿ ಕೋಶದಂತೆ ವಿಶ್ವಕನ್ನಡಿಗರಿಗೆ ಅರ್ಪಿಸುತ್ತಿರುವ ಸುಂದರ ಕಲಾಕೃತಿ. ಇಲ್ಲ, ಇದನ್ನು ಮಾಹಿತಿ ಕೋಶ ಅಥವಾ ಎನ್‌ಸೈಕ್ಲೊಪಿಡಿಯಾ ಎನ್ನುವುದಕ್ಕಿಂತ 'ಕೆಲೈಡೊಸ್ಕೋಪ್'ಗೆ ಹೋಲಿಸುವುದು ಒಳ್ಳೆಯದು. ಏಕೆಂದರೆ ಇದು ಎನ್‌ಸೈಕ್ಲೊಪಿಡಿಯಾದಂತೆ ಸಮಗ್ರವೇನಲ್ಲ; ಎನ್‌ಸೈಕ್ಲೊಪಿಡಿಯಾದಂತೆ ಬರೀ ಶುಷ್ಕವೂ ಅಲ್ಲ. ನಿಮಗೆ ಕೆಲೈಡೊಸ್ಕೋಪ್ ಗೊತ್ತಲ್ಲ, ಅದೇ– ಉದ್ದದ ಟೊಳ್ಳು ನಳಿಗೆಯ ಒಂದು ತುದಿಯಲ್ಲಿ ಬಣ್ಣಬಣ್ಣದ ಗಾಜಿನ ಚೂರುಗಳು, ಇನ್ನೊಂದು

ವರ್ಣಮಯ ವಿನ್ಯಾಸಗಳು, ಕಣ್ಮನ ತಣಿಸುವ ಚಿತ್ತಾರಗಳು. ಈ ಗ್ರಂಥದ ಪುಟಗಳನ್ನು ತಿರುವಿದಾಗಲೂ ಅದೇ ಅನುಭವ. 'ಲೇಖನ ಸಂಗ್ರಹವನ್ನು ಮೊದಲಿಂದ ಕೊನೆಯತನಕ ಓದಿದಾಗ ಒಂದು ರಮ್ಯಾತಿರಮ್ಯಲೋಕಕ್ಕೆ ಹೋಗಿ ವಿಹರಿಸಿ ಬಂದ ಅನುಭವವಾಯಿತು...' ಎಂದು ಡಾ.ಗುರುಪ್ರಸಾದ್ ಕಾಗಿನೆಲೆ ಈ ಗ್ರಂಥದ ಬಗೆಗಿನ ಸಹಸ್ಪಂದನದಲ್ಲಿ, ಗ್ರಂಥದಲ್ಲೇ ಅನುಬಂಧವಾಗಿ ಅಳವಡಿಸಿಕೊಳ್ಳಲಾಗಿರುವ ಲೇಖನದಲ್ಲಿ, ಹೇಳಿದ್ದೂ ಅದನ್ನೇ. ಅಕ್ಷರಗಳಿಂದಲೇ(ತೀರ ಅಗತ್ಯವಿರುವಲ್ಲಿ ಮಾತ್ರ ಒಂದಿಷ್ಟು ಚಿತ್ರಗಳು) ಅಂತಹ ರಮ್ಯಾತಿರಮ್ಯ ಲೋಕದ ಸೃಷ್ಟಿಗೆ ಕಾರಣರಾದ ಅನಿವಾಸಿ ಕನ್ನಡಿಗ ಬರಹಗಾರರು, ಅವರೆಲ್ಲರ ಬರಹಗಳೆಂಬ ವರ್ಣಮಯ ಗಾಜಿನ ಚೂರುಗಳನ್ನು ಅಂಟಿಸಿ ಪುಸ್ತಕವೆಂಬ ಕೆಲೈಡೊಸ್ಕೋಪ್ ರಚಿಸಿದ ಡಾ.ಮೈ.ಶ್ರೀ.ನಟರಾಜ ಮತ್ತು ಜ್ಯೋತಿ ವೆಂಕಟಸುಬ್ರಹ್ಮಣ್ಯ ನೇತೃತ್ವದ ಸಂಪಾದಕ ಮಂಡಲಿ ಅಭಿನಂದನಾರ್ಹರು.

ಇದು ಕನ್ನಡ ಸಾರಸ್ವತ ಲೋಕಕ್ಕೆ ಅಮೆರಿಕದ 'ಕನ್ನಡ ಸಾಹಿತ್ಯ ರಂಗ(ಕಸಾರಂ)'ದ ಹೊಸ ಕೊಡುಗೆ. ಕಸಾರಂ ಬಗ್ಗೆ ಈಹಿಂದೆಯೂ ಒಂದೆರಡು ಸಲ ಇದೇ ಅಂಕಣದಲ್ಲಿ ಬರೆದಿದ್ದೇನೆ. ಅಮೆರಿಕನ್ನಡಿಗರಿಗೆ ಸಂಬಂಧಿಸಿದಂತೆ ನಿಮಗೆ 'ಅಕ್ಕ', 'ನಾವಿಕ' ಸಂಘಟನೆಗಳ ಹೆಸರು ಹೆಚ್ಚು ಪರಿಚಿತವಿರುವ, 'ಕಸಾರಂ' ಅಷ್ಟೇನೂ ಗೊತ್ತಿಲ್ಲದಿರುವ ಸಾಧ್ಯತೆಯೇ ಹೆಚ್ಚು. ಅದು ಸಹಜ ಕೂಡ. ಹೇಳಿಕೇಳಿ ಇದು ಸಾಹಿತ್ಯಪ್ರೇಮಿ ಮೃದುಮನಸಿಗರ ಪುಟ್ಟ ಬಳಗ. ಹೃದಯದೊಳಗೆ ಕನ್ನಡ ನುಡಿಪ್ರೇಮವನ್ನು ಬೆಚ್ಚಗೆ ಇಟ್ಟುಕೊಂಡಿರುವ, ಹಲವಾರು ವರ್ಷಗಳಿಂದ ಅಮೆರಿಕದಲ್ಲಿ ನೆಲೆಸಿದ್ದರೂ, ಪ್ರತಿದಿನವೂ ಒಂದಿಷ್ಟಾದರೂ ಕನ್ನಡ ಅಕ್ಷರಗಳ ಓದು–ಬರಹವನ್ನು ನಿತ್ಯಕೈಂಕರ್ಯದಂತೆ ಮಾಡಿಕೊಂಡು ಬಂದಿರುವ, ಸಮಾನಾಭಿರುಚಿಯ ಅಮೆರಿಕನ್ನಡಿಗರ ವೇದಿಕೆ. ಎಚ್.ವೈ.ರಾಜಗೋಪಾಲ್ (ಈಗ ನಮ್ಮೊಂದಿಗಿಲ್ಲ) ಅವರ ಕಲ್ಪನೆಯ ಕೂಸು. ನಾಗ ಐತಾಳ, ಮೈ.ಶ್ರೀ.ನಟರಾಜ, ನಳಿನಿ ಮೈಯ ಮುಂತಾದ ಹಿರಿತಲೆಮಾರಿನ ಅಮೆರಿಕನ್ನಡಿಗರು ನೀರುಣಿಸಿ ಬೆಳೆಸಿದ, ಈಗ ಹೊಸಬರನೇಕರೂ ಸೇರಿ ಮುನ್ನಡೆಸುತ್ತಿರುವ ಸಂಘಟನೆ. ಅಮೆರಿಕನ್ನಡಿಗರ ಸಾಹಿತ್ಯಾಸಕ್ತಿಯನ್ನು ಪೋಷಿಸುವುದು, ಬೆಳೆಸುವುದು, ಅವರನ್ನು ತಮ್ಮ ಜ್ಞಾನಾನುಭವಗಳ ಬಗ್ಗೆ ಸೃಜನಾತ್ಮಕವಾಗಿ ಬರೆಯಲು ಪ್ರೋತ್ಸಾಹಿಸುವುದು, ಅವರ ಬರವಣಿಗೆಗಳನ್ನು ಪ್ರಕಟಿಸುವುದು, ಅದನ್ನು ಕರ್ನಾಟಕದಲ್ಲಿ ಮತ್ತು ಸಾಧ್ಯವಾದಷ್ಟು ಮಟ್ಟಿಗೆ ಜಗತ್ತಿನೆಲ್ಲೆಡೆಯ ಕನ್ನಡಿಗರ ಗಮನಕ್ಕೆ ತರುವುದು ಈ ಸಂಘಟನೆಯ ಮುಖ್ಯ ಧ್ಯೇಯೋದ್ದೇಶ. ಇಲ್ಲಿ ಹಾರ–ತುರಾಯಿ ಸನ್ಮಾನಗಳ ಅಬ್ಬರವಿಲ್ಲ. ಅಧ್ಯಕ್ಷರನ್ನು ಪಲ್ಲಕ್ಕಿಯಲ್ಲಿ ಹೊತ್ತು ಮೆರವಣಿಗೆಗಳ ಡೌಲು ಇಲ್ಲ. ವ್ಯಕ್ತಿಕೇಂದ್ರಿತ ಹೊಗಳಿಕೆ ತೆಗಳಿಕೆಗಳ ಉಪಟಳವೂ ಇಲ್ಲ. ಒಳ್ಳೆಯ ಕೆಲಸವನ್ನಷ್ಟೇ ಮಾಡುವುದರಿಂದ ಇದೊಂಥರ ವನಸುಮ ಇದ್ದಂತೆ. ಹತ್ತಿಪ್ಪತ್ತು ವರ್ಷಗಳ ಅಸ್ತಿತ್ವದಲ್ಲಿ ಇನ್ನೂ ಅನೇಕರಿಗೆ ಗೊತ್ತೇ ಇಲ್ಲದಂತಿದೆ. ರಾಜಕಾರಣಿಗಳನ್ನು ನುಸುಳಲು ಬಿಡುತ್ತಿದ್ದರೆ, ರಾಜಕೀಯ ಮೇಲಾಟಗಳನ್ನು ಮಾಡುತ್ತಿದ್ದರೆ ಇಷ್ಟೊತ್ತಿಗೆ ಕೆಟ್ಟ ಕಾರಣಗಳಿಗಾಗಿ ಜಗದ್ವಿಖ್ಯಾತ ಆಗಿರುತ್ತಿತ್ತೋ ಏನೋ. ಪುಣ್ಯಕ್ಕೆ ಹಾಗೆ ಆಗಿಲ್ಲ, ಆಗುವುದೂ ಬೇಡವೆನ್ನಿ.

ಇಂತಿರುವ ಕಸಾರಂ ಪ್ರತಿ ಎರಡು ವರ್ಷಗಳಿಗೊಮ್ಮೆ ಅಮೆರಿಕದ ಯಾವುದಾದರೂ ಒಂದು ನಗರದಲ್ಲಿ ಸರಿಸುಮಾರು ಏಪ್ರಿಲ್/ಮೇ ತಿಂಗಳ ವಾರಾಂತ್ಯವೊಂದರಲ್ಲಿ 'ವಸಂತ ಸಾಹಿತ್ಯೋತ್ಸವ'ವನ್ನು ಏರ್ಪಡಿಸುತ್ತದೆ. ಇದುವರೆಗೆ ಫಿಲಡೆಲ್ಫಿಯಾ, ಲಾಸ್ ಏಂಜಲೀಸ್, ಶಿಕಾಗೊ, ವಾಷಿಂಗ್ಟನ್ ಡಿಸಿ, ಸಾನ್ ಫ್ರಾನ್ಸಿಸ್ಕೊ,

ಹ್ಯೂಸ್ಟನ್, ಸೈಂಟ್ ಲೂಯಿಸ್, ಬಾಸ್ಟನ್ ಮತ್ತು ನ್ಯೂಜೆರ್ಸಿ– ಹೀಗೆ ಒಂಬತ್ತು ಕಡೆಗಳಲ್ಲಿ ಇಂತಹ ಉತ್ಸವಗಳು ನಡೆದಿವೆ. ಈ ಬಾರಿ ಹತ್ತನೆಯದು ಅಮೆರಿಕದ ಅತಿ ದೊಡ್ಡ ಸಂಸ್ಥಾನವಾದ ಟೆಕ್ಸಸ್‌ನ ಡಲ್ಲಾಸ್ ನಗರದಲ್ಲಿ. ಅಲ್ಲಿ ಸಾಕಷ್ಟು ಸಂಖ್ಯೆಯ ಕನ್ನಡಿಗರೂ ಇದ್ದು 'ಮಲ್ಲಿಗೆ' ಎಂಬ ಕನ್ನಡ ಕೂಟವನ್ನು ಕಟ್ಟಿಕೊಂಡಿದ್ದಾರೆ. ಕಸಾರಂ ತನ್ನ ವಸಂತ ಸಾಹಿತ್ಯೋತ್ಸವಗಳಿಗೆ ಆಯಾ ನಗರಗಳ ಕನ್ನಡ ಕೂಟದ ಆಶ್ರಯ ಪಡೆಯುವುದು ಇದುವರೆಗೂ ನಡೆದುಕೊಂಡು ಬಂದಿರುವ ಸತ್ಸಂಪ್ರದಾಯ. ಅದರಂತೆ ಈ ಸಲದ ಸಾಹಿತ್ಯೋತ್ಸವವು ಮಲ್ಲಿಗೆ ಕನ್ನಡಕೂಟದ ಆಶ್ರಯದಲ್ಲಿ, ಈ ವಾರಾಂತ್ಯದಲ್ಲಿ, ಅಂದರೆ ಶುಕ್ರವಾರ ಏಪ್ರಿಲ್ 15ರಿಂದ ಭಾನುವಾರ ಏಪ್ರಿಲ್ 17ರವರೆಗೆ, ಡಲ್ಲಾಸ್‌ನ ಗ್ರೇಪ್‌ವೈನ್ ಸಭಾಂಗಣದಲ್ಲಿ ನಡೆಯುತ್ತಿದೆ. ಅಕ್ಷರಪ್ರೇಮಿ ಅಮೆರಿಕನ್ನಡಿಗರು ವಿವಿಧೆಡೆಗಳಿಂದ ಬಂದು ಇಲ್ಲಿ ಸೇರಿದ್ದಾರೆ. ಆಪ್ತತೆ–ಆತ್ಮೀಯತೆಗಳ ತಂಗಾಳಿಯಲ್ಲಿ ಕನ್ನಡದ ಕಂಪು ಸೂಸುತ್ತಿದೆ. 'ನಾವೂ ಒಮ್ಮೆ ಸಾಹಿತ್ಯೋತ್ಸವದ ಆತಿಥೇಯರಾಗಬೇಕು' ಎಂಬ ನಿಸ್ಪೃಹ ಮಹತ್ವಾಕಾಂಕ್ಷೆಯನ್ನು ಕಳೆದೆರಡು ವರ್ಷಗಳಿಂದ ಪೋಷಿಸಿಕೊಂಡು ಬಂದು, ಕೋವಿಡ್ ಕಷ್ಟಕಾರ್ಪಣ್ಯಗಳ ನಡುವೆಯೂ ಉತ್ಸಾಹ ಕಳೆದುಕೊಳ್ಳದೆ ದುಡಿದ ಡಲ್ಲಾಸ್‌ನ ಪೂರ್ಣಿಮಾ ಸುಬ್ರಹ್ಮಣ್ಯ ಮತ್ತು ಅವರ ಮಿತ್ರವರ್ಗದವರೆಲ್ಲರೂ, ಅರ್ಥಾತ್ 'ಮಲ್ಲಿಗೆ'ಯ ಒಂದೊಂದು ದಳವೂ, ಇದನ್ನು ಅಚ್ಚುಕಟ್ಟಾಗಿ ನೆರವೇರಿಸಲು ಪಣತೊಟ್ಟಿರುವುದು ಗೊತ್ತಾಗುತ್ತಿದೆ.

ಕಸಾರಂ ಸಾಹಿತ್ಯೋತ್ಸವಗಳ ಒಂದು ವೈಶಿಷ್ಟ್ಯವೆಂದರೆ ಪ್ರತಿಸಲದ ಉತ್ಸವಕ್ಕೂ ಒಂದು ನಿರ್ದಿಷ್ಟ ವಿಷಯ ಅಥವಾ ಥೀಮ್ ಇರುತ್ತದೆ. ಮೊತ್ತಮೊದಲ ಉತ್ಸವವು ಕುವೆಂಪು ಜನ್ಮಶತಾಬ್ದಿ ವರ್ಷದಲ್ಲಿ (2004) ಆಗಿದ್ದರಿಂದ ಕುವೆಂಪು ಸಾಹಿತ್ಯ ಸಮೀಕ್ಷೆಯೇ ಆ ಸಲದ ಥೀಮ್ ಆಗಿತ್ತು. ಆಮೇಲಿನ ಉತ್ಸವಗಳಲ್ಲಿ ಅನುಕ್ರಮವಾಗಿ ಕನ್ನಡ ಕಥಾಸಾಹಿತ್ಯ, ಹಾಸ್ಯಸಾಹಿತ್ಯ, ಕನ್ನಡ ಕಾದಂಬರಿ ಲೋಕ, ಪ್ರಬಂಧಸಾಹಿತ್ಯ, ಅಮೆರಿಕಕ್ಕೆ ವಲಸೆ ಬಂದು ಜೀವನ ಕಟ್ಟಿಕೊಂಡವರ ಅನುಭವಕಥನ, ಅನುವಾದಸಾಹಿತ್ಯ, ಭಕ್ತಿಸಾಹಿತ್ಯ ಮುಂತಾದುವು ಮುಖ್ಯ ವಿಷಯಗಳಾದುವು. ಪ್ರತಿ ಉತ್ಸವದಲ್ಲೂ ಮುಖ್ಯ ವಿಷಯವನ್ನು ಕುರಿತು ಅಮೆರಿಕನ್ನಡಿಗ ಬರಹಗಾರರಿಂದ ಲೇಖನಗಳನ್ನು ಬರೆಸಿ ಸಂಪಾದಿಸಿದ ಒಂದು ಗ್ರಂಥ ಬಿಡುಗಡೆಯಾಗುತ್ತದೆ. ವಿಷಯಕ್ಕೆ ಸೂಕ್ತವಾಗುವ ರೀತಿಯಲ್ಲಿ ಕರ್ನಾಟಕದಿಂದ ಒಬ್ಬರು ಅಥವಾ ಇಬ್ಬರು ಪ್ರಸಿದ್ಧ ಸಾಹಿತಿಗಳನ್ನು ಮುಖ್ಯ ಅತಿಥಿಗಳಾಗಿ ಆಹ್ವಾನಿಸಿ ಅಧ್ಯಕ್ಷತೆಯ ಗೌರವ ನೀಡಲಾಗುತ್ತದೆ. ಈ ಬಾರಿಯ ಉತ್ಸವದ ಥೀಮ್ 'ಜಾನಪದ ಸಾಹಿತ್ಯ'. ತದ್ ಅಂಗವಾಗಿಯೇ ಈ 'ಅಮೆರಿಕನ್ ಜಾನಪದ: ಕನ್ನಡ ಕಂಗಳಿಗೆ ಕಂಡಂತೆ' ಗ್ರಂಥದ ಲೋಕಾರ್ಪಣೆ. ಉತ್ಸವದ ಅಧ್ಯಕ್ಷತೆಯ ಗೌರವ ಪಡೆಯುತ್ತಿರುವವರು ಕನ್ನಡದ ಹಿರಿಯ ಸಾಹಿತಿ, ಪ್ರಾಧ್ಯಾಪಕ, ಜಾನಪದ ವಿದ್ವಾಂಸ ಡಾ. ಕೃಷ್ಣಮೂರ್ತಿ ಹನೂರು. ಅವರ ಆಶಯಭಾಷಣದ ಸಾರಾಂಶವನ್ನು 'ಕನ್ನಡ ಜಾನಪದ' ಶೀರ್ಷಿಕೆಯ ಸುದೀರ್ಘ ಲೇಖನವಾಗಿ ಇದೇ ಗ್ರಂಥದಲ್ಲಿ ಪ್ರಕಟಿಸಿರುವುದೂ ಒಂದು ವೈಶಿಷ್ಟ್ಯವೇ. ಕನ್ನಡದ ಹಿರಿಯ ವಿಮರ್ಶಕ ಸಿ.ಎನ್.ರಾಮಚಂದ್ರನ್ ಅವರು ಗ್ರಂಥಕ್ಕೆ ಬೆನ್ನುಡಿ ಬರೆದು ಹರಸಿದ್ದಾರೆ. 'ಅಮೆರಿಕಾ, ಕೆನಡಾ, ಬ್ರೆಝಿಲ್, ಆಸ್ಟ್ರೇಲಿಯಾ ಮುಂತಾದ ದೇಶಗಳಲ್ಲಿ ಇರುವ ಮೂಲನಿವಾಸಿಗಳು, ಕಪ್ಪು ಜನಾಂಗ, ಭಿನ್ನ ಕಾಲಘಟ್ಟಗಳಲ್ಲಿ ಅಮೆರಿಕಕ್ಕೆ ವಲಸೆ ಹೋದ ಯುರೋಪಿಯನ್ನರು– ಇವರುಗಳ ಚರಿತ್ರೆ, ಪುರಾಣ, ನಂಬಿಕೆಗಳು,

ಕಥೆ–ಹಾಡು, ಸಂಗೀತ, ವೈದ್ಯವಿದ್ಯೆ ಇತ್ಯಾದಿ ಅನೇಕ ಜಾನಪದೀಯ ಪ್ರಭೇದಗಳನ್ನು ಇಲ್ಲಿರುವ ಸಂಶೋಧನಾತ್ಮಕ ಲೇಖನಗಳು ಪರಿಚಯಿಸುತ್ತವೆ. ಇದೊಂದು ರೋಚಕ ಹಾಗೂ ಸಂಗ್ರಹಯೋಗ್ಯ ಸಂಕಲನ. ಕನ್ನಡಕ್ಕೊಂದು ಮಹತ್ತ್ವಪೂರ್ಣ ಕೊಡುಗೆ...' ಎಂದು ಕಸಾರಂನ ಬೆನ್ನು ತಟ್ಟಿದ್ದಾರೆ.

ಪರಿವಿಡಿಯ ಮೇಲೆ ಹೀಗೇ ಒಮ್ಮೆ ಕಣ್ಣುಹಾಯಿಸಿದರೆ ಈ ಗ್ರಂಥದ ಅಂತಃಸತ್ತ್ವ ವೇದ್ಯವಾಗುತ್ತದೆ: 'ನಯಾಗರಾ ಜಲಪಾತದ ಮೈಡ್ ಆಫ್ ದ ಮಿಸ್ಟ್ ಮೇಲಿನ ಒಂದು ಐತಿಹ್ಯ ಕಥೆ', 'ಐರೋಪ್ಯ ವಲಸೆಗಾರರ ಬರ್ಬರತೆಗೀಡಾದ ಅಮೆರಿಕದ ಮೂಲ ನಿವಾಸಿಗಳ ನೈಜ ಇತಿಹಾಸ', 'ಎಸ್ಕಿಮೊ ಅಲ್ಲ! ಇವರು ಇನ್ಯುಯಿಟ್ಸ್', 'ಆಮಿಶ್ ಸಮುದಾಯದ ಇತಿಹಾಸ ಮತ್ತು ಪರಂಪರೆ', 'ಜೀವನ, ಮರಣ ಮತ್ತು ಮರಣೋತ್ತರ ಜೀವನ: ಅಮೆರಿಕೆಯ ಮೂಲನಿವಾಸಿಗಳ ನಂಬಿಕೆ ಮತ್ತು ಸಂಪ್ರದಾಯಗಳು', 'ವೂಡೂ ಎಂಬ ಜಾನಪದ ಧಾರ್ಮಿಕ ಸಂಸ್ಕೃತಿ', 'ಅಮೆರಿಕೆಯ ಜಾನಪದ ಕಥೆಗಳಲ್ಲಿ ಭೂತ–ಪ್ರೇತಗಳು', 'ಮೌಂಟ್ ಶಾಸ್ತಾ– ದಂತಕಥೆಗಳ ಬೆಳ್ಳಿಶಿಖರ', 'ಜನಪದ ವೈದ್ಯ– ಕೆಲವು ಸೌತ್ ಇಂಡಿಯನ್ ಮತ್ತು ರೆಡ್ ಇಂಡಿಯನ್ ಮನೆಮದ್ದುಗಳು', 'ಮಾರ್ಮನ್ನರ ಜಾನಪದ ಮತ್ತು ಜೀವನ ಶೈಲಿ' ಇತ್ಯಾದಿ. ಅಂತೆಯೇ ಸಂಪಾದಕೀಯದ ಈ ಮಾತುಗಳಲ್ಲೂ: 'ನಾವ್ಯಾರೂ ಅಮೆರಿಕನ್ ಫೋಕ್‌ಲೋರ್ ಅಧ್ಯಯನ ಮಾಡಿದವರಲ್ಲ. ಒಂದಿಷ್ಟು ಓದಿ ಅಮೆರಿಕದ ಜನಪದದಲ್ಲಿ ಪ್ರಚಲಿತವಿರುವ ಕಥೆ, ಕವಿತೆ ಮುಂತಾದವುಗಳನ್ನು ಶೇಖರಿಸಿ, ಅನುವಾದಿಸಿ ಅಥವಾ ನಮ್ಮದೇ ಮಾತುಗಳಲ್ಲಿ ಪುನಃ ರಚಿಸಿ ಬರೆದರೂ ಕನ್ನಡಕ್ಕೆ ಅವು ಹೊಸತೇ ಆಗುವುವು ಎಂಬ ದೃಷ್ಟಿಯಿಂದ ಈ ಕೆಲಸ ಮಾಡಿದ್ದೇವೆ. ಅಮೆರಿಕ ಒಂದು ಬಹು ವಿಸ್ತಾರವಾದ ದೇಶ; ಸಹಸ್ರಾರು ವರ್ಷಗಳಿಂದ ಮೂಲನಿವಾಸಿಗಳ ಬೀಡಾಗಿದ್ದ ದೇಶ. ಐರೋಪ್ಯ ವಲಸೆಗಾರರು ಇಲ್ಲಿಗೆ ಬರುವ ಮುನ್ನ ಮೂಲನಿವಾಸಿಗಳ ನೂರಾರು ಬುಡಕಟ್ಟುಗಳು ಅಮೆರಿಕ ಖಂಡದಲ್ಲಿ ಹರಡಿ ಹಂಚಿಹೋಗಿದ್ದರು. ತಮ್ಮದೇ ಸಂಸ್ಕೃತಿ ಮತ್ತು ಭಾಷೆಗಳನ್ನೂ ಜೀವನ ಪದ್ಧತಿಯನ್ನೂ ಬೆಳೆಸಿಕೊಂಡಿದ್ದರು. ಅವರ ಚರಿತ್ರೆ ಏನು, ಅವರು ಹೇಗಿದ್ದರು, ಈಗ ಹೇಗಾಗಿದ್ದಾರೆ ಮುಂತಾದ ವಿಷಯಗಳ ಕುರಿತು ನಂತರ ಬಂದ ಹೊರಗಿನವರು ಬರೆದಿಟ್ಟಿದ್ದಾರೆ. ಹಾಗೆ ಬಂದವರು ಮೂಲನಿವಾಸಿಗಳನ್ನು ಅವರ ತವರಿನಿಂದ ಹೊರದಬ್ಬಿ ಇಡೀ ಖಂಡವನ್ನು ತಮ್ಮದಾಗಿಸಿಕೊಂಡು ಅವರನ್ನೇ ಪರದೇಸಿಗಳನ್ನಾಗಿಸಿದ್ದು ಇದೀಗ ಇತಿಹಾಸ. ಇಂಥವರು ಬರೆದ ಚರಿತ್ರೆಯ ಸತ್ಯಾಸತ್ಯತೆಯನ್ನು ಚರ್ಚಿಸುವ ಗೊಡವೆಗೆ ನಾವು ಕೈಹಾಕಬೇಕೇ? ಅಥವಾ ನಮ್ಮ ಉದ್ದೇಶವನ್ನು 'ಅಮೆರಿಕದ ಜನಪದವೆಂದು ಏನನ್ನು ಇಂದಿನ ಸಾಧಾರಣ ಪ್ರಜೆಗಳು ನಂಬಿದ್ದಾರೋ' ಅದನ್ನು ಕನ್ನಡದಲ್ಲಿ ಹೇಳಲು ಸೀಮಿತಗೊಳಿಸಿಕೊಂಡರೆ ಸಾಲದೇ? ಈ ಎಲ್ಲ ಪ್ರಶ್ನೆಗಳನ್ನೂ ಕೇಳಿಕೊಂಡೆವು. ಮೂಲನಿವಾಸಿಗಳೇ ಅಲ್ಲದೇ, ಆಮೇಲೆ ಬಂದು, ಇತ್ತೀಚಿನ ಅಮೆರಿಕದ ಚರಿತ್ರೆಯಲ್ಲಿ ಈ ದೇಶದ ಬಣ್ಣವನ್ನೇ ಬದಲಾಯಿಸುತ್ತಿರುವ, ಕರಗಿಸುವ ಕಡಾಯಿಯಲ್ಲಿ ಬಿದ್ದು ಕರಗಿದವರ, ಕೊರಗಿದವರ ಜನಪದವೂ ನಮ್ಮ ಈ ಗ್ರಂಥದ ಮೂಲವಸ್ತುವಿನ ಒಂದು ಭಾಗವಾಗಿರಲಿ ಎಂಬುದನ್ನೂ ನಿರ್ಧರಿಸಿದೆವು. ಹಾಗಾಗಿ, ಮೂಲನಿವಾಸಿಗಳೇ ಅಲ್ಲದೆ, ಆಮೇಲಿನ ವಲಸೆಗಾರರು ಮತ್ತು ಬಿಳಿಯರು ಬಲಾತ್ಕಾರವಾಗಿ ಹಿಡಿದು ತಂದ ಕರಿಜನರ ಕಥೆಗಳೂ ಹಾಡುಗಳೂ ನಮ್ಮ ಮೂಲವಸ್ತುವಿನಡಿಯಲ್ಲಿ ವಿವಿಧ ರೀತಿಗಳಲ್ಲಿ

ಬೆರೆತುಕೊಂಡವು. ಒಟ್ಟಿನಲ್ಲಿ ಅಮೆರಿಕನ್ನಡಿಗರು ಭಾವಿಸಿದ, ಊಹಿಸಿದ, ಓದಿದ, ಚರಿತ್ರೆ ಮತ್ತು ಕಥನಗಳು, ಕನ್ನಡ ಮಸೂರದ ಮೂಲಕ ಕಂಡ 'ಅಮೆರಿಕದ ಜಾನಪದ ಮೇಲೋಗರವಾಗಿ' ನಮ್ಮ ಕೈಸೇರಿತು. ನಾವದನ್ನು ವಿಂಗಡಿಸುವ ಗೋಜಿಗೆ ಹೋಗಲಿಲ್ಲ. ಜನಪದವೆಂಬುದು ಜಗದಗಲ ಹಾಗೂ ಮೂಲರೂಪದಲ್ಲಿ ಸಾಕಷ್ಟು ಸಾಮ್ಯಗಳಿಂದ ಕೂಡಿದ್ದು ಎಂಬ ಸತ್ಯದ ಅರಿವೂ ನಮಗಾಯಿತು. ಹೀಗೆ ನಾವು ಆಯ್ದು ಪೋಣಿಸಿದ ಹೂವುಗಳು ವಿವಿಧ ಬಣ್ಣ ಮತ್ತು ಸುಗಂಧಗಳಿಂದ ಕೂಡಿ, ವೈಚಾರಿಕತೆ ಮತ್ತು ರಂಜಕತೆಯ ಜೊತೆಗೆ ಮಾಹಿತಿಪೂರ್ಣವೂ ಆದ ಒಂದು ಸುಂದರ ಹಾರವಾಗಿದೆಯೆಂದು ನಂಬಿದ್ದೇವೆ.'

ಅಂದಹಾಗೆ 'ಅಮೆರಿಕನ್ ಜಾನಪದ: ಕನ್ನಡ ಕಂಗಳಿಗೆ ಕಂಡಂತೆ' ಗ್ರಂಥವನ್ನು ಪ್ರಕಾಶನಗೊಳಿಸಿದವರು ಕಸಾರಂ ಜೊತೆಗೆ ನಿಡುಗಾಲದ ಬಾಂಧವ್ಯ ಹೊಂದಿರುವ ಬೆಂಗಳೂರಿನ ಅಭಿನವ ಪ್ರಕಾಶನ(ಮೊಬೈಲ್: ಎನ್. ರವಿಕುಮಾರ್ 9448804905). ಕರ್ನಾಟಕದ ಪ್ರಮುಖ ಪುಸ್ತಕದಂಗಡಿಗಳಲ್ಲಿ ಈ ಗ್ರಂಥ ಲಭ್ಯವಾಗಲಿದೆ.

ಮೂರು ದಿನಗಳ ಉತ್ಸವದಲ್ಲಿ ಬೇರೆ ಆಕರ್ಷಣೆಗಳೂ ಬೇಕಾದಷ್ಟಿವೆ. 'ಗಂಧವೀಳ್ಯ' ಎಂಬ ಹೆಸರಿನ ಸ್ಮರಣಸಂಚಿಕೆಯೊಂದು ಪ್ರಕಟವಾಗುತ್ತಿದೆ. ಅಮೆರಿಕನ್ನಡಿಗ ಬರಹಗಾರರ ಪ್ರತಿಭಾಪ್ರದರ್ಶನಕ್ಕಾಗಿ 'ಬರೆದಿದ್ದಾ ತನ್ನಿ... ಓದಾನಾ ಬನ್ನಿ' ಎಂಬ ಶೀರ್ಷಿಕೆಯಡಿ ಸ್ವರಚಿತ ಕವನ, ಪ್ರಬಂಧ, ಹಾಸ್ಯಲೇಖನ, ಚುಟುಕುಗಳ ವಾಚನ ಇದೆ. ಡಾ. ಕ್ರಿಸ್ಟಿನಾ ಡೌನ್ಸ್ ಎಂಬ ಅಮೆರಿಕನ್ ಮಹಿಳೆಯಿಂದ ಅಮೆರಿಕನ್ ಫೋಕ್‌ಲೋರ್ ಬಗೆಗೆ ವಿಶೇಷ ಆಹ್ವಾನಿತ ಉಪನ್ಯಾಸ ಇದೆ. ಸಮ್ಮೇಳನಾಧ್ಯಕ್ಷರೊಂದಿಗೆ ಸಂವಾದ ಇದೆ. ಅಷ್ಟೇಅಲ್ಲದೆ ಜಾನಪದ ನೃತ್ಯ, ಹಾಸ್ಯಪ್ರಹಸನ, ಯಕ್ಷಗಾನ, ಅಮೆರಿಕನ್ನಡಿಗ ಬರಹಗಾರರ ಹೊಸ ಪುಸ್ತಕಗಳ ಪರಿಚಯ, ಪ್ರದರ್ಶನ, ಪುಸ್ತಕಸಂತೆ, ವಿಚಾರಕಮ್ಮಟಗಳು, ಸಾಹಿತ್ಯಗೋಷ್ಠಿಗಳು, ಚಿತ್ರಕಾವ್ಯ ಪ್ರದರ್ಶನ, ಗಮಕವಾಚನ, ಗೀತರಸಧಾರೆ, ನೃತ್ಯರೂಪಕ, ನಾಟಕ... ಇತ್ಯಾದಿ. ಇವೆಲ್ಲ ಅಮೆರಿಕಕ್ಕೆ ವಲಸೆಬಂದ ಮೊದಲ ತಲೆಮಾರಿನವರದಷ್ಟೇ ಪ್ರಸ್ತುತಿಗಳು ಎಂದುಕೊಂಡಿರಾದರೆ ತಪ್ಪಿದಿರಿ. ಮುಂದಿನ ತಲೆಮಾರಿಗೆ ಕನ್ನಡ ಕಲಿಸಿ ಅವರಿಂದಲೂ ಅಚ್ಚಕನ್ನಡದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸುವ ಉತ್ಸಾಹಿ ಸಮೂಹ ಇಲ್ಲಿ ದೊಡ್ಡದಿದೆ. ಅದಲ್ಲದೇ ಈ ಬಾರಿ ಸಾಹಿತ್ಯೋತ್ಸವದಲ್ಲಿ ಭಾಗವಹಿಸುತ್ತಿರುವವರೆಲ್ಲರ ಉತ್ಸಾಹ ಇಮ್ಮಡಿಯಾಗಿರಲಿಕ್ಕೂ ಕಾರಣವಿದೆ. ಕೋವಿಡ್ ಮಹಾಮಾರಿಯಿಂದಾಗಿ ಕಳೆದೆರಡು ವರ್ಷಗಳಲ್ಲಿ ಈ ರೀತಿಯ ಸ್ನೇಹಸಮ್ಮಿಲನದ ಅವಕಾಶಗಳ್ಯಾವುವೂ ಇರಲೇ ಇಲ್ಲ. ಈಗ ಜಗತ್ತು ಯಥಾಸ್ಥಿತಿಗೆ ನಿಧಾನವಾಗಿ ಮರಳುತ್ತಿರುವ ವೇಳೆಯಲ್ಲಿ ಸಾಹಿತ್ಯಸುಗ್ಗಿಯ ನೆಪದಲ್ಲಿ ಒಂದಿಷ್ಟು ಉಭಯಕುಶಲೋಪರಿ, ಎಲ್ಲರೂ ಒಟ್ಟಿಗೇ ಕುಳಿತು ರುಚಿರುಚಿಯಾದ ಊಟ ತಿಂಡಿ, ಎರಡು ವರ್ಷಗಳ ಸುದೀರ್ಘ ಅವಧಿಯಲ್ಲಿ ವಾರ್‌ಡ್ರೋಬುಗಳಲ್ಲಿ ಅನಿವಾರ್ಯ ನಿಶ್ಚೇಷ್ಟತೆಯನ್ನು ಅನುಭವಿಸಿದ ರೇಷ್ಮೆಸೀರೆ ಕುರ್ತಾಪೈಜಾಮಾ ಷೇರವಾನಿಗಳಿಗೂ ಒಮ್ಮೆ ಬಿಡುಗಡೆಯ ಭಾಗ್ಯ. ಕನ್ನಡ ನಮಗೆ ಭಾಷೆಯೊಂದೇ ಅಲ್ಲ. ಕನ್ನಡತನ ನಮ್ಮ ಅಸ್ಮಿತೆ ಅನಿಸುವುದು ಇಂತಹ ಉತ್ಸವಗಳ ಸಡಗರದಲ್ಲೇ.

[ಕೃಪೆ : ವಿಶ್ವವಾಣಿ]

■

# ಕೊಟ್ಟಿದ್ದು ತನಗೆ, ಬಚ್ಚಿಟ್ಟಿದ್ದು ಪರರಿಗೆ

● ಸಹನಾ ಪ್ರಸಾದ್

"ಆಮೇಲೆ ಸಿಕ್ತೀನಿ, ಸ್ಮಿತಾ, ಈಗ ಮಾತನಾಡಲು ಸಮಯ ಇಲ್ಲ. ನನ್ನ ಬದುಕಿನ ಮುಖ್ಯ ವ್ಯಕ್ತಿ ಬರುತ್ತಾ ಇದ್ದಾರೆ. ಬೇಗ ಮನೆಗೆ ಹೋಗಬೇಕು!" ರಸ್ತೆಯಲ್ಲಿ ಸಿಕ್ಕ ಗೆಳತಿಗೆ ಓಡುತ್ತಾ ಬೈ ಹೇಳಿದೆ. "ಯಾರದು, ನಿಮ್ಮ ಗಂಡನಾ? ಬೀಗದ ಕೈ ಕೊಡೋದು ಮರೆತಿದ್ದೀರಾ" ನಮ್ಮ ಫ್ಯಾಮಿಲಿಯನ್ನು ಚೆನ್ನಾಗಿಬಲ್ಲ ಅವಳು ಸಹ ಕಿರುಚಿ ಕೇಳಿದಳು. ಅಷ್ಟರಲ್ಲಿ ಆ ರಸ್ತೆಯ ಎಲ್ಲರ ಮನೆಯ ಬಾಗಿಲಲ್ಲೂ ಜನರು ನೆರೆದು ನೋಡುತ್ತಾ ಇದ್ದರು. ರಸ್ತೆಯ ಒಂದು ಮೂಲೆ ತಲುಪಿದ ನಾನು, ಇನ್ನೊಂದು ಕೊನೆಯಲ್ಲಿ ಅವಳು, ಇಬ್ಬರ ಗಂಟಲೂ ಜೋರಾಗಿ ಇದ್ದಿದ್ದರಿಂದ ಎಲ್ಲವೂ ಸ್ಪಷ್ಟವಾಗಿ ಕೇಳುತ್ತಾ ಇತ್ತು. "ಇಲ್ಲ, ನಮ್ಮ ಮನೆ ಹೀರೋಯಿನ್ –ಕೆಲಸದವಳು !" ಎಂದು ಹೇಳಿ ರಸ್ತೆಯಲ್ಲಿ ತಿರುಗಿ ಮನೆಯತ್ತ ಓಡಿದೆ.

ಮನೆ ತಲುಪಿದಾಗ ನನಗಿಂತಾ ಜೋರು ಗಂಟಲಲ್ಲಿ ದೂರವಾಣಿಯಲ್ಲಿ ಮಾತನಾಡುತ್ತಾ ಗೇಟಿನಲ್ಲಿ ನಿಂತಿದ್ದಳು ಈರಮ್ಮ, ಉರುಫ್ ಹೇಮಾ. ಚಿಕ್ಕವಳಿದ್ದಾಗ ಯಾರೋ ಹೇಮಾ ಚೌಧರಿ ತರಹ ಕಾಣುತ್ತೀಯ ಅಂದಿದ್ದನಂತೆ, ಅವತ್ತಿನಿಂದ ಮನೆದೇವತೆಯ ಹೆಸರಿಗೆ ಬದಲಾಗಿ ಹೇಮಾ ಎಂದು ನಾಮಕರಣವಾಗಿತ್ತು." ಈಯಮ್ಮ ಯಾವಾಗಲೂ ಲೇಟು. ಗಂಡ, ಬಾಸ್ ಎಲ್ಲರ ಕೈಲೂ ಬೈಸಿಕೊಳ್ಳುತ್ತಾಳೆ" ಅವಳು ಮಾತನಾಡುತ್ತಿದ್ದು ನನ್ನ ಬಗ್ಗೆ ಅಲ್ಲ ಅಂದುಕೊಂಡು ಬಾಗಿಲು ತೆಗೆದೆ. "ಸಿಕ್ಕಸಿಕ್ಕ ಕಡೆ ಕೀ ಇಡಬೇಡ, ಯಾರಾದರೂ ತೆಗೆದುಕೊಂಡು ಹೋಗಿ ನಕಲು ಮಾಡಿಸಿದರೆ ಏನು ಮಾಡುತ್ತೀಯಾ" ಇವರ ಮಾತುನೆನಪಿಗೆ ಬಂದು ರೂಮಿಗೆ ನಡೆದೆ. " ನಿಮ್ಮ ಬಾಕ್ಸ್ ತೊಳೆಯಲು ತೆಗೆದುಕೊಳ್ಳಲಾ" ಎಂದವಳಿಗೆ "ಹೂ" ಎನ್ನುವಷ್ಟರಲ್ಲಿ ಆ ದಿನ ಸಹೋದ್ಯೋಗಿ ಕೊಟ್ಟ ಸ್ವೀಟ್ ಬಾಕ್ಸ್ ನೆನಪಿಗೆ ಬಂತು. "ಇರು, ನಾನೇ ಕೊಡ್ತೀನಿ" ಎಂದು ಹಾಲಿಗೆ ಹೋಗುವ ಹೊತ್ತಿಗೆ ನನ್ನ ಬ್ಯಾಗ್ತೆಗೆದು ಲಂಚ್ ಬಾಕ್ಸ್, ಸ್ವೀಟ್ ಬಾಕ್ಸ್ ಎರಡೂ ತೆಗೆದು ಇಟ್ಟಿದ್ದಳು. ನನ್ನ ಮುಖವನ್ನೇ ನೋಡುತ್ತಾ ನಿಂತ ಅವಳನ್ನು ನೋಡಿ ಹಲ್ಲು ಕಿರಿದೆ. ಸ್ವೀಟ್ ಬಾಕ್ಸ್‌ನಿಂದ ಎರಡು ತುಂಡು ಸಿಹಿ ಅವಳ ಕೈಗಿತ್ತೆ. ಒಟ್ಟಿಗೆ ಬಾಯಿಗೆ ಹಾಕಿಕೊಂಡು ಅಲ್ಲೇ ನಿಂತಳು. "ಏನು" ಎಂಬಂತೆ ಹುಬ್ಬೇರಿಸಿದೆ. "ಖಾರ ಇಲ್ಲವಾ" ಎಂದು ಸಿಹಿ ಜಗಿಯುತ್ತಾ ಕೇಳಿದವಳಿಗೆ ಎರಡು ಬಿಗಿಯುವಷ್ಟು ರೇಗಿತು. ಸುಮ್ಮನೆ ರೂಮಿಗೆ ನಡೆದು ಡ್ರೆಸ್ ಬದಲಾಯಿಸಿ ಕುಳಿತವಳಿಗೆ ಬಿಸಿ ಚಹಾ ತಂದಿಟ್ಟ ಅವಳನ್ನು ನೋಡಿ ಮುಗುಳುನಕ್ಕೆ. ಅಡುಗೆ ಮನೆಯಲ್ಲಿ ಬಿಸ್ಕತ್ತು ಪೊಟ್ಟಣ ಹಾಗೂ ಓಂಪುಡಿಇತ್ತು. ಚಹಾದೊಂದಿಗೆ ಒಳ್ಳೆಯ ಜೋಡಿ ಎಂದು ಯೋಚಿಸಿದಾಗ "ಇವಳಿಗೂ ಕೊಡಬೇಕಾಗುತ್ತೆ " ಎಂದು ಸುಮ್ಮನಾದೆ. ಅವಳು ನನ್ನ ಮುಂದೆ ಕುಳಿತು, ತನ್ನ ಚಹಾ ಮುಗಿಸಿ ಪಾತ್ರೆ ಬೆಳಗಲು ಹಿತ್ತಲಿಗೆ ನಡೆದಳು. ನಾನು ನಿಧಾನವಾಗಿ ಕುಡಿಯುತ್ತ ಇದ್ದಿದ್ದರಿಂದ ಇನ್ನೂ ಅರ್ಧ ಕಪ್ ಉಳಿದಿತ್ತು. ಅಡುಗೆ ಮನೆಗೆ ಹೋಗಿ ಹುಡುಕಿದರೆ ಬಿಸ್ಕತ್ ಹಾಗೂ ಓಂಪುಡಿ ಸಿಗಲೇ ಇಲ್ಲ. ಅಷ್ಟರಲ್ಲಿ ಹೇಮಾ ಬಂದು ಸೈಲೆಂಟಾಗಿ ಮೇಲಿನ ಕಪಾಟಿನಿಂದ ಎರಡೂ ತೆಗೆದು ಕೊಟ್ಟಳು. ನಾಚಿಕೆಯಿಂದ ಮಾತನಾಡಲು ಆಗದೆ ಸುಮ್ಮನೆ ನಿಂತ ನನ್ನ ಕಪ್ ತೆಗೆದುಕೊಂಡು, ಅವಳೇ ಬಿಸಿ ಮಾಡಿ ಕೊಟ್ಟಳು. ಒಂದು ತಟ್ಟೆಯಲ್ಲಿ ಬಿಸ್ಕತ್, ಓಂಪುಡಿ ಹಾಕಿ ಕೊಟ್ಟು ನಾನು ಹೊರನಡೆದೆ, " ಎಲ್ಲಾ ಗೊತ್ತು ನನಗೆ" ಎಂಬ ಅವಳ ಮುಖಭಾವ ನೋಡಲಾಗದೆ.

ಸ್ವಲ್ಪ ಹೊತ್ತಿನಲ್ಲಿ ಇವರ ಕರೆ ಬಂತು. ಇಲ್ಲೇ ಹತ್ತಿರದ ದರ್ಶಿನಿಯಲ್ಲಿ ಇದ್ದೀನಿ, ನೀನು ಬಾ. ಏನಾದರೂ ತಿಂದು ಬರೋಣ, ರಾತ್ರಿಗೆ ಅಡುಗೆ ತಪ್ಪುತ್ತದೆ ಎಂದು. "ಹೇಮಾ ಇದಾಳೆ, ಕಳಿಸಿ ಬರುತ್ತೇನೆ. ಎರಡು ಮಸಾಲೆದೋಸೆ ಆರ್ಡರ್ ಮಾಡಿರಿ" ಎಂದು ಕರೆ ಕಟ್ಮಾಡಿದೆ. ಸೆರಗಿಗೆ ಕೈ ಒರೆಸುತ್ತಾ ಬಂದಳು. " ನಾನು ಮಸಾಲೆದೋಸೆ ತಿಂದು ಬಹಳ ದಿನ ಆಯ್ತು ಮೂಲೆಯಲ್ಲಿ ಇರುವ ಚಂದ್ರದರ್ಶಿನಿಯಲ್ಲಿ ಕಾಯುತ್ತಾ ಇದ್ದಾರಾ ಅಣ್ಣ?" ಸುಸ್ತಾದೆ. "ನೀನೂ ಬಾ, ಹಾಗೆಯೇ ತಿಂದು ಮನೆಕಡೆ ಹೋಗು" ಎನ್ನಲೇ ಬೇಕಾಯ್ತು. ಡ್ರೆಸ್ ಬದಲಾಯಿಸಿ ಮನೆಯ ಬೀಗದ ಕೈಹುಡುಕಿದರೆ ಸಿಗಲೇಇಲ್ಲ. ಹೇಮಾಳಿಗೆ ಕಾಣಿಸಬಾರದೆಂದು ರೂಮಿಗೆ ತೆಗೆದುಕೊಂಡು ಹೋಗಿದ್ದು ನೆನಪಿಗೆ ಬಂತು. ಕಳ್ಳ ಕೆದರಿದಂತೆ ಹರಡಿಕೊಂಡಿದ್ದ ರೂಮಿನಲ್ಲಿ ಹುಡುಕಲು ಹೇಗೆ ಸಾಧ್ಯ. ಬಿಚ್ಚಿಟ್ಟ ಸೀರೆ, ಎಸೆದಿದ್ದ ಪರ್ಸ್ ಕೆಳಗೆ ಅಡಗಿಕೂತಿದ್ದ ಕೀ ಅವಳೇ ಬಂದು ಹುಡುಕಿಕೊಟ್ಟಳು. ನನ್ನ ಬೀರುವಿನ ಕಡೆಯೇ ನೋಡುತ್ತಾ" ನಿಮ್ಮ ಹೊಸಾ ಡ್ರೆಸ್ತುಂಬಾ ಚೆನ್ನಾಗಿದೆ, ಎಷ್ಟು ಕೊಟ್ಟರಿ, ಅಕ್ಕಾ" ಎಂದವಳ ಮುಖವನ್ನು ಅಚ್ಚರಿಯಿಂದ ನೋಡಿದೆ. ಅವಳಿಗೆ ಗೊತ್ತಾಗಬಾರದು, ನನಗೆ ನಿಮ್ಮ ಹಳೆ ಡ್ರೆಸ್ಕೊಡಿ ಎಂದಾಳು, ಎಂದು ಜಾಗ್ರತೆಯಿಂದ ಹಳೆ ಬಟ್ಟೆಗಳ ಮಧ್ಯೆ ಇಟ್ಟಿದ್ದ ಡ್ರೆಸ್ ಬಗ್ಗೆ ಹೇಗೆ ತಿಳಿಯಿತು ಅವಳಿಗೆ? ಅಷ್ಟರಲ್ಲಿ ಇವರ ಫೋನ್ ಮತ್ತೆ ಬಂದಾಗ ಕುರಿಯಂತೆ ಅವಳನ್ನೇ ಹಿಂಬಾಲಿಸಿದೆ. ಬೀಗಹಾಕಿ ನನ್ನ ಬ್ಯಾಗ್ ಹೊರಗಡೆ ಇರುವ ಪಾಕೆಟ್ಟೆಗೆದು ಕೀ ಇಟ್ಟಳು. "ಅವಳನ್ನೂ ಯಾಕೆ ಕರೆತಂದೆ" ಎಂದು ಇವರು ಕೇಳಿದಾಗ ಏನು ಹೇಳುವುದು ಎಂಬ ಯೋಚನೆಯಲ್ಲಿ ನಾನಿದ್ದರೆ, ತುಂಟನಗೆ ಬೀರುತ್ತಾ ಅವಳು ನಡೆಯುತ್ತಿದ್ದಳು.


■

---

## ಲಕ್ಷ್ಮಣ್ ಕೊರವಂಜಿ

ನಲವತ್ತರ ದಶಕದಲ್ಲಿ ಯುವ ಕನ್ನಡಿಗ ಆರ್.ಕೆ. ಲಕ್ಷಣ್ ಕೊರವಂಜಿಗಾಗಿ ರಚಿಸಿ ಕೊಟ್ಟ ವ್ಯಂಗ್ಯಚಿತ್ರಗಳು ಹಲವು.

ಅವುಗಳಲ್ಲಿ ಇದೂ ಒಂದು – ನಿಮಗಾಗಿ.




ನಮ್ಮಪ್ಪ ಕೊಂಡುಕೊಂಡಿದ್ದು ಈ ಕಾರನ್ನ ನಾನ್ನೂರು ರೂಪಾಯಿಗೆ— ಮಿಲಿಟರಿ ಕಂಟ್ರಾಕ್ಟರಿಂದ...

—ನಿಮ್ಮಪ್ಪ ಈಗ ಮಿಲಿಟರಿ ಎಂಜಿನಿಯರಲ್ಲವೇ ?

—ಹೌದು, ಮೊನ್ನೆ ತಾನೆ ಇಲ್ಲಿ ಛಾರ್ಜು ತೆಗೆದುಕೊಂಡರು,

# ಇಗ್ನೋಬೆಲ್ ಮತ್ತು ನಗ್ನೋಬೆಲ್!

● **ತುರುವೇಕೆರೆ ಪ್ರಸಾದ್**

ಮಲ್ಲಿ ಪೋಟೋ ಸ್ಟುಡಿಯೋದಲ್ಲಿ ಪರ್ಮ್ಕೇಶಿ ಯಾವುದೋ ಒಂದು ಪೇಪರ್ ಚೂರು ಹಿಡ್ಕೊಂಡು ಏನೋ ಅರ್ಥವಾಗದ ಇಂಗ್ಲೀಷ್ ಶಬ್ಧಗಳನ್ನ ವರಲ್ತಿದ್ದ: ' ಎ ರಿಪೋರ್ಟ್ ಅಬೌಟ್ ರಿಪೋರ್ಟ್ಸ್ ದಟ್ ರೆಕಮೆಂಡ್ಸ್ ದಿ ಪ್ರಿಪರೇಶನ್ ಆಫ್ ಎ ರಿಪೋರ್ಟ್ ಅಬೌಟ್ ದಿ ರಿಪೋರ್ಟ್ ಅಬೌಟ್ ರಿಪೋರ್ಟ್ಸ್ ಅಬೌಟ್ ರಿಪೋರ್ಟ್ಸ್'

ಎಲ್ಲಾ ಕಕವಗಳ ತರ ಮುಖ ಮುಖ ನೋಡಿಕೊಂಡೆವು.'ಏನೋ ಇದು? ಇದೇನು ಟಂಗ್ ಟ್ವಿಸ್ಟರ್ರಾ? ಇಲ್ಲಿ ತಿರುಮುರುಗಾಳಿನಾ?'

'ಲೇಯ್ ಗುಗ್ಗುಗಳಾ,ಇಂದು ಟಂಗ್ ಟ್ವಿಸ್ಟರ್ ಅಲ್ಲ ಕಣ್ರಲೇ! ಇದು ಪ್ರಶಸ್ತಿ ವಿಜೇತ ಶ್ರೇಷ್ಠ ಸಾಹಿತ್ಯ'

ತಲೆ ರೊಯ್ಯೆಂದು ತಿರುಗಿತು. 'ಇದೆಂತ ಸಾಹಿತ್ಯನೋ? ನಿನಗೇನು ತಲೆಗಿಲೆ ಕೆಟ್ಟಿದೆಯಾ? ನೈಪಾಲ್ ಸಾಹಿತ್ಯನೇ ನಮ್ಮ ನಾಟಕಕಾರರು ಅಟ್ಟಾಡಿಸಿಕೊಂಡು ಇಟ್ಟಾಡಿಸಿದಾರೆ. ಇದನ್ನ ಸಾಹಿತ್ಯ ಅಂದ್ರೆ ಸುಮ್ನೆ ಬಿಡ್ತಾರಾ? ಕಲ್ಲು ತಗಂಡು ಜಡೀತಾರೆ ಅಷ್ಟೇ!' ದಬಾಯಿಸಿದ ದೀಕ್ಷಿತ.

'ಹೂ ಕಣಲೇ! ನಮ್ ಕಲ್ಲೇಶಿ ಬರೆಯೋ ಅತಿ ಕೆಟ್ಟ ಕಥನ ಕಾವ್ಯವೂ ಇಷ್ಟು ಬಾಲಿಶವಾಗಿರಲ್ಲವಲ್ಲೋ? ಇದು ಯಾವ ಸೀಮೆ ಸಾಹಿತ್ಯನೋ ?' ನಾಣಿ ದನಿ ಸೇರಿಸಿದ.

'ಲೇಯ್! ಏನಂದ್ಕೊಂಡಿದೀರ ಇದನ್ನ? ಇದಕ್ಕೆ ಇಗ್ನೊಬೆಲ್ ಪ್ರಶಸ್ತಿ ಬಂದಿದೆ ಕಣ್ರೋ'

'ಇಗ್ನೊಬೆಲ್ಲಾ? ಅದ್ಯಾವುದು ತಾಟಿಬೆಲ್ಲ? ನಮಗೆ ಗೊತ್ತಿರೋದು ಬರೀ ನೊಬೆಲ್ ಪ್ರಶಸ್ತಿ ಅಷ್ಟೇ!'

'ನೊಬಲ್ ಪ್ರಶಸ್ತಿ ತರನೇ ಇದು ಇಗ್ನೋಬೆಲ್ ಪ್ರಶಸ್ತಿ. ಎಡವಟ್ಟು ಸಾಧನೆ, ಸಂಶೋಧನೆಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಹತ್ತು ಕ್ಷೇತ್ರಗಳಲ್ಲಿ ಇಂತ ಪ್ರಶಸ್ತಿ ಕೊಡ್ತಾರೆ. ಈಗ ನಾನು ಹೇಳಿದ್ದು ಅಂತ ಪ್ರಶಸ್ತಿ ಗಿಟ್ಟಿಸಿಕೊಂಡ ಅಮೇರಿಕನ್ ಕಚೇರಿಯೊಂದರ ರಿಪೋರ್ಟ್'

'ಅಯ್ಯೋ ಇದರಜ್ಜೀನ್! ಇಂಥ ರಿಪೋರ್ಟ್‌ಗಳನ್ನ ನಾವೂ ಒಂದು ಸಾವಿರ ಬರೀಬಹುದಿತ್ತಲ್ಲೋ?'ದೀಕ್ಷಿತ ತಲೆ ಚಚ್ಚಿಕೊಂಡ

'ಹೂ! ಬರೆದು ಬಿಡ್ತೀಯ? ಅದೇನು ಕಾಲೇಜು ಗೋಡೆ ಮೇಲೆ ಗೀಚ್ತಿದ್ಯಲ್ಲ..ಆ ತರ ಟಾಯ್ಲೆಟ್ ಸಾಹಿತ್ಯ ಅಂದ್ಕೊಂಡ್ಯಾ?' ನಾಣಿ ಕೆಣಕಿದ.

'ಇಲ್ಲ ಕಣಲೇ! ಒಂದ್ ವರ್ಷ ಅಮೇರಿಕನ್ ನ್ಯೂಡಿಸ್ಟ್ ಲೈಬ್ರರಿಗೆ ಈ ತರ ಸಾಹಿತ್ಯ ಇಗ್ನೋಬೆಲ್ ಸಿಕ್ಕಿತ್ತು. ಪಾಪ! ದೀಕ್ಷಿತನ ಪ್ರತಿಭೆ ಗುರುತಿಸೋರೇ ಇಲ್ಲ, ಇವನ ಟಾಯ್ಲೆಟ್ ಲೈಬ್ರರಿಗೂ ಇಗ್ನೋಬೆಲ್ ಸಿಗಬೇಕಿತ್ತು' ಪರ್ಮ್ಕೇಶಿ ಲೊಚಗುಟ್ಟಿದ.

'ಅದಿರ್ಲಿ, ಈಗ ಅದೇನೋ ರಿಪೋರ್ಟ್ ಸಾಹಿತ್ಯ ಅಂದ್ಯಲ್ಲ..ಎಲ್ಲಿ ಒಂದು ಒದರು ನೋಡೋಣ..'

'ನಮ್ಮಲ್ಲೂ ಕೆಲವು ಸಾರಿ ರಿಪೋರ್ಟ್ ಸಾಹಿತ್ಯ ಆಗುತ್ತೆ, ಸಾಹಿತ್ಯ ರಿಪೋರ್ಟ್ ಆಗುತ್ತೆ..ನಾನೊಂದು ವರದಿ ವದರ್ತೀನಿ ಕೇಳಿ. 'ಭಿನ್ನಮತರ ವರ್ತನೆ ಕುರಿತು ತನಿಖೆ ನಡೆಸಿದ ವರದಿಯ ಶಿಫಾರಸ್ಸನ್ನು ಪರಾಮರ್ಶಿಸಿ ವರದಿ ನೀಡುವ ಕುರಿತು ವರದಿ ನೀಡಿದ ವರದಿಯನ್ನು ವರದಿಯೇ ಅಲ್ಲ ಎಂದು ಕಡೆಗಣಿಸಿದ ಕುರಿತು ವರದಿ.'ಹೇಗಿದೆ?'

ಎಲ್ಲಾ ಕೂದಲು ಕಿತ್ತುಕೊಂಡರು.: 'ಸೂಪರ್ ಕಣಲೇ! ನಿನಗೆ ಎಲ್ಲಿಗಾರಾ ಗಂಟೆ ಕಟ್ಟಿ ಇಗ್ನೊಬೆಲ್ ಪ್ರಶಸ್ತಿ ಕೊಡಲೇಬೇಕು'ಮಲ್ಲಿ ಶಹಬಾಸ್ ಗಿರಿ ಕೊಟ್ಟ.

'ಹೂ ಕಣ್ರೋ! ಇಂಥ ಎಡವಟ್ಟು, ಎಡಬಿಡಂಗಿ ಸಂಶೋಧನೆ ತರ್ಕ ಮಾಡೋದ್ರಲ್ಲಿ ನಾವು ಎತ್ತಿದ ಕೈ. ಆದರೂ ನಮ್ಗೆ ಒಂದು ಇಗ್ನೊಬೆಲ್ ಪ್ರಶಸ್ತಿ ಸಿಕ್ಕಲ್ಲ ಅಂದ್ರೆ ಏನರ್ಥ? ಉದಾಹರಣೆಗೆ ಒಂದು ದೊಡ್ಡ ಗಾತ್ರದ ಬಳೆ ಸುತ್ತಿಸೋಕೆ ಕನಿಷ್ಠ 7 ಜನ ಬೇಕು ಅಂತ ಸಂಶೋಧನೆ ಮಾಡಿ ಒಟ್ಟಾಯ ವಿವಿಯ ವಿಜ್ಞಾನಿಗಳು ಇಗ್ನೊಬೆಲ್ ಗಿಟ್ಟಿಸಿದ್ರು. ಆದರೆ ನಮ್ಮಲ್ಲಿ ಒಂದು ಚಿಕ್ಕ ಬಳೆ 7 ಜನ ಗಂಡಸರನ್ನ ಗಿರ್ರನೆ ಗುರುತ್ವಾಕರ್ಷಣೆ ತಪ್ಪಿಸಿ ಸುತ್ತಿಸಲ್ವಾ? ನಮಗೆ ತಾನೇ ಪ್ರಶಸ್ತಿ ಕೊಡಬೇಕು?'ಪರ್ಮೇಶಿ ಪ್ರಶ್ನೆ ಮುಂದಿಟ್ಟ.

ಎಲ್ಲಾ ಹೌದೆಂಬಂತೆ ತಲೆದೂಗಿದರು:' ಇನ್ನೂ ಏನೇನಕ್ಕೆ ಇಗ್ನೊಬೆಲ್ ಬಂದಿದೆ?'

'ಅನಾಟಮಿ ವಿಭಾಗದಲ್ಲಿ ಚಿಂಪಾಂಜಿಗಳು ಇತರೆ ಚಿಂಪಾಂಜಿಗಳನ್ನ ಅವುಗಳ ಹಿಂಭಾಗ ನೋಡಿ ಗುರುತು ಹಿಡಿಯುತ್ತವಂತೆ'

' ನಮ್ಮಲ್ಲೇನು ಕಮ್ಮಿ? ಮದುವೆಯಾದ ಗಂಡಸರು ಹಿಂಬಾಗ ನೋಡೇ ಪಕ್ಕದ ಮನೆ ಆಂಟಿರನ್ನ ಕಂಡು ಹಿಡಿಯಲ್ಲವಾ?' ನಾಣಿ ಹೊಸ ಸಂಶೋಧನೆ ಮಂಡಿಸಿದ. ಎಲ್ಲರ ಕಣ್ಣರಳಿತು.

'ನೋಡುದ್ಯಾ? ನಾನು ಹೇಳಲಿಲ್ಲವಾ? ನಮಗೆ ಅನ್ಯಾಯ ಆಗಿದೆ ಅಂತ. ಮನಃಶಾಸ್ತ್ರ ವಿಭಾಗದಲ್ಲಿ ಎಡಕ್ಕೆ ವಾಲಿದರೆ ಪೀಸಾ ಗೋಪುರ ಚಿಕ್ಕದಾಗಿ ಕಾಣುತ್ತೆ ಅನ್ನೋ ಸಂಶೋಧನೆಗೆ ಪ್ರಶಸ್ತಿ ಸಿಕ್ಕಿದೆ'

' ಹೌದಾ? ನಾವೂ 'ಯಡ'(ಯಡಯೂರಪ್ಪ)ಕ್ಕೆ ಹೆಚ್ಚು ವಾಲಿದರೆ ಪೈಸಾ ಗೋಪುರ( ಸರ್ಕಾರ) ಬಿದ್ದೇ ಹೋಗುತ್ತೆ ಅನ್ನೊ ತರ ಕನಸು ಬೀಳುತ್ತೆ ಅಂತ ಪ್ರೂವ್ ಮಾಡಿ ಅವಾರ್ಡ್ ಗಿಟ್ಟಿಸಬಹುದಿತ್ತಲ್ಲ..'

'ಇನ್ನೊಂದಿದೆ. ರಸಾಯನ ಶಾಸ್ತ್ರ ವಿಭಾಗದಲ್ಲಿ ಸ್ವೀಡನ್ನಲ್ಲಿ ಕೆಲವು ಜನರ ಕೂದಲು ಏಕೆ ಹಸಿರು ಬಣ್ಣಕ್ಕೆ ತಿರುಗುತ್ತದೆ ಎಂಬುದಕ್ಕೆ ಇಗ್ನೋಬೆಲ್ ಸಿಕ್ಕಿದೆಯಂತೆ'

' ಮದುವೆ ಆದ ಮೇಲೆ ಗಂಡಸರ ಕೂದಲೇ ಏಕೆ ಉದುರಿ ಹೋಗುತ್ತೆ ಅಂತ ನಾವು ಈಗಾಗಲೇ ಸಂಶೋಧನೆ ಮಾಡಿದೀವಲ್ಲ..'

' ಏನು ಪ್ರಯೋಜನ? ಅದು ನೆಗ್ಲಿಜಬಲ್ ಆಗಿದೆಯಲ್ಲ,ಸೋ ನೋ ಇಗ್ನೊಬೆಲ್! ನರಶಾಸ್ತ್ರದಲ್ಲಿ ಸಂಕೀರ್ಣ ಯಂತ್ರಗಳನ್ನ ಉಪಯೋಗಿಸಿ ಸತ್ತ ಮೆದುಳೂ ಅರ್ಥಪೂರ್ಣ ಚಟುವಟಿಕೆ ನಿರ್ವಹಿಸಬಲ್ಲದು ಅಂತ ಪ್ರೂವ್ ಮಾಡಿ ಪ್ರಶಸ್ತಿ ಬಾಚ್ಕೊಂಡಿದಾರೆ ಗೊತ್ತಾ?'

‘ಎಲಾ ಇವರ! ನಮ್ಮಲ್ಲಿ ಬದುಕಿರೋರಿಗೆ ಯಂತ್ರ,ತಂತ್ರ ಏನು ಕಟ್ಟುದ್ರೂ ಮೆದುಳು ಕೆಲಸ ಮಾಡಲ್ಲವಲ್ಲ..ಈ ಸಂಶೋಧನೆಗೆ ಏನೂ ಇಲ್ಲವಾ?’

‘ ಅದಿರ್ಲಿ, ಮನುಷ್ಯರ ಪೋನಿಟೈಲ್ ಹಾಗೆ ರೂಪ ಪಡ್ಕೊಂಡು ನಿಂತ್ಕೊಳಕ್ಕೆ ಕಾರಣ ಆಗೋ ಸಮತೋಲನ ಬಲಗಳನ್ನ ಕಂಡು ಹಿಡಿದಿದ್ದಕ್ಕೂ ಇಗ್ನೊಬೆಲ್ ಕೊಟ್ಟಿದಾರಲ್ಲ..’

‘ ನಮ್ಮಲ್ಲಂತೂ ಈ ತರದ್ದು ಎಷ್ಟಿದೆ? ನಾಯಿ ಬಾಲ ಯಾಕೆ ಹಾಗೆ ನಿಂತ್ಕೊಳುತ್ತೆ ಅನ್ನೋದರಿಂದ ಹಿಡಿದು ಒಂದು ಹುಡುಗಿಯ ಪೋನಿಟೈಲ್ ಎಷ್ಟು ಹುಡುಗರ ಬಲ ಕಿತ್ಕೊಂಡು ಬಾಲ ಅಲ್ಲಾಡಿಸೋ ಹಾಗೆ ಮಾಡುತ್ತೆ ಅನ್ನೋ ತನಕ ನಾವು ಕಾಲೇಜಲ್ಲಿದ್ದಾಗಲೇ ರಿಸರ್ಚ್ ಮಾಡಿದ್ವಲ್ಲ..’

‘ ಒಬ್ಬ ಮನುಷ್ಯ ಕಾಫಿ ಕಪ್ ತಗಂಡು ಹೋಗಬೇಕಾದರೆ ಕಪ್‌ನಲ್ಲಾಗೋ ದ್ರವ ಪರಿಭ್ರಮಣದ ಸಂಶೋಧನೆಗೆ ಪ್ರಶಸ್ತಿ ಸಿಕ್ಕಿದೆ’

‘ಅಂತಹ ದ್ರವ ಪರಿಭ್ರಮಣ ಮನುಷ್ಯನೊಳಗೆ ಹೇಗೆ ಪರಿಣಾಮ ಬೀರುತ್ತೆ ಅನ್ನೋದಕ್ಕೆ ರೇಣುಕಾ ಎಫೆಕ್ಟ್ ಅಂತ ಒಂದು ಪ್ರಶಸ್ತಿ ಕೊಡಬಹುದಿತ್ತಲ್ಲ..!’

‘ ಒಬ್ಬ ಮನುಷ್ಯ ಮಾತಾಡಿದ್ದನ್ನ ತಾನೇ ಕೇಳೋ ಹಾಗೆ ಮಾಡಿ ಅವನ ಮಾತನ್ನ ತುಂಡರಿಸೋ ಮೆಶಿನ್ ಕಂಡು ಹಿಡಿದವರಿಗೂ ಪ್ರಶಸ್ತಿ ದಕ್ಕಿದೆಯಂತಪ್ಪ’

‘ಹೋಗತ್ಲಗೆ! ನಮ್ ನೇಟಿವಿಟಿನೇ ಕಿತ್ಕೊಂಡು ಬಿಟ್ರಾ? ರಾಜಕೀಯದೋರು ಮಾತಾಡಿದ್ದನ್ನ ಸಾವಿರ ಲಕ್ಷ ಸಾರಿ ಅವರೇ ಕೇಳೋ ಹಾಗೆ ಮಾಡಿ ಬಾಯ್ ಮುಚ್ಚಿಸೋ ಮೆಶಿನ್ ನಾವು ಕಂಡು ಹಿಡಿದು ಯಾವುದೋ ಜಮಾನನೇ ಆಯ್ತು. ಅದಕ್ಕೆ ಈಗ ಪ್ರಶಸ್ತಿನಾ?’

‘ ಯಾವುದೋ ಆ ಮೆಶಿನ್ನು?’

‘ಇನ್ಯಾವುದು? ನಮ್ ನೇಟೀವ್-ಟಿವಿ, ಟಿವಿ 9 ಕಣ್ರಲೇ..’

‘ಯಾವುದು ಕೊಡ್ಲಿ ಬಿಡ್ಲಿ! ನಮ್ ದೇಶದ ಸೌಂದರ್ಯ ರಾಣಿಯರಿಗೆ ನಗ್ನೋ-ಬೆಲ್ ಅಂತೂ ಕೊಡಲೇಬೇಕು?

‘ ನಗ್ನೋಬೆಲ್ಲಾ? ಹಾಗಂದ್ರೇನು?

‘ಕರಾಗ್ರೇ ವಸತೇ ಕತ್ರಿನಾ, ಕರಮಧ್ಯೇ ಶೆರಾವತ್,ಕರಮೂಲೇ ಸ್ಥಿತಾ ಪಡುಕೋಣೆ, ಪ್ರಭಾತೇ ನೇಹ (ದೇಹ)ದರ್ಶನಂ’ ಅಂತ ಹೇಳ್ಕೊಳೋ ಹೆಮ್ಮೆಯ ಸುಂದರಿಯರ ದೇಶ ಇದು. ಬಟ್ಟೆಗಳಿಗೆ ತೂತಲ್ಲ, ತೂತುಗಳಿಗೆ ಬಟ್ಟೆ ತುಣುಕು ಡಿಸೈನ್ ಮಾಡಿದ ಸೀರೆಯೇ ಉಡದ ಸೌಂದರ್ಯವತಿಯರಿಗೆ ಒಂದು ನಗ್ನೋ-ಬೆಲ್ ಕೊಡಲೇಬೇಕಲ್ಲವಾ?

‘ ಒಳ್ಳೇ ಜೋಕ್ ಕಣಲೇ..’

‘ಜೋಕ್ ಅನ್ನುತ್ಲೂ ಜ್ಞಾಪಕ ಬಂತು. ಹಾಗೇ ನಮ್ ಹಾಸ್ಯೋತ್ಸವದ ಕಿಲಾಡಿಗಳಿಗೆ ಒಂದು ಇಗ್ನೊಬೆಲ್ ಕೊಡಿಸಬೇಕು. ಇಲ್ಲ ಅಂದ್ರೆ ಅಟ್‌ಲೀಸ್ಟ್ ಒಂದು ನಗ್-ನೊಬೆಲ್ ಆದರೂ ಕೊಡಲೇಬೇಕು..ಏನಂತೀರಿ?’

ಎಲ್ಲಾ ಸೈ ಎಂದು ತಲೆದೂಗಿದರು.

■

**। ದಂನಆ**

- S ಸಮಾಧಾನಕ್ಕೆ ನಮಗಿಂತ ಕೆಳಗಿನವರನ್ನು ನೋಡಬೇಕು. ಸಾಧನೆಗೆ ನಮಗಿಂತ ದೊಡ್ಡವರನ್ನು ನೋಡಬೇಕು.
- S ಹಿಮಾಲಯ್‌ಕೆ ಸಾಮ್ನೆ ಹೀರೊ ಮತ್ ಬನೊ; ಹಿಮಾಲಯ್ ಖುದ್ ಹೀರೊ ಹೈ.
- S ಬಡವರಿಗೆ ದೇವರು ಯಾವತ್ತೂ ಔಷಧಿ ಖರ್ಚು ಕೊಡೊಲ್ಲ.
- S ದಿ ಪೆನ್ ಈಸ್ ದಿ ಟಂಗ್ ಆಫ್ ದಿ ಮೈಂಡ್.
- S ಆರೋಗ್ಯವು ಯಾವಾಗಲೂ ಅನಾರೋಗ್ಯವನ್ನು ನಿಕೃಷ್ಟವಾಗಿ ಕಾಣುತ್ತದೆ.
- S ಹ್ಯಾಪಿನೆಸ್ ಈಸ್ ನಾಟ್ ಎ ಗೋಲ್. ಇಟ್ಸ್ ಎ ಬೈಪ್ರಾಡಕ್ಟ್ ಆಫ್ ಎ ಲೈಫ್ ವೆಲ್ ಲಿವ್ಡ್.
- S ಮುಚ್ಚಿದ ಕಪಾಟಿನಲ್ಲಿ ಆತ್ಮಹತ್ಯೆ ಮಾಡಿಕೊಂಡ ಪುಸ್ತಕ ತನ್ನ ಮರಣ ಪತ್ರದಲ್ಲಿ ಹೀಗೆಂದು ಬರೆದಿತ್ತು: ನನ್ನ ಸಾವಿಗೆ ಮೊಬೈಲ್ ಕಾರಣ.
- S ದಿ ಓನ್ಲಿ ಥಿಂಗ್ ದಟ್ ಪಾಸ್ಟ್ ಟೆಲ್ಸ್ ಅಸ್ ಈಸ್ ದಟ್ ಫ್ಯೂಚರ್ ಈಸ್ ಅನ್‌ಪ್ರಿಡಿಕ್ಟಬಲ್.
- S ನೋವು ಹಂಚಿಕೊಂಡಷ್ಟೂ ಅದು ಕಡಿಮೆ ಆಗುತ್ತದೆ ಎಂದು ಹೇಳುತ್ತಾರೆ. ಆದರೆ ಕೇಳಿಸಿಕೊಳ್ಳಲು ತಕ್ಕ ಕಿವಿಗಳು ಸುಲಭವಾಗಿ ಸಿಗುವುದಿಲ್ಲ.
- S ಎ ಗುಡ್ ಲೀಡರ್ ಈಸ್ ಸಂಒನ್ ಹು ವಿಲ್ ಟೇಕ್ ಯು ವೇರ್ ಯು ವಾಂಟ್ ಟು ಬಿ. ಬಟ್ ಏ ಬೆಟರ್ ಲೀಡರ್ ಈಸ್ ಸಂಒನ್ ಹು ವಿಲ್ ಟೇಕ್ ಯು ವೇರ್ ಯು ಆಟ್ ಟು ಬಿ.
- S ನಿಮ್ಮ ಬಾಸ್ ಯಾರು – ನೀವಾ ಅಥವಾ ನಿಮ್ಮ ಮೊಬೈಲ್?
- S ನನ್ನ ಹೆಂಡತಿಯನ್ನು ಖುಷಿಯಿಂದಿರಿಸಲು ನಾನು ಆಗಾಗ್ಗೆ ಪ್ರಯತ್ನಿಸುತ್ತೇನೆ – ಆಕೆಯಿಂದ ದೂರವಿದ್ದು.
- S ಫಾಲಿಂಗ್ ಇನ್ ಲವ್ ಈಸ್ ಎ ಲಾಟ್ ಈಸಿಯರ್ ದ್ಯಾನ್ ಆಕ್ಚುಯಲಿ ಪ್ರೊಫೆಸ್ಸಿಂಗ್ ಇಟ್.
- S ಎಲ್ಲ ಆಟಗಾರರೂ ದೇಶವನ್ನು ಪ್ರತಿನಿಧಿಸಲು ಆಗದು; ಆದರೆ ಎಲ್ಲರೂ ಆಡಲು ಸಾಧ್ಯ.
- S ಅತ್ಯುತ್ತಮವಾದ್ದು ಸಿಗುವಂತಿದ್ದರೆ ಒಳ್ಳೆಯದನ್ನು ಬಿಡಲು ಯೋಚಿಸಬೇಡ.
- S ನಾನು ಕಾಮೆಡಿಯನ್ ಆಗಬೇಕು ಎಂದು ಅಂದುಕೊಂಡಿದ್ದೀನಿ ಎಂದಾಗ ನನ್ನ ಗೆಳೆಯರೆಲ್ಲರೂ ನಕ್ಕು ಬಿಟ್ಟರು.
- S ಮ್ಯೂಸಿಕ್ ಈಸ್ ದಿ ನಾಯ್ಸ್ ದಟ್ ಥಿಂಕ್ಸ್.

■

TEMPLE OF KNOWLEDGE

# BEECHI Systems & Services

Email: admin@beechi.in
Web: www.beechi.in
Mob: 98452 64304

PLACEMENT SERVICES FOR:

- BFSI
- SOFTWARE
- MANUFACTURING
- AUTOMOBILES
- REAL ESTATE
- HOSPITALITY
- FMCG

## Beechi Prakashana ಬೀಚಿ ಪ್ರಕಾಶನ



**Books Available**

- Kannada Books
- Banking Exam Books
- Biographies
- Business & Economics
- Children & Young Adult Books
- Comics
- Competitive Exam Books
- Engineering Entrance Exam
- Fiction & Non-Fiction Books
- Office Stationery
- ಕನ್ನಡ ಪುಸ್ತಕಗಳು
- Health & Family
- Humour
- Law
- Literature
- Medical Entrance
- Politics
- Reference Books
- Religion & Spirituality
- Romance
- Other Books

**BUY Books online and get 10% discount.**

Email : admin@beechi.in | **www.beechi.in** | 98452 64304

You could also request any book of your choice by WhatsApp

# ಅರವತ್ತಕ್ಕೆ ಸ್ಕೈ ಡೈವಿಂಗ್

● ಎಂ.ಎಸ್. ನರಸಿಂಹಮೂರ್ತಿ

ವಿಶ್ವನ ಮನೆಗೆ ಹೋದಾಗ ಟೀವಿ ಓಡುತ್ತಿತ್ತು. ವಿಶ್ವ ಮತ್ತು ವಿಶಾಲು ಆಸಕ್ತಿಯಿಂದ ಟೀವಿ ನೋಡುತ್ತಿದ್ದರು. ಐದು ಏರೋಪ್ಲೇನ್‌ಗಳಿಂದ ಧುಮುಕಿದ ಒಂದಷ್ಟು ಮಂದಿ ಅಂತರಿಕ್ಷದಲ್ಲಿ ಕಸರತ್ತು ಮಾಡುತ್ತಿದ್ದರು. ಅದರಲ್ಲಿ ಏನಿದೆ ವಿಶೇಷ ಎಂಬುದು ನನಗೆ ಮೊದಲು ತಿಳಿಯಲಿಲ್ಲ.

'ವಿಶಾಲು ಅವರೇ, ಯಾರೋ ಗಾಳೀಲಿ ಈಜಾಡೋದು ನೋಡ್ತಾ ಇದ್ದೀರಲ್ಲ!' ಅಂದೆ.

'ನಮ್ಮೆಜಮಾನ್ರೂ ಇದ್ದಾರೆ ದಂಡಕ್ಕೆ' ವಿಶಾಲು ಗೊಣಗಿದಳು.

'ವಿಶ್ವನ್ನ ಯಾಕೆ ಬೈತಾ ಇದ್ದೀರಾ ? ಒಳ್ಳೇ ಗಂಡ ಅಲ್ಲವಾ ?'

'ಯಾವ ಗಂಡನಿಗೆ ಎಷ್ಟು ಅಂಕ ಕೊಡಬೇಕು ಅಂತ ಹೆಂಡತಿಗೆ ಮಾತ್ರ ಗೊತ್ತಿರುತ್ತೆ' ಎಂದು ವಿಶಾಲೂ ಹೇಳಿದಾಗ ನಿಮಗೆ ಗೊತ್ತಿಲ್ಲ ಸುಮ್ಮನಿರಿ ಎಂಬ ಅರ್ಥವೂ ಇತ್ತು.

'ಆಕಾಶದಲ್ಲಿ ಇರೋವರು ಯಾರು ?'

'ಅರವತ್ತು ವರ್ಷ ತುಂಬಿದವರು ಉತ್ಸಾಹದಿಂದ, ಧೈರ್ಯದಿಂದ ಆಕಾಶದಲ್ಲಿ ಹಾರಾಡ್ತಾ ಇದ್ದಾರೆ' ಎಂದು ಟೀವಿ ತೋರಿಸಿದಳು. ಷಷ್ಟ್ಯಬ್ದಿ ಶಾಂತಿ ಆದರೆ ಭೂಮಿ ಮೇಲೆ ಹಾರಾಡ್ತಾರೆ. ಆದರೆ ಅವರು ಅಂತರಿಕ್ಷದಲ್ಲಿ ಅಲ್ಲಾಡುತ್ತಿದ್ದರು. ವಿವರ ತಿಳಿಯಿತು. ಅರವತ್ತು ವರ್ಷ ತುಂಬಿದ 107 ವೃದ್ಧರು 18 ಸಾವಿರ ಅಡಿ ಎತ್ತರದಿಂದ ಐದು ವಿಮಾನಗಳಲ್ಲಿ ಜಿಗಿದು ಆಕಾಶದಲ್ಲಿ ಅನೇಕ ಚಿತ್ತಾರಗಳನ್ನು ಮೂಡಿಸಿದ್ದಾರೆ ಎಂಬ ಸುದ್ದಿ ಟೀವಿಯಲ್ಲಿ ಪ್ರಸಾರವಾಗುತ್ತಿತ್ತು.

'ಅದಕ್ಕೆಲ್ಲ ಟ್ರೈನಿಂಗ್ ತಗೋಬೇಕು, ವಿಶ್ವನ ಕೈಲಿ ಆಗೊಲ್ಲ' ಎಂದೆ.

'ನಮ್ಮ ಯಜಮಾನರು ಅರವತ್ತಾಯ್ತು ಅಂತ ಬಡ್ಕೋತಾರಲ್ಲ, 60 ಯಾವ ಮಹಾ ವಯಸ್ಸು ?' ಎಂದು ವಿಶಾಲು ರೇಗಿದಳು. ವಿಶ್ವ ಮಾತಾಡದೆ ಟೀವಿ ಆಫ್ ಮಾಡಿದ.

'ಯಾಕೆ ವಿಶ್ವ, ಜೀವನದಲ್ಲಿ 60ಕ್ಕೆ ಏನಾದ್ರೂ ಸಾಧನೆ ಮಾಡ್ಬೇಕು ಅಂತ ಆಸೆ ಇಟ್ಕೋ' ಎಂದೆ.

'ನಂಗೆ 60ಕ್ಕೆ ಶಾಂತಿ ಬೇಕು' ಎಂದ.

'ನೋಡಿ, ಆ ಸುದ್ದಿ ಮಾತ್ರ ಎತ್ತಬೇಡಿ, ನಂಗೆ ಸಿಟ್ಟು ಬರುತ್ತೆ' ಎಂದು ಕಾಫಿ ತರಲು ವಿಶಾಲು ಅಡಿಗೆ ಮನೆಗೆ ಹೋದಳು.

'ಯಾಕಪ್ಪಾ, ನಿನ್ನ ಹೆಂಡ್ತಿಗೆ ಅಷ್ಟು ಸಿಟ್ಟು ? 60 ವರ್ಷಕ್ಕೆ ಎಲ್ರೂ ಶಾಂತಿ ಮಾಡ್ಕೊಳ್ಳೋದು ಇದ್ದೇ ಇರುತ್ತೆ. ಷಷ್ಟ್ಯಬ್ದಿ ಸಮಯದಲ್ಲಿ ಮನೇಲಿ ಯಾಕೆ ಜಗಳ ?' ಎಂದು ಮೆಲ್ಲನೆ ಕೇಳಿದೆ.

'ನನಗೆ 60ಕ್ಕೆ ಶಾಂತಿ ಬೇಕು' ಎಂದು ವಿಶ್ವ ಮತ್ತೆ ಹೇಳಿದ. ವಿಶಾಲು ಕಾಫಿ ತಂದು ಕುಕ್ಕಿದಳು. ನನ್ನ ಹತ್ರ ನ್ಯಾಯ ಹೇಳಿದ್ಲು.

'ನೋಡಿ, ನನ್ನ ಗಂಡ ಇಷ್ಟು ದಿನ ಹೆಂಗೋ ಆಫೀಸಲ್ಲಿ ಕಾಲ ಕಳೆದ್ರು.

ಲಂಚ್ ಬ್ರೇಕಲ್ಲಿ ಯಾರ್‍ಯಾರ್‍ನೋ ಕರ್‍ಕೊಂಡು ಹೋಟೆಲ್‌ಗೆ ಹೋಗೋದು, ಅರ್ಧ ದಿನ ಆಫೀಸ್‌ಗೆ ರಜಾ ಹಾಕಿ ಸಿನಿಮಾಗೆ ಹೋಗೋದು ನಡೀತಿತ್ತು' ಎಂದಾಗ ನನಗೆ ಆಶ್ಚರ್ಯವಾಯಿತು.

'ವಿಶ್ವ ಎಂದೂ ಆ ಥರ ಮಾಡಿರ್‍ಲಿಲ್ವಲ್ಲ, ನಿಮಗ್ಯಾಕೆ ಅನುಮಾನ ಬಂತು ?' ಅಂದೆ.

'ಬಟ್ಟೆ ಒಗೆಯೋವಾಗ ಜೇಬಲ್ಲಿ ಸಿನಿಮಾ ಟಿಕೆಟ್‌ಗಳು ಸಿಕ್ಕಿವೆ. ಇನ್ನೂ ಏನೇನೋ ಸಿಕ್ಕಿವೆ. ಒಂದ್ಸಲ ಅಂತೂ ಮಲ್ಲಿಗೆ ಹೂವ ಸಿಕ್ತು. ಅವರ ಷರಟಿನ ಮೇಲೆ ಉದ್ದ ಕೂದಲು ಸಿಕ್ತು' ಎಂದು ವಿಧಿ ವಿಜ್ಞಾನದ ಅಧಿಕಾರಿಣಿಯಂತೆ ವಿಶಾಲೂ ಹೇಳುತ್ತಾ ಹೋದಾಗ ವಿಶ್ವ ಸುಮ್ಮನಿದ್ದ.

'ಬೆಳಿಗ್ಗೆ ಆಫೀಸ್‌ಗೆ ಹೋಗಿರ್‍ತಾರೆ. ಸಂಜೆ ಬರೋ ಹೊತ್ಗೆ ಅವರ ಜೇಬಲ್ಲಿ ಹೂವ ಇರುತ್ತೆ. ಪರಿಮಳ ಬೇರೆ ರೀತಿ ಇರುತ್ತೆ. ಮುಖ ಅರಳಿರುತ್ತೆ. ಇದು ಹೇಗೆ ಸಾಧ್ಯ ಆಯ್ತು ?'

ವಿಶ್ವ ಮಾತಾಡಲಿಲ್ಲ. ನನಗೂ ಅನುಮಾನ ಶುರುವಾಯಿತು.

'ಅಲ್ಲ, ವಿಶ್ವ, ನೀನು ಸುಮ್ಮನಿದ್ರೆ ಒಪ್ಕೊಂಡಂತೆ ಆಗುತ್ತೆ. ಹೂವ ಯಾರು ಕೊಟ್ಟಿದ್ದು, ಅದನ್ನ ಕ್ಲಾರಿಫೈ ಮಾಡ್ಬೇಕೋ ಬೇಡ್ವೋ ?' ಎಂದಾಗ ವಿಶ್ವ ಬಾಯ್ತೆರೆದ.

'ನಾನು ಮೊದಲ 30 ವರ್ಷ ಹಕ್ಕಿ ಥರ ಹಾರಾಡ್ಕೊಂಡು, ಟೀವೀಲಿ ತೋರಿಸಿದರಲ್ಲ ಹಾಗಿದ್ದೆ. ಆಮೇಲೆ ವಿಶಾಲೂನ ಮದುವೆ ಆದೆ'

'ನಾನು ನಿಮ್ಮ ರೆಕ್ಕೆ ಪುಕ್ಕ ಕತ್ತರಿಸಿದ್ನಾ ?' ವಿಶಾಲೂ ಕೇಳಿದಳು.

'ಇವಳ್ನ ಮದ್ವೆ ಆಗಿ 30 ವರ್ಷ ಆಯ್ತು. 30 ವರ್ಷಗಳಿಂದ ಇಲ್ದೆ ಇರೋ ಅನುಮಾನ ಇತ್ತೀಚೆಗೆ ಶುರುವಾಗಿದೆ ಅವಳಿಗೆ' ಎಂದು ವಿಶ್ವ ಕಷ್ಟ ತೋಡಿಕೊಂಡ.

ಅದು ನಿಜ, ಗಂಡನ ಗಮನ ಬೇರೆ ಕಡೆ ಹೋಗ್ತಾ ಇದೆ ಅನ್ನೋವಾಗ ಹೆಂಡ್ತಿಗೆ ಅನುಮಾನ ಬರುತ್ತೆ. ಯಾಕೇಂದ್ರೆ ವಯಸ್ಸಾದಂತೆ ಪ್ರೀತಿಯ ಸೆಳೆತ ಕಡಿಮೆ ಆಗುತ್ತೆ, ಅಪ್ಪುಗೆಯ ಕಾವು ಇಳೀತಾ ಹೋಗುತ್ತೆ. ಆಗ ಹೆಂಡತಿ ಬಹಳ ಹುಷಾರಾಗಿ ಗಂಡನನ್ನು ಗಮನಿಸ್ತಾಳೆ.

'ಪ್ರತಿ ಶುಕ್ರವಾರ ಆಫೀಸಲ್ಲಿ ಪೂಜೆ ಮಾಡ್ತಾರೆ'

'ನನ್ನ ಗಂಡನಿಗೆ ಪೂಜೆ ಮಾಡ್ತಾರೆ, ಹೆಣ್ ಮಕ್ಕಳು'

'ನನಗಲ್ಲ, ಲಕ್ಷ್ಮೀ ಫೋಟೋಗೆ ವೀಕ್ಲಿ ಪೂಜೆ. ಎಲ್ರೂ ಒಂದು ರೂಪಾಯಿ, ಎರಡು ರೂಪಾಯಿ ದಕ್ಷಿಣೆ ಹಾಕ್ತಾರೆ. ನಾನು ಹತ್ತು ರೂಪಾಯಿ ಹಾಕ್ತೀನಿ. ಆ ಪೂಜಾರಿಗಳು ಒಂದಷ್ಟು ಹೂವ ಕೊಡ್ತಾರೆ. ಅದು ದೇವರ ಪ್ರಸಾದ, ಕಿವಿ ಮೇಲೆ ಭಾರ ಆಗುತ್ತೆ ಅಂತ ಜೇಬಲ್ಲಿ ಹಾಕ್ಕೊಂಡಿದ್ದೆ. ಈಕೆಗೆ ಅನುಮಾನ ಶುರು ಆಯ್ತು.'

'ಆದ್ರೆ ಆವತ್ತು ಗುರುವಾರ, ಶುಕ್ರವಾರ ಅಲ್ಲ' ಎಂದು ವಿಶಾಲು ದಬಾಯಿಸಿದಳು.

'ಶುಕ್ರವಾರ ಗುಡ್‌ಫ್ರೈಡೆ ಇತ್ತು. ಆಫೀಸಿಗೆ ಮರುದಿನ ರಜಾ ಇತ್ತು. ದೇವರಿಗೆ ಪೂಜೆ ಮಿಸ್ ಆಗಬಾರದು ಅಂತ ಹಿಂದಿನ ದಿನ ಲಕ್ಷ್ಮಿ ಪೂಜೆ ಮಾಡಿದ್ರು. ಅದರಲ್ಲೇನಿದೆ ತಪ್ಪು ?' ಎಂದು ವಿಶ್ವ ಮತ್ತೆ ಕಾರಣ ಕೊಟ್ಟ.

'ವಿಶ್ವನಿಗೆ 60ಕ್ಕೆ ಶಾಂತಿ ಆಗಬೇಕು, ನಾನು ಒಪ್ತೀನಿ' ಎಂದೆ.

'ನಾನು ಒಪ್ಪೊಲ್ಲ' ಎಂದಳು ವಿಶಾಲು.

'ಶಾಂತಿ ಯಾಕೆ ಮಾಡಿಸ್ಕೊಳ್ಬೇಕು ಅಂದ್ರೆ, ಅದು ಜೀವನದ ಪ್ರಮುಖ ಘಟ್ಟ. ನಮ್ಮ ಆಯಸ್ಸು ಎರಡು ಅರವತ್ತುಗಳಿಂದ ಕೂಡಿದೆ. 60+60 ಅಂದರೆ ಮನುಷ್ಯನ ಒಟ್ಟು ಆಯಸ್ಸು 120 ಅಂತ ಹೇಳ್ತಾರೆ. ಅರ್ಧ ದಾರಿಗೆ ಬಂದಾಗ ಒಂದು ಶಾಂತಿ ಮಾಡಿ ಅಲ್ಲಿಂದ ಒಂದು ಹೊಸ ಟರ್ನ್ ತಗೋಬೇಕು. ಅಲ್ಲಿಂದಾಚೆಗೆ ಮನುಷ್ಯ ಹೆಚ್ಚು ಸಂಭಾವಿತನಾಗ್ತಾನೆ. ಲೈನ್ ಹೊಡೆಯೋದು ಕಡಿಮೆ ಆಗುತ್ತೆ. ಎದುರು ಮನೆ ಆಂಟಿ ಹತ್ರ ಮಾತಾಡೊಲ್ಲ, ಆಚೆ ಸುತ್ತಾಡೋದು ಕಡಿಮೆ ಆಗುತ್ತೆ. ಸಿಕ್ಸ್ಟಿ ಆದ ಮೇಲೆ ಸಿಕ್ಸ್‌ಟೀ, ನೈಂಟಿ ಹಾಕೋದು ಕಂಟ್ರೋಲ್‌ಗೆ ಬರುತ್ತೆ' ಎಂದೆಲ್ಲಾ ನಾನು ವಿವರಿಸುತ್ತಾ ಹೋದೆ.

'ಅದ್ಯಾವ್ದೂ ಇವರಿಗೆ ಬೇಡ, ಶಾಂತಿ ಮಾತ್ರ ಬೇಕಂತೆ. ಅದೊಂದನ್ನೇ ಇವರು ಹಿಡ್ಕೊಂಡಿದ್ದಾರೆ'

'ಶಾಂತಿ ಬೇಕು ಅನ್ನೋದರಲ್ಲಿ ತಪ್ಪೇನೂ ಇಲ್ವಲ್ಲ ?' ಎಂದು ನಾನು ಸಮಜಾಯಿಷಿ ಕೊಟ್ಟೆ.

'ನೋಡಿ, ನೀವೂ ನಿಮ್ಮ ಫ್ರೆಂಡ್ ಥರಾನೇ ಮಾತಾಡ್ಬೇಡಿ. ಅವರು ಶಾಂತಿ ಅಂತ ಕೇಳ್ತಿರೋದು ಯಾಕೆ ಗೊತ್ತಾ ?'

'ಯಾಕೆ ?' ಎಂದು ಕೇಳಿದಳು.

'ನನ್ನ ತಂಗಿ ಫಾರಿನ್‌ನಲ್ಲಿ ಕೆಲ್ಸ ಮಾಡ್ತಾ ಇದ್ಲು. ಕೆಲ್ಸಕ್ಕೆ ರಿಸೈನ್ ಮಾಡಿ ಈ ಊರಿಗೆ ಬಂದಿದ್ದಾಳೆ. ಒಂಟಿಯಾಗಿ ಇಲ್ಲೇ ಇದ್ದಾಳೆ. ಅವಳ ಹೆಸರು ಶಾಂತಿ. ನನ್ನ ತಂಗಿ ಬೇಕು ಅಂತ ಅವರು ಕೇಳ್ತಾ ಇರೋದು' ಎಂದು ವಿಶಾಲೂ ಹೇಳಿದಾಗ ನನಗೆ ಗಾಬರಿಯಾಯ್ತು.

'ಏನು ವಿಶ್ವ, ಇದು ಸರಿಯಾ ?' ಎಂದೆ. ಆಗ ವಿಶ್ವ ತನ್ನ ಉದ್ದೇಶ ತೋಡಿಕೊಂಡ.

'ಪಾಪ, ಒಂಟಿ ಜೀವ. ಶಾಂತಿಗೆ ಮದುವೇನೂ ಆಗಿಲ್ಲ. ಜೀವನಪೂರ್ತಿ ಬೇರೆ ದೇಶದಲ್ಲಿ ಕಳೆದವಳು. ಹೆಣ್ಮಗು ಫಾರಿನ್‌ನಿಂದ ಇಲ್ಲಿಗೆ ಬಂದು ಒಂಟಿ ರೂಂ ಮಾಡ್ಕೊಂಡು ಬದುಕಿದ್ರೆ ಏನು ಚೆನ್ನಾಗಿರುತ್ತೆ ? ಆಕೆ ಜಾಯಿಂಟ್ ಫ್ಯಾಮಿಲಿಯಲ್ಲಿ ಇದ್ರೆ ಹೆಚ್ಚು ರಕ್ಷಣೆ ಸಿಗುತ್ತೆ. ನಾವೆಲ್ಲ ಸೇರಿ ನೋಡ್ಕೊಳ್ಳೋಣ ಶಾಂತಿಗೆ ಪ್ರೀತಿ ಕೊಡೋಣ ಅಂತ ನಾನೆಂದೆ. ಇವಳು ತಪ್ಪು ತಿಳೀತಾಳಲ್ಲ ?' ಎಂದಾಗ ವಿಶಾಲೂಗೆ ಮನಸು ಕರಗಿ ಹೋಯಿತು.

'ಹೌದೇನ್ರೀ ? ಎಷ್ಟು ಒಳ್ಳೆಯವರು ಕಣ್ರೀ ನೀವು ! ಆಯ್ತು ಬಿಡಿ. ಅರವತ್ತಕ್ಕೆ ನಿಮಗೆ ಶಾಂತೀನೂ ಮಾಡ್ತೀನಿ. ನನ್ನ ತಂಗಿ ಶಾಂತೀನೂ ಕರೆಸ್ತೀನಿ' ಎಂದಳು.

ವಿಶ್ವನಿಗೆ ಸಮಾಧಾನ ಆಯಿತು. ಟೀವಿ ಮತ್ತೆ ಹಾಕಿದ. ಸ್ಕೈ ಡೈವಿಂಗ್ ಕ್ಲಬ್‌ಗೆ 60 ವರ್ಷ ಆದವರು 60 ಸಾವಿರ ಕಟ್ಟಿದರೆ ಅವರ್ನ ಆಕಾಶದಲ್ಲಿ ಒಮ್ಮೆ ತೇಲಾಡಿಸ್ತಾರೆ ಎಂಬ ವಿಷಯ ಸ್ಕ್ರೋಲ್ ಆಗುತ್ತಿತ್ತು.

ವಿಶ್ವ ಆಸೆಯಿಂದ ವಿಶಾಲೂ ಕಡೆ ನೋಡಿದ.

'ಆಯ್ತು ಕಣ್ರೀ, 60 ಸಾವಿರ ನಾನೇ ಕಟ್ಟಿ ನಿಮ್ಮನ್ನ ಸ್ಕೈ ಡೈವಿಂಗ್‌ಗೆ ಕಳಿಸ್ತೀನಿ. ಇದ್ರೆ ನನ್ನ ಪುಣ್ಯ, ಬಿದ್ರೆ ನಿಮ್ಮ ಕರ್ಮ' ಎಂದಳು ! ■

# ಕೇಳುವುದು ಒಂದು, ಹೇಳುವುದು ಇನ್ನೊಂದು

● ಪ್ರಕಾಶ್ ಶೆಟ್ಟಿ

ಕೆಲವರು ಮಿತಭಾಷಿಗಳಿರುತ್ತಾರೆ. ಮಿತ ಓವರ್ ಕ್ರಿಕೆಟ್‌ನಂತಿರುತ್ತದೆ ಅವರ ಮಾತುಗಳು. ಈ ಕೆಲವರ ಗುಂಪಿಗೆ ನನ್ನನ್ನು ಸೇರಿಸಬಹುದು. ಆದರೆ ಯಾರಾದರೂ ಎದುರು ಸಿಕ್ಕಿದರೆ ನನ್ನನ್ನು ಗುಮ್ಮಾ ಎಂದು ತಿಳಿದುಕೊಳ್ಳಬಾರದೆಂಬ ಜ್ಞಾನ ಇದ್ದೇ ಇದೆ. ಹಾಗೇಂತ 'ನಾಸ್ಟ ಆಯಿತಾ?' ಎಂದು ಕೇಳುವ ಒಳ್ಳೆಯ ಅಭ್ಯಾಸ ಇಲ್ಲ. ಬೆಳಿಗ್ಗೆ ಎಲ್ಲರೂ ನಾಸ್ಟಾ ಮಾಡೇ ಮಾಡ್ತಾರೆ. ಅದನ್ನೂ ಕೇಳಬೇಕಾ? 'ಏನ್ ಸಮಾಚಾರ?' ಎಂದು ಕೇಳುವುದೂ ಅಷ್ಟೇ ಅನಗತ್ಯ ಎಂಬುದು ನನ್ನ ಅಭಿಪ್ರಾಯ. ಬೆಳಿಗ್ಗೆ ಪೇಪರು ಓದಿಯೇ ಬಂದಿರುವುದರಿಂದ, ಬೇರೆಯವರಿಂದ ಸಮಾಚಾರ ತಿಳಿದುಕೊಳ್ಳುವುದು ಏನಿದೆ? ಇಂತಹ ಅನಾವಶ್ಯಕ ಪ್ರಶ್ನೆಗಳಿಗೆ ನನಗೂ ಉತ್ತರ ಕೊಡುವುದಕ್ಕೆ ವಿಶೇಷ ಆಸಕ್ತಿ ಇಲ್ಲ.

ಲಿಫ್ಟ್‌ನೊಳಗೆ ನಾನು ಮತ್ತು ಸಹೋದ್ಯೋಗಿ ಇದ್ದೆವು. ಆತ 'ನಾಸ್ಟಾ ಆಯಿತಾ?' ಎಂದು ಕೇಳುವ ಮೊದಲೇ ನಾನು 'ಆಯಿತಾ?' ಎಂದು ಕೇಳಿದೆ. 'ಇಲ್ಲ ಸಾರ್. ಹೆಂಡತಿ ಊರಿಗೆ ಹೋಗಿದ್ದಾಳೆ. ಹೋಟೆಲ್ಗೆ ಹೋಗೋಣಾಂದ್ರೆ ಟೈಮು ಸಿಗಲಿಲ್ಲ.' ಎಂದೆಲ್ಲ ಹೇಳುವಾಗ ನಾನು ನಕ್ಕೆ. ನನ್ನ ಪ್ರಶ್ನೆಯನ್ನು ಬಿಡಿಸಿ ಹೇಳಿದೆ. 'ಅಲ್ರಿ, ದರ್ಶನ್ ಸಂದರ್ಶನ ಮಾಡೋಕೆ  ಹೋಗ್ತೀನಿ ಅಂತ ನಿನ್ನೆ ಹೇಳಿದ್ದೀರಲ್ಲ.. ಅದು ಆಯಿತಾ? ಎಂದು ಕೇಳಿದ್ದು.' ಈ ನನ್ನ ಮಿತ ಭಾಷೆಯಿಂದ ಅನೇಕರು ಫಜೀತಿಗೊಳಗಾಗಿದ್ದಾರೆ.

ಒಮ್ಮೆ ಗೆಳೆಯರೊಬ್ಬರು ಸಾಯಂಕಾಲ ಸಿಕ್ಕಿದರು. ಇಲ್ಲಿ ಸಾಯಂಕಾಲದ ಉಲ್ಲೇಖ ಯಾಕೆ ಮುಂದೆ ನಿಮಗೆ ಗೊತ್ತಾಗುತ್ತದೆ. 'ಏನ್ರೀ.. ಇನ್ನೂ ಇಲ್ಲೇ ಇದ್ದೀರಲ್ಲ!' ಅಂದೆ. ಅವರು ಕೈ ಗಡಿಯಾರ ನೋಡುತ್ತಾ 'ಹೌದಲ್ಲ, ನೀವು ನೆನಪು ಮಾಡಿದ್ದು ಒಳ್ಳೆಯದಾಯಿತು. ಮನೆಗೆ ನೆಂಟರು ಬರ್ತಾರೆ ಅಂದಿದ್ರು.' ಎಂದು ಆಟೋ ಹತ್ತಿ ಬುರ್ರನೇ ಹೊರಟೇ ಬಿಟ್ಟರು. ನಾನು ಹೇಳಿದ್ದೇ ಬೇರೆ! ಅವರು ಸಾಯಂಕಾಲವಾಯಿತಂದರೆ ಕ್ಲಬ್‌ನಲ್ಲಿರುವುದು ಸಾಮಾನ್ಯ. ಅದಕ್ಕೆ ಹಾಗೇ ಹೇಳಿದ್ದೆ.

ನಮ್ಮ ಅಪಾರ್ಟ್ಮೆಂಟ್‌ನಲ್ಲಿ ಒಬ್ಬರು ಸಿಕ್ಕಿದರು. ಹಿಂದಿನ ದಿವಸ ಅವರು ಸಂಬಂಧಿಕರೊಬ್ಬರು ಅಪಘಾತಕ್ಕೀಡಾಗಿ ಆಸ್ಪತ್ರೆಗೆ  ಅಡ್ಮಿಟ್ ಆದ ವಿಷಯ ಹೇಳಿದ್ದು ನೆನಪಾಗಿ, ಕೇಳಿದೆ. 'ಸಾರ್, ಹೋಗಿ ಬಂದ್ರಾ?'  ಅವರು ತಿಳಿದುಕೊಂಡಿದ್ದೇ ಬೇರೆ ನೋಡಿ. 'ಹೂಂ, ಹೋಗಿ ಬಂದ್ವಿ. ತುಂಬಾ ಚೆನ್ನಾಗಿ ದರ್ಶನವಾಯಿತು. ಅಷ್ಟೇನೂ ರಶು ಇರಲಿಲ್ಲ...' ಅವರ ದೇವಸ್ಥಾನ ಯಾತ್ರೆಯ ಪ್ರತ್ಯಕ್ಷ ವರದಿಯನ್ನು ಜಾಸ್ತಿ ಮುಂದುವರಿಸುವುದಕ್ಕೆ ಬಿಡದೆ ಕಡಿವಾಣ ಹಾಕಿದೆ. 'ಅಲ್ಲಲ್ಲ.. ನಾನು ಕೇಳಿದ್ದು ಆಸ್ಪತ್ರೆಗೆ ಹೋಗಿದ್ದೀರಾ ಅಂತ '

ಈ ಸಂಗತಿ ಕೇಳಿ. ನನ್ನ ಭಾವಜೀ ಮಗನಿಗೆ ಹೆಣ್ಣು ಹುಡುಕುತ್ತಿದ್ದ. ಮೊನ್ನೆ ಫೋನಾಯಿಸಿ ಕೇಳಿದೆ. 'ಹುಡುಕಾಟ ಎಲ್ಲಿವರೆಗೆ ಬಂತು?' ಅವನು ಶುರು ಮಾಡಿಯೇ ಬಿಟ್ಟ. 'ಈಗ ಪೊಲೀಸ್ ಕಂಪ್ಲೇಂಟ್ ಕೊಟ್ರೆ ಏನೂ ಪ್ರಯೋಜನ ಇಲ್ಲ. ನೋಡೋಣ, ಸಿಕ್ಕಿದ್ರೆ ಅದೃಷ್ಟ.. ಒಳ್ಳೆಯ ಸ್ಕೂಟರ್ ಮಾರಾಯ. ಯಾವತ್ತೂ ಪ್ರಾಬ್ಲಮ್ ಕೊಟ್ಟದ್ದಿಲ್ಲ...' ಸ್ಕೂಟರ್ ಕಳಕೊಂಡವನೊಬ್ಬನ ಮೇಲೆ ಅನುಕಂಪ ತೋರಿಸುವ ಉದ್ದೇಶದಿಂದ ವಿಷಯಾಂತರ ಮಾಡದೆ ಅವನ ದುಃಖ ದುಮ್ಮಾನ ಎಲ್ಲಾ ಕೇಳಿಸಿಕೊಂಡೆ.

ಇಷ್ಟೆಲ್ಲಾ ಆದರೂ ಮಿತ ಭಾಷೆ ನನಗೆ ಇಷ್ಟ. ಮಸ್ತ್ ಮಜಾ ಸಿಗುತ್ತಲ್ಲ... ಅದಕ್ಕೆ! ■